Members' Representation.

ಶ್ರೀ ಬಿ. ಚೆನ್ನಬೈರೆ ಗೌಡ (ಹೊಸಕೋಟೆ).—ಸ್ವಾಮಿ, ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ಇಲ್ಲ; ಬಾಕಿ ಮಂತ್ರಿಗಳೆಲ್ಲಾ ಎಲ್ಲಿ ಹೋದರೋ; ಬೀದಿಯಲ್ಲಿ ಜನ ಮಂತ್ರಿಗಳ ರಾಜಿನಾಮೆ ಕೊಟ್ಟರೆಂದು ಹೇಳುತ್ತಿದ್ದಾರೆ. ಅದು ಏನಾದರೂ ನಿಜವೋ?

ಶ್ರೀ ಎಸ್. ಶಿವಪ್ಪ (ಶ್ರವಣಬೆಳುಗೊಳ).—ಸಭಾಪತಿಯವರೇ, ತಮ್ಮ ಮುಖಾಂತರ ಒಂದು ವಿಷಯವನ್ನು ವಿಮರ್ಶೆ ಮಾಡಬೇಕೆಂದಿದ್ದೇನೆ. ಇದು ಬಹಳ ಮುಖ್ಯವಾದ ವಿಚಾರ. ಈ ಹೊತ್ತು ಟ್ರೆಜರಿ ಬೆಂಚಿನಲ್ಲಿ ಕೇವಲ ಒಬ್ಬ ಮಂತ್ರಿಗಳು ಮಾತ್ರ ಇದ್ದಾರೆ. ಮುಖ್ಯ ಮಂತ್ರಿಗಳು ಮತ್ತು ಇತರ ಮಂತ್ರಿಗಳು ಇಲ್ಲದಿರುವುದಕ್ಕೆ ಏನಾದರೂ ಪ್ರಬಲವಾದ ಕಾರಣವಿರಬೇಕು. ಏಕೆಂದರೆ ಈಗ ಸಭೆಯಲ್ಲಿ ನಡೆಯುತ್ತಿರುವುದು ಬಹಳ ಮುಖ್ಯವಾದ ವಿಷಯ. ದೇಶದ ಆಡಳಿತ ನೀತಿಯನ್ನು ವಿಮರ್ಶೆ ಮಾಡತಕ್ಕ ಈ ಕಾಲದಲ್ಲಿ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿಗಳಿಲ್ಲದಿರುವುದು, ಜೊತೆಗೆ ಇತರ ಮಂತ್ರಿಗಳೆಲ್ಲರನ್ನು ಕರೆದುಕೊಂಡು ಹೋಗಿರುವುದು ಸರಿಯಲ್ಲ. ಇಂಥ ಕಾರಣದಿಂದ ಅವರು ಈ ಸಭೆಯಲ್ಲಿರುವುದಕ್ಕೆ ಸಾಧ್ಯವಾಗಿಲ್ಲವೆಂಬುದನ್ನು ಈ ಸಭೆ ತಿಳಿಯುವುದಕ್ಕೆ ಅಪೇಕ್ಷೆಪಡುತ್ತದೆ; ಅದನ್ನು ಗೊತ್ತುಪಡಿಸಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರಿಗೆಲ್ಲಾ ಗೊತ್ತಿರುವ ಹಾಗೆ ಈಗ ಕೌನ್ಸಿಲ್ಲು ನಡೆಯುತ್ತಿದೆ. ಮುಖ್ಯ ಮಂತ್ರಿಗಳು ಇನ್ನು ಕೆಲವು ಮಂತ್ರಿಗಳು ಅಲ್ಲಿದ್ದಾರೆ. ಮಿಕ್ಕ ಮಂತ್ರಿಗಳು ಇನ್ನು ಸ್ವಲ್ಪ ಹೊತ್ತಿನಲ್ಲೇ ಈ ಸಭೆಗೆ ಬರುವವರಿದ್ದಾರೆ. ಇದರಿಂದಾಗಿ ಯಾರು ಈ ಸಭೆಯನ್ನು Disregard ಮಾಡಬೇಕೆಂದಾಗಲೀ, ತಾವು ಬಂದರೂ ನಡೆಯುತ್ತಿದೆ, ಇಲ್ಲದಿದ್ದರೂ ನಡೆಯುತ್ತದೆ ಎಂಬ ಭಾವನೆಯುಳ್ಳವರಾಗಲೀ ಆಗಿಲ್ಲವೆಂಬದನ್ನು ನಾನು ಈ ಸಭೆಗೆ ತಿಳಿಸಬಯಸುತ್ತೇನೆ.

Motion of Thanks to the Governor's Address.

Debate continued.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಅಧ್ಯಕ್ಷರೇ, ನಾನು ನಿನ್ನೆಯ ದಿನ ಮಾತನಾಡುವಾಗ ಪಾನನಿರೋಧದ ಬಗ್ಗೆ ಮಾತನಾಡುತ್ತಿದ್ದೆ. ಈ ಪಾನನಿರೋಧ ಶಾಸನ ಜಾರಿಗೆ ಬಂದ ಪರಿಣಾಮವಾಗಿ ದೇಶದ ಜನತೆಯಲ್ಲಿ ಅರಾಜಕತೆವುಂಟಾಗಲು ಕಾರಣವಾಗಿದೆ. ಜನಗಳಲ್ಲಿ ಕಾನೂನು ಮುಖಾಂತರವಾಗಿ ಈ ದುಷ್ಟ ಅಭ್ಯಾಸವನ್ನು ದೂರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂಬದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಪ್ರಪಂಚದ ನಾನಾ ದೇಶಗಳಲ್ಲಿ ಈ ಬಗ್ಗೆ ಪ್ರಯತ್ನ ಪಟ್ಟು ಅದು ವಿಫಲವಾದ ದೆಸೆಯಿಂದ ಪಾನನಿರೋಧ ಶಾಸನ ಮಾಡುವುದನ್ನೇ ಇತ್ತೀಚೆಗೆ ಕೈಬಿಟ್ಟಿದ್ದಾರೆ. ನಮ್ಮ ಸರ್ಕಾರದವರು ಏನು ಹೇಳುತ್ತಾರೆಂದರೆ ನಮಗೊಂದು ಕೇಂದ್ರ ಸರ್ಕಾರದಿಂದ ಡೈರೆಕ್ಟಿವ್ ಇದೆ, ಇದು ನಮ್ಮ ಪಕ್ಷದ ಬಹುಮತ ಅಭಿಪ್ರಾಯ ಮತ್ತು ನೀತಿ ಎಂದು ಹೇಳುತ್ತಾರೆ. ನಾನು ನನ್ನ ಕೆಲವು ಕಾಂಗ್ರೆಸ್ ಸ್ನೇಹಿತರಲ್ಲಿ ಖುದ್ದಾಗಿ ಈ ವಿಷಯದಲ್ಲಿ ಮಾತನಾಡಿದ್ದೇನೆ. ಪ್ರತಿ ದಿವಸವೂ ಹಳ್ಳಿಗಳಲ್ಲಿ ಕಳ್ಳ ಭಟ್ಟಿ ಸಾರಾಯಿ ಹಾವಳಿ ಜಾಸ್ತಿಯಾಗುತ್ತಿರುವುದರಿಂದ ಶಾಂತಿ ರಕ್ಷಣೆಗೆ ತೊಂದರೆ ಬಂದಿದೆ ಮತ್ತು ಭಂಗವುಂಟಾಗಿದೆ. ಇದರಿಂದ ಪೋಲೀಸಿನವರ ಆಡಳಿತವೂ ಕೆಟ್ಟು ಹೋಗಲಿಕ್ಕೆ ಕಾರಣವಾಗುತ್ತಿದೆ. ಈ ಬಗ್ಗೆ ನಾನು ಚರ್ಚೆ ಮಾಡಿದಾಗ್ಗೆ ಅನೇಕ ಜನ ಕಾಂಗ್ರೆಸ್ಸಿನವರು ವೈಯಕ್ತಿಕವಾಗಿ ಇದು ಸಫಲವಾಗುವುದಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ ಅವರ ಪಕ್ಷದಲ್ಲಿ ಅದನ್ನು ಹೇಳಿದರೆ ಅವರೆಲ್ಲಿ ಕಾಂಗ್ರೆಸ್ಸಿನ ದೃಷ್ಟಿಯಿಂದ ಕಡಮೆ ಜನರಾಗುತ್ತಾರೋ ಎಂದು ಅವರು ಈ ಸಭೆಯ ಮುಂದಾಗಲೀ ಅಥವಾ ಅವರ ಪಕ್ಷದ ಮುಂದಾಗಲೀ ಪ್ರತಿಭಟಿಸುವುದಕ್ಕೆ ತಯಾರಾಗಿಲ್ಲ. ಈ ಪಾನನಿರೋಧ ಕಾನೂನು ಒಟ್ಟಿನಲ್ಲಿ ಯಾವ ದೃಷ್ಟಿಯಿಂದಲೂ ಯಶಸ್ವಿಯಾಗಿಲ್ಲ. ಇದರಿಂದ ಇತ್ತೀಚೆಗೆ ಹೆಚ್ಚು ಜನ ಕುಡಿಯುವವರಾಗಿದ್ದಾರೆ. ಪೋಲೀಸಿನವರೇ ಕುಡಿಯುವುದಕ್ಕೆ ಹೊರಟಿದ್ದಾರೆ. ಅಂದಮೇಲೆ ಎಲ್ಲಾ ರೀತಿಯಿಂದ ನಮ್ಮ ದೇಶದ ಜನರ ನೈತಿಕ ಮಟ್ಟ ಕಡಮೆ ಮಾಡುವುದಕ್ಕೆ ದಾರಿಯಾಗಿದೆಯೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ಪಾನನಿರೋಧ ಶಾಸನವನ್ನು ರದ್ದು ಪಡಿಸಬೇಕೆಂದು ನಾನು ಸರ್ಕಾರವನ್ನು ಈ ಒತ್ತಾಯ ಪಡಿಸುತ್ತೇನೆ.

ಇನ್ನು ಪಿ. ಡಬ್ಲ್ಯು. ಡಿ. ವಿಷಯ. ಲೋಕೋಪಯೋಗಿ ಶಾಖೆಯವರು ನಮ್ಮ ದೇಶದಲ್ಲಿ ಬಹಳ ಹೆಚ್ಚಿನ ಕಾರ್ಯಗಳನ್ನು ಮತ್ತು ಕೆರೆ ಕಟ್ಟೆಗಳನ್ನು ಕಟ್ಟಿಸುವ ಕೆಲಸಗಳನ್ನೂ ಮತ್ತು ಯಾರೂ ಮಾಡದೇ ಇರುವ ಸಾಧನೆಗಳನ್ನು ಮಾಡಿದ್ದಾರೆಂದು ತಿಳಿಸುತ್ತಾರೆ. ಈ ದಿವಸ ಆ ಕೆಲಸಗಳನ್ನೆಲ್ಲಾ ಲೋಕೋಪಯೋಗಿ ಶಾಖೆಯವರು ಬಹಳ ತಮಾಷೆಯಿಂದ ನಡೆಸುತ್ತಿದ್ದಾರೆಂದು ನಾನು ಹೇಳಬೇಕಾಗಿದೆ. ಏಕೆಂದರೆ ಈ ದಿವಸ ಅವರು ಯಾವ ರೀತಿ ಹಣವನ್ನು ಖರ್ಚುಮಾಡುತ್ತಿದ್ದಾರೆಂಬುದು ನನಗೆ ಚೆನ್ನಾಗಿ ಗೊತ್ತು. ನನಗೆ ಒಬ್ಬ ಇಂಜನಿಯರ್ ಹೇಳುತ್ತಿದ್ದರು. ಯಾರು ಹೆಚ್ಚು ಹಣ ಖರ್ಚುಮಾಡಿದರೆ ಅವರು ಎಫಿಷಿಯಂಟ್ ಇಂಜಿನಿಯರ್ ಎಂದು. ಹಣ ಹೇಗೆ ಖರ್ಚುಮಾಡಿದರೂ ಜಾಸ್ತಿ ಹಣ ಯಾರು ಖರ್ಚು ಮಾಡಿದರೆ ಅವರು ಬಹಳ ಎಫಿಷಿಯಂಟ್ ಎಂದು ಅರ್ಥ ಹೇಳುತ್ತಿದ್ದರು. ಸುಮಾರು 20 ವರ್ಷಗಳಿಂದಲೂ ಎಷ್ಟೋ ಕೆರೆಗಳು ರಿಪೇರಿಯಾಗದೆ ಹಾಗೆಯೇ ಬಿದ್ದಿವೆ. ಕೆರೆಗಳನ್ನು ದುರಸ್ತುಮಾಡುವ ಯೋಚನೆಗೆ ಪಿ. ಡಬ್ಲ್ಯು. ಡಿ ಯವರು ಹೋಗಲೇ ಇಲ್ಲ. ಯಾರಾದರೂ ಒಬ್ಬ ದೊಡ್ಡ ಕಂಟ್ರಾಕ್ಟರ್ ಅಥವಾ ಒಬ್ಬ ದೊಡ್ಡ ಮನುಷ್ಯ ಇರುವ ಕಡೆ ಪ್ರತಿ ವರ್ಷವೂ ಕೆರೆ ರಿಪೇರಿಯಾಗುತ್ತದೆ. ಒಂದು ವೇಳೆ ಆ ಒಬ್ಬ ಕಂಟ್ರಾಕ್ಟರ್ ಕಾಂಗ್ರೆಸ್ ಪಕ್ಷಕ್ಕೆ ಸೇರಿದವನಾಗಿದ್ದರೆ ಬೇಕಾದಷ್ಟು ಹಣವನ್ನು ಸರ್ಕಾರದಿಂದ ಪಡೆದು ಕೆರೆಯ ದುರಸ್ತಿ ಕಾಮಗಾರಿಯನ್ನು ನಡೆಸಿಕೊಳ್ಳುತ್ತಾನೆ. ಈ ರೀತಿಯಲ್ಲಿ ಹಣವನ್ನು ದುರ್ವ್ಯಯ ಮಾಡಿ ಅವರ ಪಕ್ಷದ ಕಂಟ್ರಾಕ್ಟರುಗಳಿಗೆ ಅನುಕೂಲ ಮಾಡಿಕೊಡುತ್ತಾರೆ. ಖಂಡಿತವಾಗಿ ಇಂಥಾದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಯಾವಾಗಲೇ ಆಗಲಿ ಯಾವ ಒಬ್ಬ ಇಂಜನಿಯರನ್ನು ಕೇಳಿದರೂ ಆತನು ತನ್ನ ಕಾರ್ಯ ಕ್ಷೇತ್ರದಲ್ಲಿ ಎಷ್ಟೆಷ್ಟು ಕೆರೆಗಳಿವೆ, ಯಾವ್ಯಾವ ಕೆರೆಗಳು ದುರಸ್ತು ಆಗಿವೆ, ಯಾವ್ಯಾವ ಕೆರೆಗಳು ಇನ್ನೂ ದುರಸ್ತು ಆಗಲಿಲ್ಲ ಎಂಬುದನ್ನು

ತಿಳಿದುಕೊಂಡು ಕೂಡಲೇ ಉತ್ತರ ಹೇಳುವುದಕ್ಕೆ ತಯಾರಾಗಿರಬೇಕು. ಈಗಿನ ಇಂಜನಿಯರುಗಳನ್ನು ಏನಾದರೂ ಆರೀತಿ ಕೇಳಿದರೆ ಯಾವ ಕೆರೆ ಇದೆಯೋ, ಯಾವ ಕೆರೆ ಇಲ್ಲವೋ ಏನೂ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೆರೆಗಳು ಎಲ್ಲೆಲ್ಲಿವೆಯೆಂಬುದೇ ಅವರಿಗೆ ಗೊತ್ತಿರುವುದಿಲ್ಲ. ಸುಮ್ಮನೆ ಅನ್ಯಾಯವಾಗಿ ಸರ್ಕಾರದ ಹಣ ದುರುಪಯೋಗವಾಗುತ್ತಿದೆ. ಮತ್ತು ಕಂಟ್ರ್ಯಾಕ್ಟುದಾರರಿಗೆ ಮಾತ್ರ ಒಂದು ರೀತಿಯಲ್ಲಿ ಹಣ ಸಂಪಾದನೆ ಮಾಡಿಸಿಕೊಡುವುದಕ್ಕೆ ಅನುಕೂಲವಾಗಿದೆಯೇ ಹೊರತು ಮತ್ತೇನೂ ಇಲ್ಲ. ಇಂಥಾದ್ದಕ್ಕೆಲ್ಲಾ ಅವಕಾಶ ಮಾಡಿ ಕೊಡುವುದು ಸರಿಯಲ್ಲವೆಂದು ನನ್ನ ಭಾವನೆ.

ಇನ್ನು ಕೊನೆಯದಾಗಿ ಹೇಳುವುದು ಒಂದು ವಿಷಯ. ಮೊನ್ನೆ ಒಂದು ಸಂದರ್ಭದಲ್ಲಿ ತಿಳಿಸಿದ ರೀತಿಯಲ್ಲಿ ಕೋಲಾರ ಜಿಲ್ಲೆ ಪ್ರತಿ ವರ್ಷವೂ ಕ್ಷಾಮದ ಭಾದೆಯಿಂದ ಪರಿತಪಿಸುತ್ತಾ ಇದೆ. ಒಂದು ವರ್ಷ ಬೆಳೆಯಾದರೆ ಇನ್ನೆರಡು ಮೂರು ವರ್ಷಗಳು ಬೆಳೆಯಾಗುವುದಿಲ್ಲ. ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಾಗ್ಗೆ ಈ ಜಿಲ್ಲೆಯ ಪರಿಸ್ಥಿತಿಯನ್ನು ತಿಳಿಸಿ ಒಂದು ಸ್ಟ್ಯಾಟುಟರಿ ಬೋರ್ಡನ್ನು ಕೋಲಾರದಲ್ಲಿ ರಚನೆ ಮಾಡಬೇಕೆಂದು ಸರ್ಕಾರವನ್ನು ಅನೇಕ ಸಾರಿ ಕೇಳಿದೆ. ಆ ರೀತಿ ನಾವು ಕೇಳಿ ಎಷ್ಟೋ ಕಾಲವಾಗಿದ್ದರೂ ಸರ್ಕಾರ ಇದರ ಬಗ್ಗೆ ತುಂಬಾ ಅಸಡ್ಡೆ ರೀತಿಯಲ್ಲಿ ವರ್ತಿಸುತ್ತಿದೆ. ಕೋಲಾರದಲ್ಲಿ ಜನ ಕ್ಷಾಮಬಾಧೆಯಿಂದ ನರಳುತ್ತಿದ್ದರೂ ಸರ್ಕಾರದವರು ಇದುವರೆಗೆ ಏನೂ ಕ್ರಮ ತೆಗೆದುಕೊಳ್ಳದೇ ಇರುವುದಕ್ಕಾಗಿ ನಾನು ತುಂಬಾ ವಿಷಾದಪಡುತ್ತೇನೆ. ಈ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಮಳೆ ಸಾಕಷ್ಟು ಆಗದೆ ತರೀ, ಖುಷ್ಕಿ ಬೆಳೆಯೆಲ್ಲಾ ಹಾಳಾಗಿ ಹೋಗಿದೆ. ಬೆಳೆ ಹೋದರೂ ರೆಮಿಷನ್ 'ಆರ್ಡರ್' ಇದುವರೆಗೂ ಸರ್ಕಾರದಿಂದ ಬರಲಿಲ್ಲ. ಶ್ಯಾನುಬೋಗರು ಮತ್ತು ಪಟೇಲರು ಅವರೇನೋ ಹಣವನ್ನು ಬಲಾತ್ಕಾರವಾಗಿ ವಸೂಲು ಮಾಡುತ್ತಿದ್ದಾರೆ. ನಾನು ಕಾಂಗ್ರೆಸ್ ಮುಖಂಡರನ್ನು ಕೇಳಿದರೆ ರೆಮಿಷನ್ ಕೊಡುತ್ತೇವೆಂದು ತೀರ್ಮಾನವಾಗಿದೆಯೆಂದು ಹೇಳಿದರು. ಅದನ್ನು ಎಲ್ಲಿ ಕೊಡುತ್ತಾರೋ ನನಗೆ ಯಾವುದೂ ಗೊತ್ತಿಲ್ಲ. ಆ ಬಗ್ಗೆ ಕೂಡಲೇ ಆರ್ಡರ್ ಪಾಸ್ ಮಾಡಿ. ಬೆಳೆ ಇಲ್ಲದೇ ಇರುವಕಡೆಗೆ ರೆಮಿಷನ್ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ. ಈಗ ಮಲೆನಾಡು ಇಂಪ್ರೂವ್‌ಮೆಂಟ್ ಬೋರ್ಡ್ ಎಂಬುದಾಗಿ ಮಾಡಿದ್ದೀರಿ. ಹಾಗೆಯೇ ಕೋಲಾರ ಡೆವಲಪ್‌ಮೆಂಟ್ ಬೋರ್ಡ್ ಎಂಬುದಾಗಿ ರಚಿಸಿ ಅಲ್ಲೊಂದು ಪ್ರತ್ಯೇಕವಾದ ಒಂದು ಸ್ಟ್ಯಾಟುಟರಿ ಬೋರ್ಡನ್ನು ನೇಮಿಸಿ ಅದರ ಮುಂಖಾಂತರ ಅಲ್ಲಿ ಹೆಚ್ಚಿಗೆ ಬಾವಿಗಳನ್ನು ತೋಡಿಸುವುದಕ್ಕೋಸ್ಕರ ಮತ್ತು ಕ್ಷಾಮ ಪರಿಹಾರಕ್ಕೆ ತಕ್ಕ ಕಾರ್ಯಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ನಡೆಸುವುದಕ್ಕೋಸ್ಕರ ಸೂಕ್ತ ಕ್ರಮವನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಶಾಶ್ವತವಾದ ಪರಿಹಾರ ಜನಗಳಿಗೆ ದೊರೆಯಬೇಕಾದರೆ ಯಾವುದಾದರೂ ಒಂದು ಕೈಗಾರಿಕೆಯನ್ನು ಖಂಡಿತವಾಗಿ ಸ್ಥಾಪನೆ ಮಾಡಬೇಕೆಂದು ಬಹಳ ದಿವಸಗಳಿಂದಲೂ ಹೇಳುತ್ತಿದ್ದೇನೆ. ಆದರೆ ಅನೇಕ ಕೈಗಾರಿಕೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರೀಕೃತವಾಗುತ್ತಿವೆಯೇ ಹೊರತು ಬೇರೆ ಊರುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುತ್ತಿಲ್ಲ. ಬೆಂಗಳೂರಿನಲ್ಲಿಯೇ ಬೇಕಾದಷ್ಟು ಕೈಗಾರಿಕೆಗಳನ್ನು ಸರ್ಕಾರದವರು ಸ್ಥಾಪನೆ ಮಾಡಿದ್ದಾರೆ. ಅದಲ್ಲದೆ ಬೇರೆ ಊರುಗಳಲ್ಲಿ ಯಾವುದಾದರೂ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದ ಅಧಿಕಾರಿಗಳು ಯಾರೇ ಆಗಲೀ ಶಿಫಾರ್ಸು ಮಾಡುವುದಿಲ್ಲ. ನಮ್ಮ ಸರ್ಕಾರಕ್ಕೆ ಈ ಟೆಕ್ನಿಕಲ್ ಅಡ್ವೈಜರ್ಸನ್ನು ಬಿಟ್ಟು ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕ ಧೈರ್ಯವೂ ಇಲ್ಲ. ಒಟ್ಟಿನಲ್ಲಿ ಬೆಂಗಳೂರಿನಲ್ಲಿಯೇ ಎಲ್ಲ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದು ಸರಿಯಲ್ಲ. ಕೋಲಾರದಲ್ಲಿ ಕೊನೆಯಪಕ್ಷ ಸದ್ಯಕ್ಕೆ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರಿಂದ ಕ್ಷಾಮದಿಂದ ಬಾಧೆ ಪಡುತ್ತಿರುವ ಜನಗಳಿಗೆ ಒಂದು ಸಹಾಯ ದೊರೆತಂತಾಗುತ್ತದೆಂದು ನಾನು ಹೇಳುತ್ತೇನೆ. ಆದರೆ ಇಷ್ಟು ಕೈಗಾರಿಕೆಗಳನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡುತ್ತಿದ್ದರೂ ಅನೇಕ ಬಡ ಜನಗಳು ಬೇಕಾದಷ್ಟು ಅರ್ಜಿಗಳನ್ನು ಹಾಕಿಕೊಂಡಿದ್ದರೂ ಸಹ ಅವರಿಗೆ ಕೆಲಸಗಳು ಸಿಕ್ಕುತ್ತಿಲ್ಲ.

ನಮ್ಮ ದೇಶದಲ್ಲಿರುವ ಕೈಗಾರಿಕೆಗಳಲ್ಲಿ ನಮ್ಮ ದೇಶದ ಜನಗಳಿಗೇ ಕೆಲಸ ಸಿಕ್ಕುವುದಿಲ್ಲ. ಕೇರಳ ಮತ್ತು ಮದ್ರಾಸ್ ಪ್ರಾಂತಗಳಿಂದ ಬಂದಿರುವವರಿಗೆ ಅತಿ ಜಾಗ್ರತೆ ಕೆಲಸಗಳು ಸಿಕ್ಕುತ್ತಿವೆಯೇ ಹೊರತು ನಮ್ಮ ದೇಶದ ಜನಗಳಿಗೆ ಸಾಕಷ್ಟು ಉದ್ಯೋಗಗಳು ದೊರೆಯುತ್ತಾ ಇಲ್ಲ. ಆದ್ದರಿಂದ ಕೈಗಾರಿಕಾ ಸಂಸ್ಥೆಗಳಲ್ಲಿ ನಮ್ಮ ರಾಜ್ಯದ ಜನಗಳಿಗೆ ಕೆಲಸ ಸಿಕ್ಕುವಂತೆ ಅವಕಾಶ ಮಾಡಿಕೊಡಬೇಕು ಮತ್ತು ಕೆಲವಾರು ಉದ್ಯೋಗಗಳನ್ನು ನಮ್ಮ ರಾಜ್ಯದ ಜನತೆಗೆ ರಿಜರ್ವ್ ಮಾಡಬೇಕು. ಏಕೆಂದರೆ ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬೇಕಾಗಿದೆ. 4-6 ವರ್ಷಗಳಾದರೂ ಎಸ್. ಎಸ್. ಎಲ್. ಸಿ. ಮತ್ತು ಯೂನಿವರ್ಸಿಟಿ ಪಾಸ್ ಆದವರಿಗೆ ಕೆಲಸಗಳು ದೊರೆಯುತ್ತಿಲ್ಲ. ಇದರಿಂದ ಅವರು ಬೀದಿ ಬೀದಿ ಅಲೆದಾಡಿಕೊಂಡು ಕಾಲಹರಣೆ ಮಾಡುತ್ತಿದ್ದಾರೆ. ಅಂತಹವರಿಗೆಲ್ಲರಿಗೂ ಕೆಲಸ ದೊರಕಿಸಿಕೊಡುವುದಕ್ಕಾಗಿ ಕೇಂದ್ರದಿಂದ ಹಣ ಸಹಾಯವನ್ನು ಪಡೆಯಲು ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಎಲ್ಲಾ ಕೈಗಾರಿಕೆಗಳನ್ನೂ ಕೇವಲ ಬೆಂಗಳೂರಿನಲ್ಲಿಯೇ ಸ್ಥಾಪನೆ ಮಾಡುವ ನಿಯಮವನ್ನು ಬಿಟ್ಟು ಜಿಲ್ಲಾ ಹೆಡ್ ಕ್ವಾರ್ಟರ್ಸ್‌ಗಳಲ್ಲ ಅದರಲ್ಲೂ ಮುಖ್ಯವಾಗಿ ಕೋಲಾರ ಜಿಲ್ಲೆ ಕ್ಷಾಮ ಪೀಡಿತ ಪ್ರದೇಶವಾಗಿರುವುದರಿಂದ ಕೋಲಾರದಲ್ಲಿ ಅತಿ ಜಾಗ್ರತೆಯಾಗಿ ಒಂದು ದೊಡ್ಡ ಕೈಗಾರಿಕೆಯನ್ನು ಸ್ಥಾಪನೆ ಮಾಡುವ ವಿಷಯದಲ್ಲಿ ಸರ್ಕಾರ ಹೆಚ್ಚಿಗೆ ಗಮನ ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಅಧ್ಯಕ್ಷರೇ, ಹೋಳಿ ಹುಣ್ಣಿಮೆಯ ಜ್ಞಾಪಕಾರ್ಥವಾಗಿ ರಂಗುರಂಗಿನ ಈ ರಾಜಕೀಯ ಉಡುಗೊರೆಯನ್ನು ರಾಜ್ಯಪಾಲರು ಅಭಿಮಾನದಿಂದ ನಮಗೆ ನೀಡಿದ್ದಾರೆ. ನಾವು ಕನ್ನಡಿಗರು. ಶಿಷ್ಟ ಸಂಪ್ರದಾಯವಾದಿಗಳು, ವಿಶ್ವಾಸದಿಂದ ತೆಗೆದುಕೊಳ್ಳಬೇಕಾಗಿದೆ. ಈ ಬಗ್ಗೆ ರಾಜ್ಯಪಾಲರಿಗೆ ವಂದನೆ ಸಲ್ಲಿಸುವ ಮುಂಚೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಮತ್ತು ಅದರಲ್ಲಿ ಎದ್ದು ಕಾಣುವ ಒಂದೆರಡು ಲೋಪ ದೋಷಗಳನ್ನು ಹೇಳಲೇಬೇಕಾಗಿದೆ. ಈ ರೀತಿ ಲೋಪದೋಷಗಳನ್ನು ಹೇಳುವುದರಿಂದ ಜನತೆಗೆ ಉಪಕಾರವಾದೀತೇ ಹೊರ್ತು ಅಪಕಾರವಾಗುವುದಿಲ್ಲ. ಈ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಸಂದರ್ಭದಲ್ಲಿ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಬ್ಬ ರಾಜರು ಊರಿನಲ್ಲಿ ಮೆರವಣಿಗೆ ಹೋಗುತ್ತಿದ್ದಾಗ ಒಂದು ಕಲ್ಲು ಬಿತ್ತು. ಆ ಕಲ್ಲು ಎಲ್ಲಿಂದ ಬಿತ್ತು ಎಂದು ನೋಡಿದಾಗ ಒಬ್ಬ ಮುದುಕಿಯ ಮಗ ಹಣ್ಣಿನ ಮರಕ್ಕೆ ಕಲ್ಲನ್ನು ಎಸೆದಿದ್ದು ಸೀದಾ ರಾಜನ ಮೇಲೆ ಬಿತ್ತು ಎಂಬುದಾಗಿ ತಿಳಿದು ಬಂತು. ಆಗ ಕೂಡಲೇ ಆ ಮುದುಕಿಯನ್ನು ರಾಜನ ಮುಂದೆ ಕರೆತರಲು ಮಂತ್ರಿಗಳಿಗೆ ಆಜ್ಞೆಯಾಯಿತು. ಮುದುಕಿ ಬಂದೊಡನೆ ಅದನ್ನು ವಿಚಾರಿಸಿದಾಗ ಮುದುಕಿ ನನ್ನ ಮಗ ಅನೇಕ ದಿವಸಗಳಿಂದ ಉಪವಾಸ ಮಾಡುತ್ತಿದ್ದಾನೆ. ಆದ್ದರಿಂದ ಆ ಹಣ್ಣಿನ ಮರಕ್ಕೆ ಕಲ್ಲೆಸೆದು ಆ ಹಣ್ಣನ್ನಾದರೂ ಕಿತ್ತು ತಿಂದು ಜೀವಿಸೋಣವೆಂದು ಹೇಳಿದಳು. ಆಗ ರಾಜನ ಮನಸ್ಸು ಕರಗಿ ಅವಳಿಗೆ ಒಂದು ಸಾವಿರ ವರಹಗಳನ್ನು ಕೊಡುವಂತೆ ಮಂತ್ರಿಗಳಿಗೆ ಸೂಚನೆ ಕೊಟ್ಟದ್ದನ್ನು ಕೇಳಿ ಮಂತ್ರಿಗಳಿಗೇ ಆಶ್ಚರ್ಯವಾಯಿತು. ಆ ರೀತಿ ನಿರ್ಜೀವ ವಸ್ತುವಿನಿಂದ ಅವರು ಜೀವನ ಮಾಡುತ್ತಿರುವಾಗ ನಾನು ಸಜೀವನಾಗಿದ್ದು ಅಂತಹವರ ಕಷ್ಟವನ್ನು ಕೇಳದೇ ಹೋದರೆ ತುಂಬಾ ಅನ್ಯಾಯಮಾಡಿದಂತಾಗುತ್ತದೆಂದು ರಾಜರು ಹೇಳಿದರು. ಹಾಗೆ ರಾಜ್ಯಪಾಲರ ಭಾಷಣದಲ್ಲಿರುವ ಅಲ್ಪಸ್ವಲ್ಪ ಕುಂದು ಕೊರತೆಗಳನ್ನು ನಾನು ಈ ಸಭೆಯಲ್ಲಿ ಹೇಳಿದರೆ ಜನತೆಗೆ ಉಪಕಾರವಾದೀತು ಎಂದು ತಿಳಿದು ನಾನು ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ರಾಜ್ಯಪಾಲರ ಭಾಷಣದಲ್ಲಿ ಮುತ್ತುಗದ ಹೂವಿನಲ್ಲಿರುವ ಕೊರತೆಯಂತೆ ಒಂದು ನ್ಯೂನತೆ ಎದ್ದು ಕಾಣುತ್ತಿದೆ, ತೂಕ, ಅಳತೆಗಳ ಮೆಟ್ರಿಕ್ ಪದ್ಧತಿ ಜಾರಿಗೆ ತರುವಂತಹ ವಿಚಾರವನ್ನು ಮರೆಯದೆ ರಾಜ್ಯಪಾಲರು ಹೇಳಿರುವಾಗ ಬೆಳೆಯುತ್ತಿರುವ ಬೃಹದ್ ಬೆಂಗಳೂರಿನ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ಏನೂ ಹೇಳದಿರುವುದಕ್ಕೆ ವಿಷಾದಿಸಬೇಕಾಗಿದೆ. ಬೆಂಗಳೂರು ನಾಡಿನ ರಾಜಧಾನಿ. 14 ಲಕ್ಷ ಪ್ರಜಾಸಂಖ್ಯೆಯಿದೆ. ಬೃಹದಾಕಾರವಾಗಿ ದಿನೇ ದಿನೇ ಬೆಳೆಯುತ್ತಿದೆ. ಬೆಂಗಳೂರಿನ ಪ್ರಜೆಗಳು ನೀರಿಗಾಗಿ ಕಣ್ಣೀರಿಡುತ್ತಿದ್ದಾರೆ. ಘನ ಸರ್ಕಾರದವರೇ ನಿಮ್ಮ ದಮ್ಮಯ್ಯ, ಬೆಂಗಳೂರಿಗೆ ಕಾವೇರಿಯಿಂದ ನೀರನ್ನು ಒದಗಿಸಿಕೊಡಿ ಎಂದು ನಗರವಾಸಿಗಳು ಒಕ್ಕೊರಲಿನಿಂದ ಕೇಳುತ್ತಿದ್ದಾರೆ. ಇಂತಹ ಮಹತ್ವದ ಪ್ರಶ್ನೆ ರಾಜ್ಯಪಾಲರ ಭಾಷಣದಲ್ಲಿ ನುಣುಚಿಕೊಂಡಿರುವುದಕ್ಕಾಗಿ ಆಶ್ಚರ್ಯ ಪಡಬೇಕಾಗಿದೆ. ಬೆಂಗಳೂರಿನ ನೀರಿನ ಪ್ರಸ್ತಾಪವಿಲ್ಲದ ಯಾವುದೇ ಭಾಷಣವಾಗಲೀ ದೇವರಿಲ್ಲದ ದೇಗುಲದಂತೆ ಎಂದು ಹೇಳಬೇಕಾಗಿದೆ. ಈ ವಿಚಾರದಲ್ಲಿ ರಾಜ್ಯಪಾಲರು ಕರುಣೆಯಿಂದ ದೃಷ್ಟಿಹರಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಎದ್ದು ಕಾಣುವ ಮತ್ತೊಂದು ಕೊರತೆ ಎಂದರೆ ನಮ್ಮ ನಾಡಿಗೆ ''ಕರ್ನಾಟಕ'' ಎಂಬ ಹೆಸರಿನ ಪ್ರಸ್ತಾಪ ಮಾಡದೇ ಇರುವುದು. ಇದು ನಮ್ಮ ಸಾಹಿತ್ಯ, ಸಂಸ್ಕೃತಿ, ಹಿರಿಮೆ, ಇತಿಹಾಸ, ಓಜಸ್ಸು, ತೇಜಸ್ಸುಗಳಿಗೆ ಸಂಬಂಧಪಟ್ಟ ನಾಡಿನ ಆತ್ಮಾಭಿಮಾನದ ಪ್ರಶ್ನೆ. ಇಂತಹ ಮಹತ್ವದ ಪ್ರಶ್ನೆಯನ್ನು ಪ್ರಸ್ತಾಪಿಸದಿರುವುದಕ್ಕೆ ತುಂಬಾ ವಿಷಾದಿಸಬೇಕಾಗಿದೆ. ಇದಿಲ್ಲದೆ ಏನು ಹೇಳಿದರೂ ಮುಳುಗುವವನಿಗೆ ಹುಲ್ಲುಕಡ್ಡಿಯ ಆಧಾರ ತೋರಿಸಿದಂತೆ ಎಂದು ಭಾವಿಸಿದ್ದೇನೆ. ಮುಂದಿನ ಸಾರಿಯಾದರೂ ಪ್ರಸ್ತಾಪಿಸಿ ಕನ್ನಡಿಗರ ಆದರ ಅಭಿಮಾನ ವಿಶೇಷ ಗೌರವಗಳನ್ನು ರಾಜ್ಯಪಾಲರು ಸ್ವೀಕರಿಸಲೆಂದು ನಮ್ರತೆಯಿಂದ ವಿನಂತಿಸುತ್ತೇನೆ.

ಕನ್ನಡಿಗರ ಬಹುದಿನದ ಕೋರಿಕೆಯಾದ ಹಾಸನ-ಮಂಗಳೂರು ರೈಲ್ವೆ ವಿಚಾರದ ಬಗ್ಗೆ ಚಕಾರಶಬ್ದವೂ ರಾಜ್ಯಪಾಲರ ಭಾಷಣದಲ್ಲಿಲ್ಲದಿರುವುದು ಸೋಜಿಗವಾಗಿದೆ. ತೃತೀಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತೆಗೆದುಕೊಳ್ಳಬೇಕಾಗಿರುವ ಈ ಪ್ರಸಂಗದಲ್ಲಿ ರಾಷ್ಟ್ರದ ಸೂತ್ರಧಾರಿಗಳಾದ ರಾಜ್ಯಪಾಲರ ದೃಷ್ಟಿಯಲ್ಲಿ ಸರ್ವಸಮನ್ವಯತೆ ಇರಬೇಕೆಂಬುದು ನಮ್ಮ ಕೋರಿಕೆ, ಈ ಕೋರಿಕೆಯನ್ನು ರಾಜ್ಯಪಾಲರ ಗಮನಕ್ಕೆ ತರಬೇಕಾಗಿ ನಮ್ಮ ಸರ್ಕಾರದವರಿಗೆ ಮನವಿ ಮಾಡುತ್ತೇನೆ.

ಕೃಷ್ಣಾ-ಗೋದಾವರಿ ನದೀ ಪಾತ್ರದ ಸಂಬಂಧವಾಗಿ ನಮ್ಮ ರಾಜ್ಯಕ್ಕಿರುವ ನದೀ ತೀರದ ಒಡೆತನದ ಹಕ್ಕುಗಳ ವಿಚಾರವಾಗಿ ಹೇಳುವುದಾದರೆ ಎಂದು ರಾಜ್ಯಪಾಲರ ಭಾಷಣದ ಪೇಜು 14-ಪ್ಯಾರಾ 24 ರಲ್ಲಿ ಮುದ್ರಣವಾಗಿದೆ. ನದೀ ತೀರದ ಒಡೆತನದ ಹಕ್ಕು ಎನ್ನುವುದರ ಬದಲು ನದೀ ನೀರಿನ ಬಳಕೆಯ ಒಡೆತನದ ಹಕ್ಕು ಎಂದಿದ್ದರೆ ಸ್ಪಷ್ಟವಾಗಿ ಅರ್ಥವಾಗುತ್ತಿತ್ತು. ಚಿರತೆಯಲ್ಲ, ಇದು ನಮ್ಮ ರಾಷ್ಟ್ರದ ಜೀವಾಳದ ಪ್ರಶ್ನೆ. ಈ ಪ್ರಶ್ನೆಯನ್ನು ಬಗೆಹರಿಸಲು, ಒಂದು ನ್ಯಾಯಾಧಿಕರಣ ಬಹುಶಃ ನ್ಯಾಯಾಧಿಕರಣ ಎಂದರೆ, ಸ್ವತಂತ್ರ ನ್ಯಾಯ ತೀರ್ಮಾನ ಮಂಡಲಿ ಎಂದು ನಾವು ಭಾವಿಸೋಣ. ಒಂದು ನ್ಯಾಯಾಧಿಕರಣವನ್ನು ನೇಮಕ ಮಾಡಬೇಕೆಂದು ಕೋರಿ ಭಾರತ ಸರ್ಕಾರದವರಿಗೆ ಒಂದು ಔಪಚಾರಿಕ ಮನವಿ ನಮ್ಮ ಸರ್ಕಾರದವರು ಕಳುಹಿಸಿರುವುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ್ದಾರೆ, ತುಂಬಾ ಸಂತೋಷ. ಔಪಚಾರಿಕ ಕೋರಿಕೆಗಿಂತಲೂ ಆಗ್ರಹದ ಒತ್ತಾಯದ ಕೋರಿಕೆ ಸಲ್ಲಿಸಿದರೆ ನಾವು ಅತ್ಯಂತ ಸಂತೋಷ ಪಡುತ್ತೇವೆಂದು ವಿನಂತಿಸುತ್ತೇನೆ.

ವಂಶ ಪಾರಂಪರ್ಯ ಬಂದಿದ್ದ ಗ್ರಾಮಾಧಿಕಾರಿಗಳ ಹುದ್ದೆ ರದ್ದುಮಾಡುವ ಕಾನೂನು ಮುಂದಿನ ಸಾಲಿನಿಂದ ಜಾರಿಗೆ ತರುವುದಾಗಿ ರಾಜ್ಯಪಾಲರು ಪ್ರಸ್ತಾಪಿಸಿದ್ದಾರೆ; ಸಂತೋಷ. ಆದರೆ ಭೂಸುಧಾರಣೆ ಜಾರಿಗೆ ಬರುವುದರೊಳಗಾಗಿ ಜಮೀನು ಮಾರಾಟ, ಜಮೀನು ಹಂಚಿಕೆ ವಗ್ಗೈರೆ ನಡೆದಂತೆ, ಇದ್ದ-ಬಿದ್ದ ಲೆಕ್ಕ ಪತ್ರಗಳು ಬಾಕಿ ಸಾರಗಳು ಗೇಣಿ ಶಾನುಭೋಗರಿಂದ ಮಾಯವಾಗದಂತೆ ನೋಡಿಕೊಳ್ಳುವ ಕಾರ್ಯಕ್ರಮ ಏನಾದರೂ ತೆಗೆದುಕೊಳ್ಳುವುದು ಸೂಕ್ತವೆಂದು ನನ್ನ ಅಭಿಪ್ರಾಯ. ಇಲ್ಲವಾದಲ್ಲಿ ಊರೆಲ್ಲಾ ಕೊಳ್ಳೆಯಾದ ಮೇಲೆ ಊರು ಬಾಗಿಲು ಹಾಕಿದಂತಾಗುತ್ತದೆ.

ರಾಜ್ಯದ ಆಹಾರ ಧಾನ್ಯಗಳ ಪರಿಸ್ಥಿತಿ ಹತೋಟಿಗೆ ಬಂದು ಸುಧಾರಿಸಿದೆಯೆಂದು ರಾಜ್ಯಪಾಲರು ಭಾಷಣದಲ್ಲಿ ಹೇಳಿದ್ದಾರೆ. ಬಹುಶಃ ಸಾಕಷ್ಟು ಆಹಾರ ಧಾನ್ಯಗಳು ದೊರೆಯುತ್ತಿವೆ ಎಂಬರ್ಥದಲ್ಲಿ ಹೇಳಿರಬಹುದು. ಕಾವೇರಿ ನದಿಯಲ್ಲಿ ಬೇಕಾದಷ್ಟು ನೀರಿದೆ. ಆ ನೀರು ಬೆಂಗಳೂರಿನವರಿಗೆ ಕುಡಿಯಲು ದೊರೆಯಬೇಕಲ್ಲವೇ ? ಆಹಾರ ಧಾನ್ಯ ಬಡಬಗ್ಗರಿಗೆ ನ್ಯಾಯವಾದ ಬೆಲೆಯಲ್ಲಿ ದೊರೆಯಬೇಕಲ್ಲವೇ ? ಆಹಾರಧಾನ್ಯ ಸಾಕಷ್ಟಿದೆ. ಧಾರಣೆ ವಾಸಿಗಳು ಏರಿವೆ, ಬಡಬಗ್ಗರು ಕಣ್ಣು ಬಿಡುತ್ತಿದ್ದಾರೆ. ಉದ್ದನೆ ಮೂತಿಯ ಕೊಕ್ಕರೆಗೆ ತಟ್ಟೆಯಲ್ಲಿ ನೀರು ಹಾಕಿ ಬೇಕಾದಷ್ಟು ಕುಡಿ ಎಂದಂತಾಗಿದೆ, ಆಹಾರ ಧಾನ್ಯಗಳ ಪರಿಸ್ಥಿತಿ

ಸುಧಾರಿಸಿರುವ ವಿಚಾರ. ಇಂತಹ ಸುಧಾರಿಕೆ ಬೇಡ. ಬೆಲೆಗಳು ಏರುವುದನ್ನು ತಡೆಯುವ ಕಾರ್ಯಕ್ರಮ ಕೈಕೊಂಡು ಧಾರಣೆವಾಸಿಗಳು ಒಂದು ಸ್ಥಿಮಿತದಲ್ಲಿರುವಂತೆ ಮಾಡುವುದು ಸೂಕ್ತವೆಂದು ಹೇಳ ಬಯಸುತ್ತೇನೆ.

ಪ್ರತಿಯೊಂದು ಜಿಲ್ಲೆಯ ನಲುವಾಗಿ ಉದ್ಯೋಗಗಳನ್ನು ದೊರಕಿಸಿ ಕೊಡುವ ಒಂದು ಸಂಸ್ಥೆಯು ಇರಬೇಕೆಂಬ ಗುರಿಯನ್ನು ಸಾಧಿಸಲಾಗಿದೆ ಎಂದು ರಾಜ್ಯಪಾಲರು ಭಾಷಣದಲ್ಲಿ ನುಡಿದಿದ್ದಾರೆ. ಹನುಮಂತನ ಬಾಲದಂತೆ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಇದು ಎಷ್ಟರಮಟ್ಟಿಗೆ ಸಹಕಾರಿಯಾದೀತೋ ಕಾದು ನೋಡಬೇಕಾಗಿದೆ. ನಮ್ಮ ದೇಶದಲ್ಲೇ ಇರುವ, ನಮ್ಮ ಸರ್ಕಾರದ ಬಂಡವಾಳವಿರುವ ಕಾರ್ಖಾನೆಗಳಲ್ಲೇ ನಮ್ಮವರಿಗೆ, ಅರ್ಥಾತ್ ಕನ್ನಡಿಗರಿಗೆ ಉದ್ಯೋಗಗಳು ದೊರೆಯುತ್ತಿಲ್ಲವೆಂಬ ಬಗ್ಗೆ ಸರ್ಕಾರದವರು ಗಮನ ಕೊಡದೇ ಇರುವುದನ್ನು ರಾಜ್ಯಪಾಲರು ಗಮನಿಸಿ ಸರ್ಕಾರಕ್ಕೆ ಈ ಬಗ್ಗೆ ಸೂಚಿಸುತ್ತಾರೆಂದು ನಂಬಿದ್ದೇನೆ. ''ಮನೆಗೆ ಮಾರಿ, ಪರರಿಗೆ ಉಪಕಾರಿಯಾಗುವ'' ಈ ಧೋರಣೆಯನ್ನು ಸರ್ಕಾರದವರು ಬದಲಾಯಿಸಬೇಕೆಂದು ಒತ್ತಾಯಪಡಿಸುತ್ತೇನೆ.

ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಉನ್ನತಿಯ ಬಗ್ಗೆ ನಮ್ಮ ಸರ್ಕಾರ ನಿರ್ಲಕ್ಷಿಸಿರುವುದನ್ನು ರಾಜ್ಯಪಾಲರು ಗಮನಿಸುತ್ತಾರೆಂದು ನಂಬಿದ್ದೇನೆ. ನ್ಯಾಯಾಂಗ ಶಾಖೆಯಲ್ಲಿ ಅನೇಕ ಮಹಿಳೆಯರಿಗೆ ಅವಕಾಶವನ್ನು ಈವೊಳಗೇ ಸರ್ಕಾರ ಒದಗಿಸಬಹುದಾಗಿತ್ತು. ನ್ಯಾಯಾಂಗ ಪರಿಣತರಾದ ಅನೇಕ ಮಹಿಳೆಯರಿದ್ದರೂ ಒಬ್ಬ ಮಹಿಳೆಗಾದರೂ ಒಂದು ನ್ಯಾಯಾಧಿಕಾರಿಯ ಸ್ಥಾನವನ್ನು ಕೊಡದೇ ಇರುವುದು ತುಂಬಾ ಶೋಚನೀಯ. ಹಾಲಿ ನ್ಯಾಯವಾದಿಗಳಾಗಿ ಪ್ರತಿಭಾವಂತರಾಗಿರುವ ಕೆಲವು ಮಹಿಳೆಯರಿಗಾದರೂ, ಮುನ್ಸೀಫ್, ಮ್ಯಾಜಿಸ್ಟ್ರೇಟ್ ಉದ್ಯೋಗಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇನೆ. ಹಾಲಿ ರಚಿತವಾಗಿರುವ ಮಂತ್ರಿಮಂಡಲದಲ್ಲಿಯೂ ಕೂಡ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂಬುದು ಗಮನಾರ್ಹವಾಗಿದೆ. ಮಹಿಳೆಯರ ಬಗ್ಗೆ ಹೀಗೆಯೇ ನಿರ್ಲಕ್ಷಿಸುವುದಾದರೆ ನ್ಯಾಯಬದ್ಧವಾದ ಹೋರಾಟವನ್ನು ನಡೆಸಲು ಮಹಿಳೆಯರು ಸಿದ್ಧರಿದ್ದೇವೆ ಎಂಬ ವಿಚಾರವನ್ನು ಹೇಳಲೇಬೇಕಾಗಿದೆ.

ಸರ್ಕಾರದವರು ನೇಮಿಸಿದ್ದ ಶ್ರೀ ಎ. ಜಿ. ರಾಮಚಂದ್ರರಾಯರ ಸಂಪನ್ಮೂಲ ಸಂಶೋಧನಾ ಸಮಿತಿ ವರದಿಯನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿದೆ. ಈ ಬಗ್ಗೆ ನಮಗೂ ಏನೋ ಆಸೆ, ಏನೋ ಕುತೂಹಲ ತುಂಬಾ ಇದೆ. ದಯೆಯಿಟ್ಟು ಆ ವರದಿಯನ್ನು ತೀವ್ರ ನಮ್ಮ ಮುಂದೆ ಇಡುವ ಕೃಪೆ ಮಾಡುವಿರಾ ಎಂದು ಕಳಕಳಿಯಿಂದ ಕೇಳುತ್ತೇನೆ. ಏಕೆಂದರೆ ಗೋರ್ವಾಲಾ ಮಿತವ್ಯಯ ಸಮಿತಿಯ ಹಿತ ನೋಡಿದ್ದಾಯ್ತು. ಶ್ರೀ ರಾಮಚಂದ್ರರಾಯರ ಸಂಪನ್ಮೂಲ ಸಮಿತಿಯ ಸೊಂಪನ್ನು ನೋಡೋಣವೆಂಬ ಆಸೆಯಿಂದ ಈ ರೀತಿ ಕೇಳಿಕೊಂಡಿದ್ದೇನೆ.

ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಿಸಿರುವ ಇತರ ವಿಚಾರಗಳು ಆಡಳಿತ ಪದ್ಧತಿಗೆ ಸೇರಿದವುಗಳಾಗಿವೆ. ಆಡಳಿತ ಪದ್ಧತಿ ಎಂದ ಕೂಡಲೇ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಒಂದು ಪಾಠಶಾಲೆಯಲ್ಲಿ ಹೊಸದಾಗಿ ಬಂದಿದ್ದ ಉಪಾಧ್ಯಾಯರು ಒಂದು ಕ್ಲಾಸಿನಲ್ಲಿ ಪಾಠ ಹೇಳುತ್ತಿದ್ದಾಗ ಒಬ್ಬ ಹುಡುಗನನ್ನು ಜನಕನ ಧನುಸ್ಸನ್ನು ಮುರಿದವರು ಯಾರು ಎಂದು ಕೇಳಿದ್ದಕ್ಕೆ ಆ ಹುಡುಗ 'ನಾನಲ್ಲ ಸಾರ್' ಎಂದನಂತೆ. ಉಪಾಧ್ಯಾಯರಿಗೆ ಹುಡುಗನ ಉತ್ತರದಿಂದ ಆಶ್ಚರ್ಯ, ವ್ಯಸನ ಎರಡೂ ಆಯಿತು. ಮೊದಲು ಪಾಠ ಮಾಡುತ್ತಿದ್ದ ಉಪಾಧ್ಯಾಯರ ಹತ್ತಿರ ಹೋಗಿ 'ನೋಡಿ ಸಾರ್ ಜನಕನ ಧನುಸ್ಸನ್ನು ಮುರಿದವರಾರು ಎಂದು ಕೇಳಿದ್ದಕ್ಕೆ ಆ ಹುಡುಗ ನಾನಲ್ಲ ಎನ್ನುತ್ತಾನೆ' ಎಂದು ಹೇಳಿದರಂತೆ. ಅದಕ್ಕೆ ಆ ಉಪಾಧ್ಯಾಯರು 'ಅವನು ಅಂಥ ಹುಡುಗನಲ್ಲವಲ್ಲ' ಎಂದರಂತೆ. ಈ ಉಪಾಧ್ಯಾಯರು ಹೆಡ್ಮಾಸ್ಟರ್ ಹತ್ತಿರ ಹೋಗಿ ಹುಡುಗ ಉತ್ತರ ಕೊಟ್ಟಿದ್ದನ್ನು, ಕ್ಲಾಸಿನ ಉಪಾಧ್ಯಾಯರ ಉತ್ತರವನ್ನು ಹೇಳಿದರಂತೆ. ಆಗ ಹೆಡ್ಮಾಸ್ಟರು ಅವನು ಇತ್ತೀಚೆಗೆ ಬಹಳ ತುಂಟನಾಗಿದ್ದಾನೆ, ಅವನಿಗೆ 4 ಆಣೆ ಫೈನ್ ಹಾಕಿರಿ ಎಂದರಂತೆ. ಆಗ ಉಪಾಧ್ಯಾಯರು ಬೇಸತ್ತು ವಿದ್ಯಾಧಿಕಾರಿಗಳಲ್ಲಿಗೆ ಹೋಗಿ ದೂರಿತ್ತರಂತೆ. ಅದಕ್ಕೆ ವಿದ್ಯಾಧಿಕಾರಿಗಳು ಹೋಗಲಿ ಬಿಡಿ ಏನು ಮಾಡುವುದು ಮುಂದಿನ ಸಾಲಿನ ಕಂಟಿಂಜೆನ್ಸಿ ಹಣದಲ್ಲಿ ಸರಿಮಾಡಿಸಿದರಾಯಿತು ಎಂದರಂತೆ. ಸ್ಕೂಲಿನಲ್ಲಿ ಧನಸ್ಸೂ ಇರಲಿಲ್ಲ, ಮುರಿಯುವ ಶ್ರೀರಾಮನೂ ಇರಲಿಲ್ಲ. ಉಪಾಧ್ಯಾಯರು ಪ್ರಶ್ನೆ ಕೇಳಿದರು, ಮುರಿದಿಲ್ಲವೆಂದು ಹುಡುಗ ಹೇಳಿದ. ಆದರೂ ಆಡಳಿತ ಪದ್ಧತಿಯಂತೆ ರಿಪೋರ್ಟ್ ಹೋಯಿತು. ಧನುಸ್ಸು ಇಲ್ಲದಿದ್ದರೂ ರಿಪೇರಿ ಮಾಡಲು ಹಣ ಮಂಜೂರಾಯಿತು. ಸರ್ಕಾರದಲ್ಲಿ ಈ ಶಿಷ್ಟ ಸಂಪ್ರದಾಯ ಹಿಂದಿನಿಂದಲೂ ನಡೆದು ಬಂದಿದೆ. ಕಾರಣ ಈ ಬಗ್ಗೆ ವಿಮರ್ಶೆ ಅನಾವಶ್ಯಕ. ಆದ್ದರಿಂದ ಉಳಿದ ವಿಚಾರಗಳ ವಿಮರ್ಶೆ ಅನಾವಶ್ಯಕ. ರಾಜ್ಯಪಾಲರ ಭಾಷಣದಲ್ಲಿ ಉದಾರತೆಯಿಂದ ಕೂಡಿರುವ ಅನೇಕ ಅಂಶಗಳಿವೆ. ಈ ಬಗ್ಗೆ ರಾಜ್ಯಪಾಲರಿಗೆ ಅಭಿನಂದನೆಗಳುಂಟು. ಸಂಯುಕ್ತ ಅಧಿವೇಶನದಲ್ಲಿ ಮಾಡಿರುವ ರಾಜ್ಯಪಾಲರ ಭಾಷಣವನ್ನು ಮೆಚ್ಚಿಗೆಯಿಂದ ಸ್ವಾಗತಿಸಿ ಅಭಿನಂದಿಸುತ್ತೇನೆ. ಅವಕಾಶ ಕೊಟ್ಟ ಅಧ್ಯಕ್ಷರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

2-00 P.M.

†ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ಈ ಸಭೆಗೆ ಹೊಸದಾಗಿ ಬಂದಿರುವ ಸದಸ್ಯರನ್ನೂ ಹಳೆಯ ಸದಸ್ಯರನ್ನೂ ಸ್ವಾಗತಿಸುತ್ತಾ ಕೊನೆಯಲ್ಲಿ ನಾವು ಜಾಗರೂಕತೆಯಿಂದಲೂ ವಿಚಕ್ಷಣೆಯಿಂದಲೂ ವ್ಯವಹಾರ ಮಾಡಬೇಕೆಂದೂ ಹಾಗೆ ಮಾಡುವಾಗ ರಾಜ್ಯದ ಹಿತಸಾಧನೆಯನ್ನು ಏಕೈಕ ಧ್ಯೇಯವಾಗಿಟ್ಟುಕೊಳ್ಳಬೇಕೆಂದು ನಮಗೆ ಎಚ್ಚರಿಕೆಯನ್ನು ಹೇಳಿದ್ದಾರೆ. ಅವರು ನಮ್ಮಲ್ಲಿಟ್ಟುಕೊಂಡಿರುವ ನಂಬಿಕೆ ಮತ್ತು ವಿಶ್ವಾಸಗಳಿಗಾಗಿ ಅವರಿಗೆ ನಮ್ಮ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಆದರೆ ಇಲ್ಲಿ ಕೆಲವರು ಸದಸ್ಯರು ಈ ದೇಶ ತಮ್ಮ ಸ್ವಂತ ಸ್ವತ್ತು, ದೇಶಭಕ್ತಿ ಮತ್ತು ದೇಶ ಸೇವೆ ತಮಗೇ ಮೀಸಲು ಎಂದು ತಿಳಿದುಕೊಂಡಿರುವಂತೆ ಕಾಣುತ್ತದೆ. ಇವರ ಭಾಷಣ, ಇವರ ನಡೆನುಡಿಗಳು ಇವುಗಳನ್ನು ನೋಡಿದರೆ ಹಾಗೆ ಕಾಣುತ್ತದೆ. ಬರಿಯ ವೇಷ ಭೂಷಣಗಳಿಂದ, ಜಬರದಸ್ತಿನಿಂದ ದೇಶವನ್ನು ಆಳುವುದಕ್ಕೆ ದೇಶ ಸೇವೆಮಾಡುವುದಕ್ಕೆ ಹೊರಟರೆ ಅದಕ್ಕಿಂತ ತಿಳಿಗೇಡಿತನವಿಲ್ಲವೆಂದು ಹೇಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ದೇಶದ ಹಿತಚಿಂತನೆಯಲ್ಲಿ, ದೇಶದ ಅಭಿವೃದ್ಧಿಯಲ್ಲಿ, ದೇಶದ ಆಗುಹೋಗುಗಳಲ್ಲಿ ಇವರು ಎಷ್ಟು ಜವಾಬ್ದಾರರೋ ಬೇರೆ ಯಾವ ಪಕ್ಷದವರಾಗಲಿ, ಯಾರೇ ಆಗಲಿ ಅವರೂ ಅಷ್ಟೇ ಜವಾಬ್ದಾರರು. ಜನರ ಪ್ರತಿನಿಧಿಗಳಾಗಿ ಬಂದ ಮೇಲೆ ಅವರಿಗೂ ಇವರಷ್ಟೇ ಜವಾಬ್ದಾರಿಯಿರುತ್ತದೆ, ಇವರಿಗಿಂತ ಜಾಸ್ತಿಯಿರುತ್ತದೆ, ಇರಲೇಬೇಕೆಂದು ನನ್ನ ಅಭಿಪ್ರಾಯ. ಇಂಥ ಜವಾಬ್ದಾರಿಯನ್ನು ಹೊತ್ತು ಬಂದಿರುವವರು ಸರ್ಕಾರದ ನೀತಿಯೇನು, ಅವರಲ್ಲಿ ಎಷ್ಟು ಮಂತ್ರಿಗಳು ಯಾರು ಯಾರಿಗೆ ಏನೇನು ಜವಾಬ್ದಾರಿ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ, ಆ ಕಡೆ ಕುಳಿತಿರುವ ಆಡಳಿತ ಪಕ್ಷದ ಕೆಲವು ಮಹನೀಯರು ಮುಖ್ಯಮಂತ್ರಿಗಳ ಕಾಲಿನ ಅಳತೆಗೆ ತಕ್ಕ ಹಾಗಿರುತ್ತದೆ'ಂದು ಹೇಳಿದರು. ನನಗಾದರೂ ಆ ಮಹಾಪಾದದ ಅಳತೆ ಎಷ್ಟೆಂಬುದನ್ನು ತಿಳಿಯುವ ಕುತೂಹಲವಿದೆ. ನಮ್ಮಲ್ಲಿ ಕಳೆದ ಐದು ವರ್ಷಗಳ ಕಹಿ ಸಿಹಿ ಅನುಭವವಿರುವ ಕೆಲವರಿಗೆ ಆ ಮಹಾ ಪಾದದ ಜೊತೆಯಲ್ಲಿ ಬರುವವರು ಯಾರೋ ಎಂಬ ಭಯವೂ ಇದೆ. ಏಕೆಂದರೆ, ಹೋದಸಾರಿ ಹೋಂ ಮಿನಿಸ್ಟರಾಗುವುದಕ್ಕೆ ಹಿಂದೆ ಪಬ್ಲಿಕ್ ಮಿನಿಸ್ಟರಾಗಿದ್ದ ಸಚಿವರು ಹಾಗೆ ದೊಡ್ಡ ದೊಡ್ಡ ಕ್ಯಾಸ್ಕೆಟ್‌ಗಳ ಮೇಲೆ ಅಥವಾ ಅವರ ಸಂಬಂಧೀಕರ ಶಿಫಾರಸಿನ ಮೇಲೆ ಕೆಲಸ ನಡೆಸುವವರು ಬಂದರೇನು ಗತಿ ಎಂದು ನಮ್ಮ ಭಯ. ಎಷ್ಟು ಹೇಳಿದರೂ ಅರ್ಥಮಾಡಿಕೊಳ್ಳದಿದ್ದ ಜಡ ಹೋಂ ಮಿನಿಸ್ಟರಿದ್ದರು, ಅವರಂತಹವರು ಬಂದರೇನು ಗತಿ ! ಕಾಡುಗಳನ್ನು ಬೇಕಾದಷ್ಟು ಕಡಿದು ದೇಶ ದಿವಾಳಿಯಾಗುತ್ತಿದ್ದರೂ ಅವರ ಸಂಬಂಧಿಗಳಿದ್ದುದರಿಂದ ಅದನ್ನು ಕಿವಿಗೆ ಹಾಕಿಕೊಳ್ಳದೇಯಿದ್ದ ದಯಾಮಯ ಮಿನಿಸ್ಟರು ಬಂದರೆ ಹೇಗೆ ? ಸಹಕಾರ ಸಂಘಗಳು ಅವ್ಯವಸ್ಥೆಯಾಗಿ ದಿವಾಳಿಯಾಗುತ್ತಿವೆಯೆಂದೂ ಸರ್ಕಾರದ ಹಣ ನಷ್ಟವಾಗುತ್ತಿದೆಯೆಂದೂ ಹೇಳಿದರೂ ಕಿವಿಗೆ ಹಾಕಿಕೊಳ್ಳದ ನಿರ್ಗವಿಯಾದ ಮಿನಿಸ್ಟರು ಬಂದರೆ ಹೇಗೆ ಎಂದು ನಮಗೆ ಭಯ. ರಾಜ್ಯಪಾಲರು ಅಪ್ಪಣೆ ಕೊಡಿಸಿರುವ ಹಾಗೆ ರಾಜ್ಯದ ಹಿತ ಸಾಧನೆಯನ್ನು ಹೇಗೆ ಮಾಡುವುದು ಎಂದು ಯೋಚನೆ ಮಾಡುವ ಜನ ನಾವಾಗಿರುವುದರಿಂದ ಮುಖ್ಯಮಂತ್ರಿಗಳ ಪಾದದ ಅಳತೆಯನ್ನು ದಯವಿಟ್ಟು ತಿಳಿಸಬೇಕೆಂದು ಅಧ್ಯಕ್ಷರ ಮೂಲಕ ಅವರನ್ನು ಪ್ರಾರ್ಥಿಸುತ್ತೇನೆ......

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಬಲಿವಾಮನನ್ನು ಜ್ಞಾಪಕ ಮಾಡಿಕೊಂಡರೆ ಸಾಕು. (ನಗು !)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಶರಾವತಿ ಯೋಜನೆಗೆ ಒದಗಿಸಿರುವ 42 ಕೋಟಿ ರೂಪಾಯಿಗಳಲ್ಲಿ 23.1 ಕೋಟಿಯನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಬಾಕಿ ಹಣವನ್ನು ನಾವು ಹೊಂದಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಈಗಾಗಲೇ ಎದ್ದರೆ ಸುಂಕ, ಕುಳಿತರೆ ಸುಂಕ ಆಗಿರುವಾಗ ಇದನ್ನು ಎಲ್ಲಿಂದ ತರುವುದು ಎಂದು ನಮಗೆ ಬಹಳ ಯೋಚನೆಯಾಗಿದೆ. ಈ ಯೋಜನೆಯ ಕೆಲಸಕ್ಕೆ ಖರ್ಚಾಗುವುದಕ್ಕಿಂತ ಜಾಸ್ತಿಯಾಗಿ ಹಣ ವ್ಯರ್ಥವಾಗುತ್ತಿದೆ. ಇಷ್ಟು ಕೋಟಿ ರೂಪಾಯಿ ಖರ್ಚಾಗಬೇಕಾದರೆ ಇಷ್ಟು ಅಧಿಕಾರಿಗಳಿರಬೇಕೆಂದು ನಿಯಮ ಮಾಡಿದ್ದಾರೆ; ಇವರಿಗೆ ಬೇಕಾದ ಆಫೀಸುಗಳು, ಇತರ ಅನುಕೂಲಗಳು ಇವುಗಳಿಗೆ ಎಷ್ಟೋ ಖರ್ಚಾಗುತ್ತದೆ. ಈ ಯೋಜನೆಯನ್ನು ಮಾಡಿದ ಕೂಡಲೇ ಇದಕ್ಕಾಗಿ ಒಬ್ಬರು ಮೇಧಾವಿ ವಿಶೇಷ ಇಂಜಿನಿಯರ್ ಬೇಕೆಂದು ಅವರನ್ನು ನೇಮಕ ಮಾಡಿದ್ದಾಯಿತು. ಅವರಿಗೆ ಬೇಕಾದ ಅನುಕೂಲಗಳನ್ನು ಮಾಡಿದ್ದಾಯಿತು. ಅವರಿಗೆ ಸ್ಪೆಷಲ್ ಫೋರ್ಸ್ ಮಾಡಿ ವಿದೇಶಗಳಿಂದ ಸಾಮಾನುಗಳನ್ನು ತರುವುದಕ್ಕೆ ಕಳುಹಿಸಿದ್ದೂ ಆಯಿತು. ಈಗ ಅವರನ್ನು ರಾಂಚಿಗೆ ಕಳುಹಿಸಿದ್ದಾರೆ. ಇದು ನನಗರ್ಥವಾಗುವುದಿಲ್ಲ. ಹೋದಸಾರಿ 1962ರಲ್ಲೇ ಎರಡು ಯೂನಿಟ್ಟುಗಳ ಕಾರ್ಯ ಮುಗಿಯುತ್ತದೆಂದು ರಾಜ್ಯಪಾಲರ ಬಾಯಲ್ಲಿ ಹೇಳಿಸಿದ್ದರು, ಆದರೆ ಈಗ 1963 ರಲ್ಲಿ ಆಗುತ್ತದೆಂದು ಹೇಳಿದ್ದಾರೆ. ದೊಡ್ಡದೊಡ್ಡ ಇಂಜಿನಿಯರುಗಳು ಇದು 1964ಕ್ಕೆ ಮುಗಿದರೆ ಈಗ ಆದಹಾಗೆ ಎಂದು ಹೇಳುತ್ತಾರೆ. ಇದರ ವಾಸ್ತವಾಂಶವೇನು, ಎಲ್ಲಿಂದ ಹಣ ತರುತ್ತಾರೆ ಎಂಬುದನ್ನೆಲ್ಲಾ ವಿದ್ಯುಚ್ಛಕ್ತಿ ಮಂತ್ರಿಗಳು ಹೇಳಿದರೆ ಒಳ್ಳೆಯದು.

ಸುಖೀ ರಾಜ್ಯದ ಆದರ್ಶವನ್ನು ಬಹಳ ಮಟ್ಟಿಗೆ ಸಮೀಪಿಸಿದ್ದೇವೆಂದು ರಾಜ್ಯಪಾಲರು ತಿಳಿಸಿದ್ದಾರೆ. ಇದು ಎಷ್ಟು ಮಟ್ಟಿಗೆ ನಿಜವೋ ಅವರಿಗೂ ಗೊತ್ತಿದೆ. ರೂಪಾಯಿಗೆ ಒಂದು ಸೇರು ಅಕ್ಕಿಯಾಗಿದೆ, ಜನರಿಗೆ ಇರುವುದಕ್ಕೆ ಮನೆಯಿಲ್ಲ, ಉಡುವುದಕ್ಕೆ ಬಟ್ಟೆಯಿಲ್ಲ. ಇದೇ ಸುಖೀರಾಜ್ಯ. ಬಹುಶಃ ಅವರ ಸುತ್ತಮುತ್ತಲೂ ಇರುವವರು ಕೆಲವರು ಸುಖವಾಗಿರಬಹುದು; ಅದರಿಂದ ಎಲ್ಲರೂ ಹೀಗೆಯೇ ಇದ್ದಾರೆಂದು ಅವರು ತಿಳಿದುಕೊಂಡಿರಬಹುದು. ನಮ್ಮ ರಾಜ್ಯ 263 ಅಭಿವೃದ್ಧಿ ಬ್ಲಾಕುಗಳಾಗಿ ವಿಕೇಂದ್ರೀಕೃತವಾಗಿದೆ; ಪಂಚಾಯಿತಿ ರಾಜ್ಯ ಪ್ರಾರಂಭವಾದಮೇಲೆ ಸಾಮುದಾಯಿಕ ಯೋಜನೆಯ ಕಾರ್ಯಕ್ರಮ ಒಂದು ಹೊಸ ರೂಪವನ್ನು ತಾಳಿದೆ ಎಂದು ಹೇಳುತ್ತಾರೆ. ಆದರೆ ಇದು ಬಂದಮೇಲೆ ಒಂದೊಂದು ಗ್ರಾಮವೂ ಎರಡು, ಮೂರು, ನಾಲ್ಕು ಪಾಲುಗಳಾಗಿ ಒಡೆದಿದೆ. ಹಳ್ಳಿಯಲ್ಲಿ ಜನ ಒಂದು ಕುಟುಂಬದಹಾಗೆ ಇಲ್ಲಿಯವರೆಗೆ ನಡೆದುಕೊಂಡು ಹೋಗುತ್ತಿದ್ದರು. ಈಗ ಅಂಥ ವಾತಾವರಣ ಕಲಕಿ ಹೋಗಿ ಒಬ್ಬರನ್ನು ಕಂಡರೆ ಇನ್ನೊಬ್ಬರು ವಿಷಕಾರುವುದಕ್ಕೆ ಈ ಪಂಚಾಯಿತಿ ಕಾರಣವಾಗಿದೆ. ಪಂಚಾಯಿತಿಗಳು ಹಾಗೂ ತಾಲ್ಲೂಕು ಮಂಡಲಗಳು ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಕಾರ್ಯಭಾರಿಗಳಾಗುತ್ತಿವೆಯೆಂದು ಹೇಳಿದ್ದಾರೆ. ವಿದ್ಯೆ ಬುದ್ಧಿ ಇಲ್ಲದಿರುವ ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಬಂದಿರುವಾಗ ಸುಖೀ ರಾಜ್ಯದ ಪಟ್ಟಿಯಲ್ಲಿ ಮೊದಲನೆಯ ಸ್ಥಾನ, ಅಗ್ರಸ್ಥಾನ ಪಡೆಯುತ್ತದೆಯೆ ? ಇದು ಸುಖೀರಾಜ್ಯವಾದರೆ ಮನುಷ್ಯರಾಗಿರುವುದಕ್ಕೆ ಬದಲು ಮೃಗವಾಗಿದ್ದರೆ ಸುಖವಾಗಿರ ಬಹುದಾಗಿತ್ತು ಎನಿಸುತ್ತದೆ.

ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನರ ಅಭಿವೃದ್ಧಿಗಾಗಿ ಯೋಜನೆಗಳನ್ನು ಮಾಡುತ್ತಿದ್ದೇವೆಂದು ಹೇಳುತ್ತಾರೆ. ಆದರೆ ಅವರಲ್ಲಿ ಇನ್ನೂ ಅನೇಕರು ಬಹಳ ಹೀನ ಸ್ಥಿತಿಯಲ್ಲಿಯೇ ಇದ್ದಾರೆ. ಉಪ್ಪಾಲೆಗರು, ತುರಂಗದವರು, ಈಡಿಗರು ಬಹಳ ಹೀನಸ್ಥಿತಿಯಲ್ಲಿದ್ದಾರೆ, ಅವರಿಗೆ ತಕ್ಕ ಯೋಜನೆಯನ್ನು ಮಾಡಿ ಅವರೂ ಸರಿಯಾದ ಮಟ್ಟದಲ್ಲಿ ಬಾಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಯೋಜನೆಗಳನ್ನು ಮಾಡಿರುವುದೂ ಸರಿ, ಖರ್ಚಾಗಿರುವುದೂ ಸರಿ. ಆದರೆ ಇದರ ಫಲ ಯಾರಿಗೆ ತಲಪಬೇಕೋ ಅವರಿಗೆ ತಲಪುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಹೆಂಗಸರ ಮತ್ತು ಮಕ್ಕಳ ಪುರೋಭಿವೃದ್ಧಿಗಾಗಿ ಎಂದಿನಂತೆ ಗಮನ ಕೊಡಲಾಗಿದೆ ಎಂದು ಒಟ್ಟಿನಲ್ಲಿ ಹೇಳಿದ್ದಾರೆ. ಆದರೆ ಇದು

ಸಾಕಷ್ಟುಮಟ್ಟಿಗೆ ಆಗುತ್ತಿಲ್ಲವೆಂದು ಹೇಳುತ್ತೇನೆ. ಡಿಮ್ಯಾಂಡುಗಳ ಮೇಲೆ ಮಾತನಾಡುವಾಗ ಇದನ್ನು ವಿವರವಾಗಿ ಹೇಳುತ್ತೇನೆ. ಅಬಲೆಯರ, ಅನಾಥರ, ಅಂಗವಿಕಲರ ವಿಚಾರದಲ್ಲಿ ಹೇಳಬೇಕಾದುದು ಬೇಕಾದಷ್ಟಿದೆ. ಈಗ ಹೆಣ್ಣುಮಗಳೇ ಸಮಾಜಕಲ್ಯಾಣ ಶಾಖೆಯ ಮಿನಿಸ್ಟರ್ ಆಗಿರುವುದರಿಂದ ಅಷ್ಟೇನೂ ಚಿಂತಿಸಬೇಕಾಗಿಲ್ಲ; ಅವರು ಅನುಭವಸ್ಥರಾಗಿರುವುದರಿಂದ ಚೆನ್ನಾಗಿ ಕೆಲಸ ಮಾಡುತ್ತಾರೆಂಬ ನಂಬಿಕೆ ನನಗಿದೆ.

1961ರಲ್ಲಿ ಬಂದ ಪ್ರವಾಹದ ಪರಿಣಾಮವಾಗಿ ಎಷ್ಟೋ ಜನರು ಮನೆ ಮಠಗಳನ್ನು ಕಳೆದುಕೊಂಡು ಅನಾಥರಾದರು. ಆಗಿನ ಪರಿಸ್ಥಿತಿಯಲ್ಲಿ ಆ ನೊಂದ ಜನರಿಗೆ ಏನು ಬೇಕಾದರೂ ಕೊಡುತ್ತೇವೆಂದು ಹೇಳುವ ಧರ್ಮ ಬುದ್ಧಿ ಸರ್ಕಾರಕ್ಕೆ ಬಂತು. ಅದರೆ ಕಾಲಕಳೆದಂತೆ ಈಗ ಅವರಿಗೆ ಮುಫತ್ತಾಗಿ ಜಾಗ ಕೊಡುವುದಕ್ಕೂ ಹಿಂದುಮುಂದು ನೋಡುತ್ತಿದ್ದಾರೆ. ಸರ್ಕಾರ ಇದಕ್ಕೆ ನಿಗಾ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಸಹಕಾರ ಸಂಘಗಳನ್ನು ಅದರಲ್ಲಿಯೂ ವಿಶೇಷವಾಗಿ, ಸೇವಾಸಹಕಾರ ಸಂಘಗಳನ್ನು ಏರ್ಪಡಿಸುವುದಕ್ಕೆ ಪ್ರೋತ್ಸಾಹ ಕೊಡುವುದೇ ಸರ್ಕಾರದ ದೃಢ ಕಾರ್ಯ ನೀತಿಯಾಗಿದೆಯೆಂದು ಹೇಳಿದ್ದಾರೆ. ಆದರೆ ಈ ಸಹಕಾರ ಸಂಘಗಳನ್ನು ನಡೆಸುವವರ ನೀತಿ ಇದಕ್ಕೆ ತುಂಬಾ ವಿರುದ್ಧವಾಗಿದೆ. ಇದು ವ್ಯಸನಕರವಾದ ವಿಚಾರ. ಈ ಸಂಘಗಳವರು ಬೇರೆ ಮಾರ್ಗವನ್ನನುಸರಿಸುತ್ತಿದ್ದಾರೆ. ತಮಗೆ ಬೇಕಾದವರು ಹದಿನೈದು ಜನ ಸೇರಿ ಒಂದು ಸಹಕಾರ ಸಂಘವನ್ನು ರಿಜಿಸ್ಟರ್ ಮಾಡಿಕೊಂಡರೆ ಸರಿ. ಆಮೇಲೆ ಅವರು ಏನು ಬೇಕಾದರೂ ಮಾಡಬಹುದಾಗಿದೆ. ಮೈಸೂರಿನಲ್ಲಿ ಒಂದು ಸಹಕಾರ ಸಂಘವಿದೆ, ಅದು ಮುನಿಸಿಪಾಲಿಟಿಯಿಂದ ಎಷ್ಟು ಪರ್ಮಿಟ್ ಬೇಕಾದರೂ ತೆಗೆದುಕೊಂಡು ಸೌದೆ ಹೇಗಾದರೂ ಮಾರಬಹುದು, ಏನಾದರೂ ಮಾಡಬಹುದು. ಆಮೇಲೆ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಲಾರಿಗಳಿಗೆ ಹಣ ತೆಗೆದುಕೊಂಡಿದ್ದಾರೆ. ಈ ಬಗ್ಗೆ ಆಡಿಟ್ ಇಲ್ಲ ಅಕೌಂಟ್ ಇಲ್ಲ, ಹೇಳುವವರೂ ಕೇಳುವವರೂ ಇಲ್ಲ, ಹೀಗಿದೆ. ಇಂಥ ಖರ್ಚಿನಿಂದ ಜನರ ಹಣ ಬೇಕಾದವರಿಗೆ ದೊರಕಿ ಸದುಪಯೋಗವಾಗದೆ, ಬರೀದುಷ್ಟರಿಗೆ ಈ ಹಣದಿಂದ ಸಹಾಯವಾಗುತ್ತಿದೆ. ಇಂಥ ಜನರಿಗೆ ಪ್ರೋತ್ಸಾಹ ಕೊಡದೆ ಸರಿಯಾದ ನೀತಿನಿಯಮಗಳಿಂದ ನಡೆಯುವ ಸೊಸೈಟಿಗಳಿಗೆ ಮಾತ್ರ ಪ್ರೋತ್ಸಾಹ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಗ್ರಾಮಾಂತರ ಸಂಪರ್ಕ ವ್ಯವಸ್ಥೆ ಕಾರ್ಯ ಸಾಕಷ್ಟು ಪ್ರಗತಿಹೊಂದಿದೆ ಎಂದು ಹೇಳಿದ್ದಾರೆ ಹೋದವರ್ಷದಂತೆ ಈಗಲೂ ಪ್ರತಿ ತಾಲ್ಲೂಕಿನಲ್ಲೂ 50 ಮೈಲಿಗಳ ರಸ್ತೆಯನ್ನು ಸರ್ಕಾರಕ್ಕೆ ಸೇರಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ಕೆಲವು ತಾಲ್ಲೂಕುಗಳು ಕೆಲವು ಮಂತ್ರಿಗಳ ಕ್ಷೇತ್ರಕ್ಕೆ ಸೇರಿದ್ದುದರಿಂದ ಅವಕ್ಕೆ ಹೆಚ್ಚು ಅನುಕೂಲವಾಗಿ ಮತ್ತೆ ಕೆಲವಕ್ಕೆ ಬಹಳ ಕಷ್ಟವಾಗಿದೆ. ಇದನ್ನು ವಿತರಣೆಯಿಂದ ನೋಡಿ ಕೆಲವು ತಾಲ್ಲೂಕುಗಳಲ್ಲಿ ನೂರು ಮೈಲಿಗಳಷ್ಟನ್ನಾದರೂ ಸೇರಿಸಿಕೊಂಡು ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಂಥಾ ತಾಲ್ಲೂಕುಗಳ ಜೊತೆಗೆ ನನ್ನ ತಾಲ್ಲೂಕನ್ನೂ ಸೇರಿಸಿಕೊಳ್ಳಬೇಕು.

ಆಮೇಲೆ ಆಸ್ಪತ್ರೆಗಳ ವಿಚಾರವಾಗಿ ಮಾತನಾಡುತ್ತಾ ಬಳ್ಳಾರಿಯಲ್ಲಿ ಕಾಲೇಜನ್ನು ತೆರೆದಿದ್ದೇವೆ, ಇನ್ನು ಮೇಲೆ ಡಾಕ್ಟರುಗಳಿಗೆ ಕೊರತೆಯಿರುರುವುದಿಲ್ಲ ಎಂದು ಹೇಳಿದ್ದಾರೆ. ನನಗನ್ನಿಸುತ್ತದೆ, ಕಾಲೇಜನ್ನು ತೆರೆದ ತಕ್ಷಣ ಡಾಕ್ಟರುಗಳ ಕೊರತೆ ತಪ್ಪುವುದಿಲ್ಲ ಎಂದು. ಇರುವ ಡಾಕ್ಟರುಗಳನ್ನೇ ಸರಿಯಾಗಿ ಉಪಯೋಗಿಸಿಕೊಳ್ಳುತ್ತಿಲ್ಲ ಎಂಬ ಭಾವನೆಯಿದೆ. ಕೊಲಂಬೋ ಪ್ಲಾನ್‌ನಲ್ಲಿ ಒಬ್ಬ ಡಾಕ್ಟರನ್ನು ಫಾರಿನ್‌ಗೆ ಕಳುಹಿಸಿ ಅವರಿಗೆ ಬೇಕಾದಷ್ಟು ಸೌಲಭ್ಯಗಳನ್ನೊದಗಿಸಿ ಅವರು ರಿಸೈನ್ ಮಾಡುವುದಕ್ಕೆ ಅವಕಾಶ ಕೊಟ್ಟಿರುವುದು ಯಾವ ನೀತಿಯೋ ಅರ್ಥವಾಗುತ್ತಿಲ್ಲ. ಒಬ್ಬೊಬ್ಬರಿಗೆ ಒಂದೊಂದು ನೀತಿಯೆ? ಈಗ ಒಂದು ಆನರೆರಿಯೂನಿಟ್ ಬೇರೆ ಮಾಡಿದ್ದಾರೆ. ಹಾಗೆಮಾಡುವಾಗ ಪ್ರೈವೇಟ್ ಪ್ರಾಕ್ಟೀಸ್‌ಗೆ ಅನುಕೂಲ ಮಾಡಿಕೊಡಬೇಕೆಂಬುದು ಸರ್ಕಾರದ ನೀತಿಯಲ್ಲ. ರಿಸೈನ್ ಮಾಡಿದವರಿಗೆ 2–3 ಸಾವಿರ ಖರ್ಚಾಗಿದೆಯೆಂದು ಹೇಳಬಹುದು. ಆದರೆ ಮೂರು ವರ್ಷಗಳಾದರೂ ಸರ್ಕಾರದಲ್ಲಿ ಸರ್ವ್ ಮಾಡುವುದಾಗಿ ಬರೆದುಕೊಡಬೇಕೆಂಬ ನಿಯಮವಿದೆ. ಹಾಗಿರುವಾಗ ಅವರ ರೆಸಿಗ್ನೇಷನ್ ಅಕ್ಸೆಪ್ಟ್ ಮಾಡಿಕೊಂಡಿರುವುದು ನೀತಿಗೆ ವಿರುದ್ಧ. ಇದನ್ನು ಸಂಬಂಧಪಟ್ಟ ಮಂತ್ರಿಗಳು ವಿಚಾರ ಮಾಡಬೇಕು.

ರಸ್ತೆಸಾರಿಗೆ ಇಲಾಖೆಯ ವಿಚಾರದಲ್ಲಿ ಕಾರ್ಪೊರೇಷನ್ ಆಗಿದೆಯೆಂದು ದೊಡ್ಡದಾಗಿ ಹೇಳಿದ್ದಾರೆ. ಈ ಇಲಾಖೆ ಬಸ್‌ಗಳಲ್ಲಿ ಮಂತ್ರಿಗಳು ಒಂದು ಸಲವಾದರೂ ಪ್ರಯಾಣ ಮಾಡಿದರೆ ಒಳ್ಳೆಯದು. ನಮ್ಮಂಥವರು ಪ್ರಯಾಣ ಮಾಡಿದರೆ ಕಾಲೇ ಇರುವುದಿಲ್ಲ, ಹಾಗಾಗುತ್ತದೆ. ಜನರ ಅನುಕೂಲಕ್ಕಾಗಿ ಮಾಡಿರುವ ಈ ಕಾರ್ಪೊರೇಷನ್ ಚೆನ್ನಾಗಿ ನಡೆಯುವಂತೆ ನಿಗಾ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ರಾಜ್ಯದಲ್ಲಿ ವಾರ್ತಾಕೇಂದ್ರವನ್ನು ತೆರೆಯಲಾಗಿದೆ, ಎಲ್ಲಾ ಜಿಲ್ಲೆಗಳಲ್ಲೂ ತೆರೆಯಲಾಗುವುದೆಂದು ಹೇಳಿದ್ದಾರೆ. ಅವರು ಪ್ರಕಟಿಸುವ ಪುಸ್ತಕಗಳಲ್ಲಿ ಬರೀ ಮಂತ್ರಿಗಳ ಪ್ರವಾಸದ ವಿಚಾರ, ಅವರ ಚಿತ್ರಗಳು ಮುಂತಾದ್ದು ಮಾತ್ರ ಪ್ರಕಟಿಸಲ್ಪಡುತ್ತಿರುವುದ್ದರಿಂದ ಜನರಿಗೆ ದೇಶದಲ್ಲೇನು ನಡೆಯುತ್ತದೆಯೆಂಬುದು ಸರಿಯಾಗಿ ತಿಳಿಯುತ್ತಿಲ್ಲ. ದಯೆಯಿಟ್ಟು ಇನ್ನು ಮುಂದಾದರೂ ಹಿಂದಿನಂತೆ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಮೈಸೂರು ಕಾರ್ಪೊರೇಷನ್ ವಿಚಾರ ಎಲ್ಲೆಲ್ಲಿಯೂ ಇಂಟೆಗ್ರೇಷನ್ ಎಂದುಹೇಳುತ್ತಾರೆ. ಈಗ ಹುಬ್ಬಳ್ಳಿ ಧಾರವಾಡಗಳಿಗೆ ಕಾರ್ಪೊರೇಷನ್ ಮಾಡಿದರು. ಅದು ಮುಖ್ಯ ಮಂತ್ರಿಗಳಿಗೆ ಬೇಕಾದಸ್ಥಳ. ನಮ್ಮ ಮೈಸೂರಿನಲ್ಲೂ ಸಹ ಕಾರ್ಪೊರೇಷನ್ ಮಾಡುತ್ತೇವೆಂದು ವಾಗ್ದಾನ ಮಾಡಿದ್ದರು. ಅದನ್ನೇಕೆ ಬಿಟ್ಟರೋಗೊತ್ತಿಲ್ಲ. ಈಗಲಾದರೂ ಈ ವಿಚಾರಕ್ಕೆ ನಿಗಾಕೊಡಬೇಕು ಎಂದು ಸೂಚಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, ರಾಜ್ಯಪಾಲರ ಈ ವಂದನಾ ನಿರ್ಣಯವನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ. ಮೊಟ್ಟಮೊದಲನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿನ ವಿಷಯವೇ ಇಲ್ಲ, ವಿವರಗಳಿಲ್ಲದೆ ಸಾದಾ ಭಾಷಣವಾಗಿದೆ ಎಂದು ಹೇಳಬೇಕಾಗಿದೆ. ಅವಸರ ಅವಸರವಾಗಿ ಹೀಗೆ ಭಾಷಣ ಮಾಡಿರುವುದು ಸಂದೇಹಕ್ಕೆಡೆಯಾಗಿದೆ.

ನಾವು ಆರುವರ್ಷಗಳ ಲಾಗಾಯ್ತು ರಾಜ್ಯಪಾಲರ ಭಾಷಣ ಕನ್ನಡದಲ್ಲೇ ನಡೆಯಬೇಕೆಂದು ಕೇಳುತ್ತಿದ್ದೇವೆ. ನಮ್ಮ ರಾಜ್ಯಪಾಲರಿಗೆ ಕನ್ನಡದಲ್ಲಿ ಮಾತ

(ಶ್ರೀ ಎ. ಜೆ. ದೊಡ್ಡಮೇಟಿ)

ನಾಡುವುದಕ್ಕೂ, ಬರೆಯುವುದಕ್ಕೂ ಬರುತ್ತದೆ, ಕನ್ನಡದ ಸಂಪೂರ್ಣ ಜ್ಞಾನವಿದೆ ಅವರು ಗ್ರಂಥಗಳನ್ನು ರಚಿಸಿರುವುದಾಗಿ ಕೇಳಿದ್ದೇವೆ. ಅಂಥವರು ಒಂದು ಸಲವಾದರೂ ಕನ್ನಡದಲ್ಲಿ ಭಾಷಣಮಾಡಲಿಲ್ಲ. ಇದರ ಹಿಂದಿನ ಸರ್ಕಾರವಾಗಲಿ, ಇವತ್ತಿನ ಸರ್ಕಾರವಾಗಲಿ ಈ ಕಡೆಗೆ ಗಮನ ಕೊಟ್ಟಿಲ್ಲ. ಇದು ಸುಲಭವಾಗಿ ಮರೆಯುವ ವಿಷಯವಲ್ಲ, ಇದರ ಪ್ರತಿಕ್ರಿಯೆ ಗಂಭೀರವಾಗಿ ಹೆಚ್ಚುತ್ತದೆ. ಇನ್ನು ರಾಜ್ಯಪಾಲರ ಭಾಷಣದಲ್ಲಿ ಕೆಲವೊಂದು ಯೋಜನೆಗಳ ವಿಷಯವನ್ನು ಹೇಳಿದ್ದಾರೆ. ವಿಶೇಷತಃ ಬರಗಾಲ ಪ್ರದೇಶಗಳಲ್ಲಿ ನೀರಾವರಿ ಯೋಜನೆಗಳು, ಬಾವಿಗಳನ್ನು ತೋಡಿಸುವುದು ಮುಂತಾದುವುಗಳ ವಿಚಾರದಲ್ಲಿ ದೊಡ್ಡ ಅಂಕಿಗಳಿಂದ ಕೂಡಿದ ಕೆಲವು ಮಾತುಗಳು ಹೇಳಲ್ಪಟ್ಟಿವೆ. ನಿಜವಾಗಿಯೂ ಇವು ಒಳ್ಳೆಯ ಯೋಜನೆಗಳು, ಆದರೆ ತೃತೀಯ ಪಂಚವಾರ್ಷಿಕ ಯೋಜನೆಯ ಬಗ್ಗೆ ಕೇಂದ್ರ ಸರ್ಕಾರದಿಂದ ನಮಗೆಷ್ಟು ಹಣ ಸಿಕ್ಕುತ್ತದೆ, ಅದರಲ್ಲಿ ಒಂದೊಂದು ಜಿಲ್ಲೆಗೆ ಎಷ್ಟೆಷ್ಟು ಹಂಚಲ್ಪಡುತ್ತದೆ ಎಂಬ ವಿವರ ಕೊಟ್ಟಿಲ್ಲ. ಆ ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಇದರ ಅವಶ್ಯಕತೆಯಿರುವುದರಿಂದ ಸರ್ಕಾರದವರು ತಮ್ಮ ಉತ್ತರದಲ್ಲಾದರೂ ಇಂತಿಷ್ಟು ಹಣ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಬರಗಾಲ ಪ್ರದೇಶಗಳಲ್ಲಿ ಬಾವಿ ತೆಗೆಯುವುದು ವಗೈರೆಗೆ ಎಷ್ಟೆಷ್ಟು ಯಾವ ಯಾವ ಜಿಲ್ಲೆಗೆ ಹಂಚಲ್ಪಡುತ್ತದೆ ಎಂದು ತಿಳಿಸಿದರೆ ಬಹಳ ಉಪಕಾರವಾದೀತು.

ಈಗ 2-3 ವರ್ಷಗಳ ಲಾಗಾಯ್ತು ಬರಗಾಲಕ್ಕೆ ತುತ್ತಾಗಿ ಮಳೆಯಿಲ್ಲದಿರುವ ಅನೇಕ ಪ್ರದೇಶಗಳು ರಾಜ್ಯದಲ್ಲಿರುವುದುಂಟು. ಈ ರಾಜ್ಯದಲ್ಲಿ ಈ ಸಲವೂ ಬರಗಾಲವಿದೆ. ಒಂದು ಇಂಚೂ ಸಹ ಮಳೆಯಾಗದೆ, ಬೆಳೆಯೆಲ್ಲಾ ಒಣಗಿರುವ ಪ್ರದೇಶಗಳುಂಟು ಧಾರವಾಡ ಜಿಲ್ಲೆಯ ಉತ್ತರ ಮತ್ತು ಪೂರ್ವದಲ್ಲಿ ಈ ಪರಿಸ್ಥಿತಿಯಿದೆ. ಇದನ್ನು ಸರ್ಕಾರದವರು ಗಮನಿಸಿ ಎಲ್ಲಿ ಅಭಾವವಿದೆ ಅಲ್ಲಿಗೆ ವಿಶೇಷ ಗಮನ ಕೊಡುವುದು ಆವಶ್ಯಕ. ಇದರ ಕಡೆ ಗಮನ ಸೆಳೆಯಲು ಮಂತ್ರಿಗಳ ಆಫೀಸಿಗೆ ಹೋಗಿದ್ದೆ. ಆದರೆ ಕಂದಾಯ ಮಂತ್ರಿಗಳಿರಲಿಲ್ಲ ಈಗಲಾದರೂ ಅವರು ಈ ಅಧಿವೇಶನ ಮುಗಿದಕೂಡಲೆ ಬರಗಾಲ ಪ್ರದೇಶವಿರುವಕಡೆಗೆ ಹೆಚ್ಚು ಲಕ್ಷವಹಿಸಿ ಬರಗಾಲ ಪೀಡಿತರಿಗೆ ಆಗಿರುವ ಅನಾನುಕೂಲವನ್ನು ಹೋಗಲಾಡಿಸಲು ಪ್ರಯತ್ನಮಾಡಬೇಕಾಗಿ ವಿನಂತಿ ಮಾಡುತ್ತೇನೆ.

ಆ ಮೇಲೆ ವ್ಯವಸಾಯ ಶಿಕ್ಷಣಕ್ಕಾಗಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಉದ್ದೇಶದ ವಿಚಾರವನ್ನು ಸೂಚಿಸಿದ್ದಾರೆ. ಇದು ಸ್ವಾಗತಾರ್ಹ. ಇದು ನಿಜವಾಗಿಯೂ ಒಳ್ಳೆಯ ಕಾರ್ಯ. ವ್ಯವಸಾಯ ಮುಖ್ಯವಾದ ಉದ್ಯಮವಾಗಿರುವುದರಿಂದ ಮತ್ತು ನಿರಂತರ ರೈತರ ಕಲ್ಯಾಣಕ್ಕೆ ಬೇಕಾಗಿರುವುದರಿಂದ ಈ ಯೋಜನೆಯ ಬಗ್ಗೆ ಹೆಚ್ಚು ಗಮನ ಕೊಟ್ಟಿರುವುದಕ್ಕಾಗಿ ಧನ್ಯವಾದಗಳನ್ನರ್ಪಿಸಲು ಅಪೇಕ್ಷೆಪಡುತ್ತೇನೆ.

ಇನ್ನು ಗ್ರಾಮಾಧಿಕಾರಿಗಳ ರದ್ಧಿಯಾತಿ ಕಾನೂನಿನ ವಿಷಯ. ಈ ಕಾಯಿದೆ ಹಿಂದಿನ ಅಧಿವೇಶನದಲ್ಲಿಯೇ ಪಾಸಾಯಿತು. ಇಷ್ಟರೊಳಗೆ ಅದು ಜಾರಿಯಲ್ಲಿ ಬರಬೇಕಾಗಿತ್ತು. ಏನೇನೋ ಕಾರಣದಿಂದ ಅದು ಜಾರಿಯಲ್ಲಿ ಬರಲಿಲ್ಲ. ಈಗ ಅದು ಗೆಜಿಟ್ಟಿನಲ್ಲಿ ಕೂಡ ಬಂದಿದೆ. ಮುಂದಿನ ವರ್ಷದೊಳಗೆ ಅದನ್ನು ಜಾರಿಗೆ ತರುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಮುಂದಿನ ವರ್ಷ ಬಡ್ಜೆಟ್ ಅಧಿವೇಶನದೊಳಗೆ ಈ ಕಾನೂನು ಸಂಪೂರ್ಣವಾಗಿ ಆಚರಣೆಗೆ ಬರಬೇಕು. ಅದಕ್ಕೆ ಯಾವ ರೀತಿಯಾದ ನೆಪಗಳನ್ನು ಹಾಕಬಾರದು ಎಂದು ನಾನು ಸರ್ಕಾರಕ್ಕೆ ಸ್ಪಷ್ಟವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಅಡಚಣೆಗಳು ಬರುತ್ತವೆ. ಆಶ್ವಾಸನೆಗಳು ಮುಂದೆ ಹೋಗುತ್ತವೆ. ಇದು ಎಲ್ಲಾ ಸರ್ಕಾರದ ಒಂದು ಸಂಪ್ರದಾಯ. ಆ ಸಂಪ್ರದಾಯ ಇಲ್ಲಿ ನಡೆಯಬಾರದು. ಮುಂದಿನ ಬಡ್ಜೆಟ್ಟಿನ ಅಧಿವೇಶನದೊಳಗೆ ಗ್ರಾಮಾಧಿಕಾರಿಗಳ ಕಾನೂನು ಸಂಪೂರ್ಣವಾಗಿ ಜಾರಿಯಲ್ಲಿ ಬರಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮತ್ತೊಂದು ಮಾತನ್ನು ಭೂಸುಧಾರಣೆ ವಿಧೇಯಕದ ವಿಷಯದಲ್ಲಿ ಹೇಳುವುದಕ್ಕೆ ಅಪೇಕ್ಷಿಸುತ್ತೇನೆ. ಇತ್ತೀಚೆಗೆ ಅದಕ್ಕೆ ರಾಷ್ಟ್ರಾಧ್ಯಕ್ಷರ ಅಂಕಿತ ದೊರಕಿದೆ ಎಂದು ಹೇಳಿದ್ದಾರೆ. ಆದರೆ ತತ್ಪೂರ್ವದಲ್ಲಿ ಏತಕ್ಕೆ ಬೇಗನೆ ಅದಕ್ಕೆ ರಾಷ್ಟ್ರಾಧ್ಯಕ್ಷರ ಅಂಕಿತ ದೊರೆಯಲಿಲ್ಲ ಎನ್ನುವುದನ್ನು ಚರ್ಚಿಸಬೇಕಾದ ಅಗತ್ಯ ಇದೆಯೋ ಇಲ್ಲವೋ ಅದು ಬೇರೆ ವಿಷಯ. ಆದರೆ ಅದು ಚುನಾವಣೆಯ ಪೂರ್ವದಲ್ಲಿ ದೇಶದಲ್ಲಿ ಜಾರಿಗೆ ಬರಬೇಕಾಗಿತ್ತು. ಆದರೆ ಅದು ಜಾರಿಗೆ ಬರಲಿಲ್ಲ. ಈಗಲಾದರೂ ಅದನ್ನು ಆದಷ್ಟು ತೀವ್ರವಾಗಿ ದೇಶದಲ್ಲಿ ಜಾರಿಗೆ ತರಬೇಕು. ಮತ್ತೂ ತತ್ಪೂರ್ವದಲ್ಲಿ ಈಗ ಒಂದು ಕಾನೂನನ್ನು ಪಾಸ್ ಮಾಡಿದ್ದಾರೆ. ಅದೇನೆಂದರೆ 1963ನೇ ಇಸವಿ ಮಾರ್ಚಿ ತಿಂಗಳು 31ನೇ ತಾರೀಖಿನವರೆಗೆ ಗೇಣಿದಾರರು ಹೊರಗೆ ಹೋಗಕೂಡದು ಎಂದು. ಇದರಿಂದ ನನಗೆ ಸ್ವಲ್ಪ ಸಂದೇಹವಾಗುತ್ತಿದೆ. ಆದ್ದರಿಂದ ಈ ಕಾಯಿದೆಯನ್ನು ಜಾರಿಗೆ ತರಲು 1963ನೇ ಇಸವಿ ಮಾರ್ಚಿ 31ರ ತನಕ ಎಳೆಯಬೇಡಿ. ಆದಷ್ಟು ಬೇಗನೆ ಈ ಕಾನೂನು ಇಡೀ ರಾಜ್ಯದಲ್ಲೆಲ್ಲಾ ಒಮ್ಮೆಲೇ ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ. ಇನಾಮ್ ರದ್ದಿಯಾತಿ ಪ್ರಶ್ನೆಗೆ ಎಷ್ಟೋ ಅಡಚಣೆಗಳಾಗುತ್ತಿವೆ. ಈಗ ಇನಾಮ್ ರದ್ದಿಯಾತಿ ಕಾನೂನೇನೋ ಆಗಿದೆ. ಆದರೆ ಎಷ್ಟೋ ಜನಗಳಿಗೆ ಇನಾಮ್ ರದ್ದಿಯಾತಿ ಕಾನೂನಿನ ಅಮಲಬಜಾವಣೆಯ ಪರಿಣಾಮ ಚಿಂತಾಜನಕವಾಗಿ ಪರಿಣಮಿಸಿದೆ. ಉದಾಹರಣೆಗೆ ಹೇಳಬೇಕಾದರೆ ಧಾರವಾಡ ಜಿಲ್ಲೆಯಲ್ಲಿ ಕೆಲವೊಂದು ಇನಾಮ್ ಗ್ರಾಮಗಳಿವೆ. ಅವು 1953ನೇ ಇಸವಿಯಲ್ಲಿ ಮುಂಬೈ ಸರ್ಕಾರದಲ್ಲೇ ನಿರ್ನಾಮವಾಗಿವೆ. ಅಂಥವುಗಳನ್ನು ಇನ್ನೂ ಆಯಾ ಭೂಮಿಯನ್ನು ಧಾರಣೆ ಮಾಡತಕ್ಕ ಮಾಲೀಕರುಗಳ ಹೆಸರುಗಳನ್ನು ಕೋಷ್ಟಕದಲ್ಲಿ ತರುವುದಕ್ಕೆ ಇನ್ನೂ ಸಮರ್ಥವಾಗಿಲ್ಲ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ರೆಡ್‌ಟೇಪಿಸಮ್‌ನಿಂದ ಮತ್ತು ಕೋರ್ಟುಗಳಿಂದ ವಿಳಂಬವಾಗಿದೆ. ಇನ್ನೂ ಜಾರಿಗೆ ಕೊಟ್ಟಿಲ್ಲ. ಇನಾಮ್ದಾರರು ದುಡ್ಡು ಇದ್ದವರು ಶಕ್ತಿ ಬಲ ಇದ್ದವರು ಕೋರ್ಟುಗಳಲ್ಲಿ ಓಡಾಡಿ, ಹೈಕೋರ್ಟಿನಲ್ಲಿ ರಿಟ್ ಅರ್ಜಿ ಮಾಡಿದ್ದರಿಂದ ಆ ಕಾನೂನು ಜಾರಿ ಮಾಡಿಲ್ಲ. ಆ ವಿಷಯದಲ್ಲಿ ರೂಲ್ಸಿನೊಳಗೆ ಒಂದು ಪ್ರತ್ಯೇಕವಾದ ಕ್ರಮವನ್ನು ಕೈಗೊಂಡಿರುವುದು ಸರ್ಕಾರಕ್ಕೆ ಗೊತ್ತಿದೆ. ಗಜೇಂದ್ರಗಡ, ಕೊಪ್ಪ, ಬೆನಕಹಳ್ಳಿ, ಕುಂಟಪನಹಳ್ಳಿ ಮುಂತಾದ ಗ್ರಾಮಗಳ ಇನಾಮ್ದಾರರು ಹೈಕೋರ್ಟಿಗೆ ರಿಟ್ ಅರ್ಜಿಹಾಕಿ ಇನಾಮ್ತಿ ಜಮೀನುಗಳಿಗೆ ಕೈ ಹಾಕದಂತೆ ಸರ್ಕಾರದ ತಡೆ ಆಜ್ಞೆಯನ್ನು ಪಡೆದುಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರದವರು ಬೇಗನೆ ಚೌಕಸಿ ಮಾಡಿ ನಿಕಾಲೆ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಇವೊತ್ತಿನ ದಿವಸ ಅಲ್ಲಿರತಕ್ಕ ರೈತರ ಸ್ಥಿತಿ ತ್ರಿಶಂಕು

ಸ್ವರ್ಗವಾಗಿದೆ. ಅವರಿಗೆ ತಕಾವಿ ಸಾಲಗಳು, ಸೊಸೈಟಿ ಸಾಲಗಳು ಸಿಕ್ಕುತ್ತಾ ಇಲ್ಲ. ಯಾವುದೋ ರೀತಿಯಿಂದ ವಿಳಂಬ ಮಾಡಿ ರೈತರಿಗೆ ದೊರೆಯಬೇಕಾದಂಥ ಅನುಕೂಲತೆಗಳು ಅವರಿಗೆ ದೊರೆಯುವಂತಿಲ್ಲ. ಈ ವಿಷಯವನ್ನು ಹಿಂದಿನ ರೆವಿನ್ಯೂ ಮಂತ್ರಿಗಳೊಡನೆ ನಾನು ಮಾತನಾಡಿದ್ದೇನೆ. ಇವೊತ್ತಿನ ದಿವಸ ಸರ್ಕಾರದವರು ಆದಷ್ಟು ತೀವ್ರವಾಗಿ ಇನಾಮ್ ರದ್ದಿಯಾತಿ ಕಾನೂನನ್ನು ದೇಶದಲ್ಲಿ ಜಾರಿಗೆ ತಂದು ಯಾರು ಯಾರು ಇನಾಮ್ ಭೂಮಿಯನ್ನು ಸಾಗು ಮಾಡುತ್ತಾರೆಯೋ ಅವರಿಗೆ ಆ ಭೂಮಿಯು ದೊರೆಯುವಂತೆ ಪ್ರಯತ್ನ ಮಾಡಬೇಕು. ಮತ್ತು ಅದನ್ನು ಬೇಗನೇ ಮಾಡಬೇಕೆಂದು ನಾನು ವಿನಂತಿ ಮಾಡಲು ಅಪೇಕ್ಷಿಸುತ್ತೇನೆ.

ಆಮೇಲೆ ಗ್ರಾಮಾಂತರ ಸಂಪರ್ಕದ ಬಗ್ಗೆ ಕೆಲವು ಮಾತುಗಳನ್ನು ರಾಜ್ಯಪಾಲರು ಹೇಳಿದ್ದಾರೆ. ಆ ಕಾರ್ಯಕ್ರಮವನ್ನೂ ಪ್ರತಿ ತಾಲ್ಲೂಕಿಗೂ 50 ಮೈಲಿಗಳಷ್ಟು ರಸ್ತೆಯನ್ನು ಒದಗಿಸುವ ಆಶಯದ ಸಲುವಾಗಿ 1962-63ನೇ ಸಾಲಿನಲ್ಲೂ ಮುಂದುವರಿಸಿಕೊಂಡು ಬರಲಾಗುವುದು ಎಂದು ಹೇಳಿದ್ದಾರೆ. ಆದರೆ ಈಗ ಕೆಲವು ತಾಲ್ಲೂಕಿನಲ್ಲಿ 50 ಮೈಲಿ, ಕೆಲವು ತಾಲ್ಲೂಕಿನಲ್ಲಿ 10 ಮೈಲಿ ಕೆಲವು ತಾಲ್ಲೂಕಿನಲ್ಲಿ 100 ಮೈಲಿ ಆಗಿದೆ. ಈ ರೀತಿ ಹೆಚ್ಚು ಕಡಮೆ ಏತಕ್ಕೆ ಆಯಿತು? ಇದನ್ನು P.W. ಡಿಪಾರ್ಟ್‌ಮೆಂಟಿನವರು ವಿಚಾರ ಮಾಡಬೇಕು. ಎಲ್ಲೆಲ್ಲಿ ಎಗ್ಜಿಕ್ಯುಟೀವ್ ಇಂಜಿನಿಯರು, ಅಸಿಸ್ಟೆಂಟ್ ಇಂಜಿನಿಯರು ಮನ ಮುಟ್ಟಿ ಮುಖಂಡರೊಡನೆ ಸಹಕರಿಸಿ ಕೆಲಸ ಮಾಡಿದ್ದಾರೆಯೋ ಅಲ್ಲೆಲ್ಲಾ ಹೆಚ್ಚಾಗಿ ಕೆಲಸ ಆಗಿದೆ. ಎಲ್ಲೆಲ್ಲಿ ಎಗ್ಜಿಕ್ಯುಟಿವ್ ಆಫೀಸರ್ಸ್ ಸರಿಯಾದ ರೀತಿಯಲ್ಲಿ ಕೆಲಸವನ್ನು ಮಾಡಿಲ್ಲವೋ ಅಲ್ಲೆಲ್ಲಾ ಹೆಚ್ಚಿನ ಕೆಲಸ ಆಗಿಲ್ಲ. ಮುನಃ ಪೂರ್ವಕವಾದ ಕೆಲಸ ಆಗಿಲ್ಲ. ಕಡಮೆ ಕೆಲಸ ಆಗಿದೆ. ಅಂಥಾ ಕಡೆಗಳೆಲ್ಲೆಲಾ ಸರ್ಕಾರದವರು ಪರಿಶೀಲನೆ ನಡೆಸಿ ಯಾವ ಯಾವ ತಾಲ್ಲೂಕಿನಲ್ಲಿ 50 ಮೈಲಿಗಳಿಗಿಂತ ಕಡಮೆ ಕೆಲಸ ಆಗಿದೆಯೋ ಅಲ್ಲೆಲ್ಲಾ ಇನ್ನೂ ಒಂದೆರಡು ವರ್ಷಗಳಲ್ಲಿ ಪೂರ್ತಿ ಕೆಲಸ ಆಗಬೇಕು ಎನ್ನುವಂಥಾ ಒಂದು ಸರ್ಕಾರದ ಅಜ್ಞೆ ಹೊರಡ ಬೇಕಾದ್ದು ಅವಶ್ಯ ಇದೆ. ಗ್ರಾಮಾಂತರ ಮಾರ್ಗ ಸೌಕರ್ಯ ಒಂದು ಮಹತ್ವವಾದ ವಿಚಾರ. ಈ ಮಾರ್ಗ ಸೌಕರ್ಯ ಬಗ್ಗೆ ಕೆಲವು ಭೂಮಿಗಳನ್ನು ಪಡೆದುಕೊಳ್ಳುವುದಕ್ಕೆ ಆಕ್ವೈರ್ ಮಾಡಿ ಕೊಳ್ಳುವುದಕ್ಕೆ ಅನೇಕ ಕಾನೂನು ಬದ್ಧವಾದ ತೊಡಕುಗಳು ಇವೆ. ಅವುಗಳನ್ನು ಕ್ಲಿಯರ್ ಮಾಡಿ ಕೊಳ್ಳುವುದಕ್ಕೆ ಒಂದು ಎಮರ್ಜೆನ್ಸಿ ಕಾಯಿದೆಯನ್ನು ಮಾಡಿ ಎಲ್ಲಾ ಕಡೆಗೂ ಒಂದೇ ಸಮನಾಗಿ ಮಾರ್ಗ ಸೌಕರ್ಯವನ್ನೊದಗಿಸುವುದು ಅವಶ್ಯಕ.

ಈ ಮಾರ್ಗ ಸೌಕರ್ಯಗಳ ಬಗ್ಗೆ ಯಾವ ಯಾವ ಭೂಮಿಯನ್ನು ವಶಪಡಿಸಿಕೊಳ್ಳಬೇಕೋ ಅವುಗಳನ್ನು ಸರ್ಕಾರದವರು ಕೆಲವೇ ತಿಂಗಳಲ್ಲಿ ತಮ್ಮ ಕೈವಶವಾಗುವಂತೆ ನಿರ್ಣಯಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ಶಿಕ್ಷಣದ ವ್ಯವಸ್ಥೆಯ ಬಗ್ಗೆ ಸರ್ಕಾರದವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಆ ವಿಷಯ ವೃತ್ತ ಪತ್ರಿಕೆಗಳಲ್ಲೂ ಪ್ರಸಿದ್ಧವಾಗಿದೆ. ಮತ್ತು ಈ ಅಧಿವೇಶನದಲ್ಲೂ ಆ ವಿಚಾರಗಳನ್ನು ಹೇಳಿದ್ದಾರೆ. ಈ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ತಾಲ್ಲೂಕು ಬೋರ್ಡುಗಳಿಗೆ ವಹಿಸಿ ಕೊಡುತ್ತೇವೆಂದು ಹೇಳಿದ್ದಾರೆ. ಇದರ ಬಗ್ಗೆ ಒಂದು ಸಂಶಯವೇನೆಂದರೆ, ಈ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸುತ್ತಾರೆಯೇ ಅಥವಾ ತಾಲ್ಲೂಕು ಬೋರ್ಡುಗಳಿಗೆ ವಹಿಸುತ್ತಾರೆಯೇ ಎನ್ನುವ ವಿಚಾರ ತ್ರಿಶಂಕು ಸ್ವರ್ಗದೋಪಾದಿಯಲ್ಲಿದೆ. ಇದು ಆಗಬೇಕಾದರೆ ಎಷ್ಟೋ ವರ್ಷಗಳು ಹಿಡಿಯುತ್ತವೆ. ಇದನ್ನು ಜನತೆಯ ದೃಷ್ಟಿಯಿಂದ ವಿಚಾರ ಮಾಡುವುದಾದರೆ ಇದನ್ನು ಸರ್ಕಾರದವರೇ ನಡೆಸುವಂಥಾದ್ದು ಉತ್ತಮ. ಆದಷ್ಟು ತೀವ್ರವಾಗಿ ದಯವಿಟ್ಟು ಸರಕಾರದವರು ಈ ಬಗ್ಗೆ ಒಂದು ತೀರ್ಮಾನವನ್ನು ಕೈಗೊಂಡು ಶಾಲಾ ಸಂಸ್ಥೆಗಳ ಆಡಳಿತದ ವಿಷಯದಲ್ಲಿ ಯಾವುದೇ ಒಂದು ಕೊನೆಯ ನಿರ್ಣಯವನ್ನು ಬೇಗನೇ ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಮಾಡುವುದಕ್ಕೆ ಅಪೇಕ್ಷೆ ಮಾಡುತ್ತೇನೆ.

ಇನ್ನು ಎ. ಜಿ. ರಾಮಚಂದ್ರರಾಯರ ಕಮಿಟಿಯ ರಿಪೋರ್ಟಿನ ವಿವರ ಪ್ರಸಿದ್ಧವಾಗಿದೆ. ನಾವೆಲ್ಲರೂ ಅದನ್ನು ವಿಚಾರ ಮಾಡಬೇಕಾದ್ದು ಅವಶ್ಯ. ಆದ್ದರಿಂದ ಅದನ್ನು ಈ ಸಭೆಯ ಮುಂದೆ ಇಡಬೇಕು. ಆದರೆ ಇದರಲ್ಲಿ ಒಂದು ಮುಖ್ಯವಾದ ವಿಷಯವೇನೆಂದರೆ ನಮ್ಮ ರಾಜ್ಯದಲ್ಲಿರುವ ಜಿಲ್ಲೆಗಳನ್ನು ಕಡಮೆ ಮಾಡಿ ಎಲ್ಲವನ್ನೂ ಸಮವಾಗಿ ವಿಂಗಡಿಸಬೇಕು. ಈ ವಿಷಯದಲ್ಲಿ ಕೂರ್ಗ್ ಮತ್ತು ಇತರೆ ಕೆಲವು ಜಿಲ್ಲೆಗಳವರು ಒಪ್ಪುವುದಿಲ್ಲವೆಂದು ಕೇಳಿದೆನು. ನನ್ನ ಅಭಿಪ್ರಾಯದಲ್ಲಿ ಯಾರೇ ಆಗಲಿ ಅವರು ಒಪ್ಪಲಿ ಒಪ್ಪದೇ ಇರಲಿ ರಾಜ್ಯದ ಹಿತ ದೃಷ್ಟಿಯಿಂದ ಜಿಲ್ಲೆಗಳ ಪುನರ್ ರಚನೆಯನ್ನು ಸರ್ಕಾರದವರು ಮಾಡಲೇಬೇಕು. ಹಿಂದೆ ರಾಜ ಮಹಾರಾಜರುಗಳನ್ನು ತೆಗೆಯುವಾಗ ಎಷ್ಟೋ ಹೋರಾಟಗಳಾದುವು. ಆದರೂ ಅದನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಅದೇ ರೀತಿ ಇವೊತ್ತಿನ ದಿವಸ ಜಿಲ್ಲೆಗಳ ಪುನರ್ ರಚನೆಯ ಬಗ್ಗೆ ಯಾರೇ ಹೋರಾಟ ಮಾಡಿದರೂ ಕೂಡ ವಿಶಾಲ ಹಿತದೃಷ್ಟಿಯಿಂದ ಅದನ್ನು ವಿಚಾರ ಮಾಡುವ ಹಕ್ಕು ಬಾಧ್ಯತೆಗಳು ಸರ್ಕಾರಕ್ಕೆ ಇದೆ. ಆದ್ದರಿಂದ ಈ ಬಗ್ಗೆ ಉದಾರ ಮನಸ್ಸಿನಿಂದ ವಿಚಾರ ಮಾಡಿ ಈ ಜಿಲ್ಲೆಗಳ ಪುನರ್ ರಚನೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ.

2-30 P.M.

ತ್ಯಾಗದ ಪ್ರಶ್ನೆ ಇಲ್ಲವೇ ಇಲ್ಲ. ಹಾನಿಯೇನೂ ಆಗುವಂಥದಿಲ್ಲ. ಕೇವಲ ಒಂದು ವಿಧದ ಭ್ರಮೆ ಕೆಲವರಿಗಿದೆ ಅಷ್ಟೆ. ವೃತ್ತಪತ್ರಿಕೆಗಳಲ್ಲಿ ಹೀಗೆ ಜಿಲ್ಲೆಗಳನ್ನು ಕಡಮೆ ಮಾಡಬೇಕೆಂಬ ಅಭಿಪ್ರಾಯ ಪಟ್ಟಿದ್ದಾರೆಂದು ಬಂದಿತ್ತು. ಅದರ ಮೇಲೆ ಹೇಳುತ್ತಿದ್ದೇನೆ. ಇದನ್ನು ಗಮನಿಸಿ, ಜಿಲ್ಲೆಗಳು ಚಿಕ್ಕವಾಗಿರಬೇಕೇ, ದೊಡ್ಡವಾಗಿರಬೇಕೇ, ಎಷ್ಟು ವಿಸ್ತಾರವಾಗಿರಬೇಕೆಂಬುದನ್ನು ನಿರ್ಧರಿಸಿ ಎಲ್ಲಾ ಜಿಲ್ಲೆಗಳೂ ಒಂದೇ ಸಮನಾಗಿರುವಂತೆ ಮಾಡುವುದು ಒಳ್ಳೆಯದು. ಇದರಿಂದ ಎಲ್ಲ ಜಿಲ್ಲೆಗಳಿಗೂ ಆರ್ಥಿಕ ಅನುಕೂಲತೆ ಒಂದೇ ಸಮನಾಗಿರುವಂತೆ ಮಾಡಬಹುದು. ಎಲ್ಲಾ ಜಿಲ್ಲೆಗಳಿಗೂ ಅನುಕೂಲ ಸಾಕಷ್ಟು ಸಿಕ್ಕುತ್ತದೆ. ಅದಾದಮೇಲೆ ತಾಲ್ಲೂಕುಗಳನ್ನೂ ಕೂಡ ಪುನರ್ವಿಮರ್ಶೆ ಮಾಡಿ ಶಾಸ್ತ್ರೀಯವಾದ ಹಾಗೂ ಆಡಳಿತಕ್ಕೆ ಅನುಕೂಲವಾದ ರೀತಿಯಲ್ಲಿ ಆದಷ್ಟು ಬೇಗನೆ ಕಾಲವಿಳಂಬ ಮಾಡದೆ ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಇಂಥ ವಿಷಯಗಳನ್ನು ಚುನಾವಣೆಗಳ ಮುಂದೆ ಎಂದೂ ಕೈಕೊಳ್ಳುವುದಕ್ಕಾಗುವುದಿಲ್ಲ. ಇನ್ನು ಆರು ತಿಂಗಳುಗಳಲ್ಲಿ ಚುನಾವಣೆಗಳಿವೆಯೆನ್ನುವಾಗ ಇಂಥಾ

(ಶ್ರೀ ಎ. ಜೆ. ದೊಡ್ಡಮೇಟಿ)

ದ್ಯಕ್ಕೆ ಕೈಹಾಕಿದರೆ ಮುಂದೇನಾಗುತ್ತದೋ ಎಂದು ಹಿಂಜರಿಯುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಇನ್ನು ಹೆಚ್ಚು ಕಾಲ ವಿಳಂಬ ಮಾಡದೆ ನಿಖರವಾದ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕಾನೂನಿನ ಬಗ್ಗೆ ಏಕರೂಪತೆಯಿರುವ ವಿಚಾರ. ಈ ಕಾರ್ಯ ಇನ್ನೂ ನಮ್ಮ ದೇಶದಲ್ಲಿ ಪೂರ್ತಿ ಆಗಿಲ್ಲ. ಉಳಿದಿರುವ ಇನ್ನೂ ಅನೇಕ ಕಾನೂನುಗಳನ್ನು ಮುಂದಿನ ಬಡ್ಜೆಟ್ ಅಧಿವೇಶನದೊಳಗಾಗಿ ತಿದ್ದುಪಡಿ ಮಾಡಿ ದೇಶದಾದ್ಯಂತ ಏಕರೂಪವಾದ ಕಾನೂನುಗಳಿರುವಂತೆ ಮಾಡಬೇಕೆಂದು ಹೇಳುತ್ತೇನೆ.

ಆಹಾರಧಾನ್ಯಗಳ ಬೆಲೆಗಳನ್ನು ಇಳಿಸಬೇಕೆಂದು ಅನೇಕರು ಹೇಳುತ್ತಿದ್ದಾರೆ. ಈಗ ಹೀಗೆ ಹೇಳುವುದೇ ಒಂದು fashion ಆಗಿಬಿಟ್ಟಿದೆ. ಆದರೆ ಸರ್ಕಾರದವರು ಒಂದಂಶವನ್ನು ಮನಗಾಣಬೇಕು. ವ್ಯವಸಾಯಗಾರರು ವ್ಯವಸಾಯವನ್ನು ಜೀವನದ ಒಂದು ಉದ್ಯೋಗವಾಗಿ ನಡೆಸುತ್ತಿದ್ದಾರೆ. ಅವರ ಜೀವನವೂ ನಡೆಯಬೇಕು, ಅವರ ಮಕ್ಕಳ ವಿದ್ಯಾಭ್ಯಾಸ ಇದರಿಂದಲೇ ಜರುಗಬೇಕಾಗಿದೆ. ಬಟ್ಟೆಬರೆ ಕಾಣಿಕೆಗಳು ಇದರಿಂದಲೇ ಆಗಬೇಕು. ಕೊನೆಯಲ್ಲಿ ಅವರು ನಗರವಂತರ ಅಂತಸ್ತಿಗೆ ಬರಬೇಕು. ಆದ್ದರಿಂದ ಇವುಗಳೊಂದನ್ನೂ ನೋಡದೆ ಕೇವಲ ಬೆಲೆ ಇಳಿಸುವ ಒಂದೇ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಕ್ರಮ ಕೈಕೊಳ್ಳುವುದು ಸೂಕ್ತವಲ್ಲವೆಂದು ನಾನು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತು. ಬರುವ ವರ್ಷದೊಳಗಾಗಿ ಈ ರಾಜ್ಯಕ್ಕೆ ಕರ್ಣಾಟಕ ರಾಜ್ಯ ಎಂಬ ಹೆಸರಿಡಬೇಕು. ನಮ್ಮ ಗವರ್ನರ್ ತಮ್ಮ ಮುಂದಿನ ಭಾಷಣದಲ್ಲಿ ಈ ರಾಜ್ಯವನ್ನು ಕರ್ಣಾಟಕ ರಾಜ್ಯ ಎಂಬ ಹೆಸರಿನಿಂದ ಕರೆಯುವಂತಾಗಬೇಕೆಂದು ನನ್ನ ಆಶೆ. ಇದನ್ನು ಆಗ ಮಾಡದೆ ಇದ್ದರೆ ನಮ್ಮಲ್ಲಿ ಪ್ರತ್ಯೇಕತಾ ಮನೋಭಾವನೆ ಬೆಳೆದು ನಮ್ಮ ರಾಜ್ಯ ಎರಡು ಮೂರು ಭಾಗಗಳಾಗಿ ಒಡೆದುಹೋಗುವುದಕ್ಕೆ ಕಾರಣವಾದೀತು. ಇದನ್ನು ಗಮನದಲ್ಲಿಟ್ಟು ಈ ರಾಜ್ಯಕ್ಕೆ 'ಕರ್ಣಾಟಕ' ಎಂಬ ಹೆಸರಿಡಲು ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

‡ ಶ್ರೀ ಜೆ. ದೇವಯ್ಯ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಸಂಬಂಧದಲ್ಲಿ ಎರಡು ಮೂರು ವಿಷಯಗಳನ್ನು ಸಭಾಪತಿಗಳ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ನಿಂತಿದ್ದೇನೆ.

ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ವ್ಯವಸಾಯದ ಅಭಿವೃದ್ಧಿಗಾಗಿ Package Scheme ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಜಾರಿಗೆ ತಂದು ಒಂದು ಕೋಟಿ ರೂಪಾಯಿಗಳ ವೆಚ್ಚ ಮಾಡುವವರಿದ್ದಾರೆ. ಇದರಿಂದಾಗಿ ರೈತರಿಗೆ ಬಹಳ ಅನುಕೂಲವಾಗುತ್ತದೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಆದರೆ ವಾಸ್ತವವಾಗಿ ಯಾವ ರೀತಿ ವ್ಯವಸಾಯ ಮಾಡಿಸಬೇಕು, ಉತ್ಪತ್ತಿ ಹೇಗೆ ಹೆಚ್ಚು ಮಾಡಬೇಕೆಂಬ ಬಗ್ಗೆ ಒಂದೆರಡು ಸಲಹೆಗಳನ್ನು ಸರ್ಕಾರದವರಿಗೆ ಕೊಡಬಯಸುತ್ತೇನೆ.

ಸರ್ಕಾರದವರು ವ್ಯವಸಾಯಗಾರರ ಅನುಕೂಲಕ್ಕಾಗಿ ಅನೇಕ ತೆರನಾದ ಸಾಲಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಆದರೆ ಅದು ಯಾವ ರೀತಿ ಖರ್ಚಾಗುತ್ತಿದೆಯೆಂಬುದನ್ನು ಅಧಿಕಾರ ವರ್ಗದವರು ಸ್ವಲ್ಪ ನಿಗಾವಿಡಬೇಕು.

ವ್ಯವಸಾಯ ಉತ್ತಮಗೊಂಡು ಹೆಚ್ಚು ಹೆಚ್ಚು ಪ್ರದೇಶ ಸಾಗಿಗೆ ಬರಬೇಕಾದರೆ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳ ಉಪಯೋಗ ಹೆಚ್ಚಬೇಕು. ಹಿಂದೆ 5 ವರ್ಷದ ಕೆಳಗೆ ಟ್ರಾಕ್ಟರ್ ಮತ್ತು ಬುಲ್‌ಡೋಜರುಗಳನ್ನು ರೈತರಿಗೆ ಬಹಳ ಕಡಮೆ ಬೆಲೆಗೆ ಕೊಟ್ಟು ಆತನು ಆಬಾದು ಮಾಡುವುದಕ್ಕೆ ಸಹಾಯ ಮಾಡುತ್ತಿದ್ದರು. ಈಗಲಾದರೋ ಬುಲ್‌ಡೋಸರ್ ಉಪಯೋಗಿಸಬೇಕಾದರೆ ಒಂದು ಘಂಟೆಗೆ 24 ರೂಪಾಯಿ ಕೊಡಬೇಕೆಂದಿದ್ದಾರೆ. ಟ್ರಾಕ್ಟರಿಗೆ ಘಂಟೆ 18 ರೂಪಾಯಿ charge ಮಾಡುತ್ತಿದ್ದಾರೆ. ಹೀಗಿದ್ದರೆ ರೈತರು ಯಾವರೀತಿ ಇವನ್ನು ತೆಗೆದುಕೊಂಡು ವ್ಯವಸಾಯ ಮಾಡಿಯಾರು ಎಂಬುದನ್ನು ಯೋಚನೆ ಮಾಡಬೇಕು.

ನೀರಾವರಿ ಏರ್ಪಾಡಿರತಕ್ಕ ಸ್ಥಳದಲ್ಲಿ ಸಾಲಕ್ಕೆ ಬದಲಾಗಿ ಯಾವುದಾದರೂ ಗ್ರಾಂಟ್ ರೂಪದಲ್ಲಿ ರೈತರಿಗೆ ಹಣ ಒದಗಿಸಿ ಕೊಟ್ಟರೆ ಹೆಚ್ಚಿಗೆ ಆಹಾರ ಧಾನ್ಯಗಳ ಬೆಲೆಯನ್ನು ಕಡಮೆಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಹೆಚ್ಚಿಗೆ ಆಹಾರವನ್ನು ಬೆಳೆಯುವುದಕ್ಕೆ ಗೊಬ್ಬರ ಮುಖ್ಯ. ಸೀಮೆಗೊಬ್ಬರ—ಅಮೋನಿಯಂ ಸಲ್ಫೇಟ್ ಹಿಂದೆ 10 ರೂಪಾಯಿ ಇದ್ದುದು ಈಗ 45 ರೂಪಾಯಿಯಾಗಿದೆ. ಆದ್ದರಿಂದ ಹಸುರೆಲೆ ಗೊಬ್ಬರ ಹೆಚ್ಚು ಹೆಚ್ಚು ಉಪಯೋಗಕ್ಕೆ ತರುವ ವ್ಯವಸ್ಥೆ ಮಾಡಬೇಕು. ಸರ್ಕಾರಕ್ಕೆ ಸ್ವಲ್ಪ ನಷ್ಟವಾದರೂ ಚಿಂತೆಯಿಲ್ಲ. ರೈತರಿಗೆ ಸಕಾಲದಲ್ಲಿ ಕಡಮೆ ದರದಲ್ಲಿ ಹಸುರೆಲೆ ಗೊಬ್ಬರದ ಬೀಜಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ಹೆಚ್ಚು ಆಹಾರ ಬೆಳೆಯಲು ಸಾಧ್ಯವಾಗುತ್ತದೆ.

ಈಗ ಸರ್ಕಾರದವರು ರೈತರಿಗೆ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಬಂಡಿಗಳನ್ನು ತೆಗೆದುಕೊಳ್ಳುವುದಕ್ಕೆ ಉಪ್ಪು ತೆಗೆದುಕೊಳ್ಳುವುದಕ್ಕೆ ಹೀಗೆಲ್ಲ ರೈತರಿಗೆ ಸಾಲಗಳನ್ನು ಕೊಡುತ್ತಿದ್ದಾರೆ. ಇದನ್ನು ತೆಗೆದುಕೊಳ್ಳತಕ್ಕ ಜನರು ನಿಜವಾಗಿ ಜಮೀನು ಆಬಾದು ಮಾಡುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಬೇಡವೇ ? ದುಡ್ಡು ತೆಗೆದುಕೊಂಡವರು ಎತ್ತು—ಗಾಡಿ ಕೊಂಡುಕೊಂಡರೇ, ಉಪ್ಪಿಗಾಗಿ ಸಾಲ ತೆಗೆದುಕೊಂಡವರು ಉಪ್ಪನ್ನು ಕೊಂಡುಕೊಂಡರೇ ಎಂಬುದನ್ನು ಅಧಿಕಾರಿಗಳು ನೋಡಬೇಕು.

ಸಹಕಾರ ಸಂಘಗಳ ವಿಚಾರದಲ್ಲಿ ಒಂದೆರಡು ಮಾತು. ಇಂಡಿಯಾ ಸರ್ಕಾರದವರು ಇದಕ್ಕೆ ಬಹಳ ಪ್ರಾಮುಖ್ಯತೆಯನ್ನು ಕೊಟ್ಟು, ರೈತರಿಗೆಲ್ಲಾ ಅನುಕೂಲವಾಗಲೆಂಬ ದೃಷ್ಟಿಯಿಂದ ಸಹಕಾರ ಸಂಘಗಳನ್ನು ಒದಗಿಸುತ್ತಿದ್ದಾರೆ. ಇದು ನಮಗೆಲ್ಲಾ ಸಂತೋಷ. ಆದರೆ ಇಂಥ ಸೊಸೈಟಿಗಳಲ್ಲಿ ಒಳಪರಿಸ್ಥಿತಿ ಹೇಗಿವೆಯೆಂದರೆ, ಅಲ್ಲಿ ಕೆಲವರು ಗುಂಪುಗಳನ್ನು ಮಾಡಿಕೊಂಡು ಹೆಚ್ಚು ಷೇರುದಾರರುಗಳು ಬರುವುದಕ್ಕೆ ಅವಕಾಶ ಕೊಡದೆ ತಮ್ಮ ತಮ್ಮವರೇ ಸೊಸೈಟಿಯ ಲಾಭವನ್ನು ಹೊಂದಬೇಕೆಂದು ಮಾಡುತ್ತಿದ್ದಾರೆ. ಇದನ್ನು ಸರ್ಕಾರದವರು ಗಣನೆಗೆ ತೆಗೆದುಕೊಳ್ಳಬೇಕು. ಎಷ್ಟೋ ವೇಳೆ ರಿಜಿಸ್ಟ್ರಾರ್ ಅವರು ಹೆಚ್ಚಿಗೆ ಷೇರುದಾರರುಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟರೂ, ಅವರ ಮಾತನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳದೆ ಇರುವ ಸಂದರ್ಭಗಳಿವೆ. ಸರ್ಕಾರದವರು ಇಂಥ ಸನ್ನಿವೇಶಗಳಿರುವುದನ್ನು

ಮನಗಂಡು ರೈತರುಗಳಿಗೆಲ್ಲರಿಗೂ ಅವಕಾಶ ದೊರೆಯುವಂತೆ ಮಾಡಬೇಕು.

ವ್ಯವಸಾಯಗಾರರಿಗೆ ಮರಮುಟ್ಟುಗಳು ಮುಖ್ಯವಾಗಿ ಸುಲಭದಲ್ಲಿ ಸಿಕ್ಕಬೇಕು. ಹಿಂದೆ ಒಂದು ಗಾಡಿ 50 ರೂಪಾಯಿಗಳಿದ್ದುದು ಈಗ 500 ರೂಪಾಯಿಯಾಗುತ್ತದೆ. ಹಿಂದೆ ಸರ್ಕಾರದವರು ಕಾಡಿನಲ್ಲಿರುವ ಮರಗಳನ್ನು ರೈತರ ಮರಮುಟ್ಟುಗಳ ಉಪಯೋಗಕ್ಕೆಂದು ಸುಲಭ ಬೆಲೆಯಲ್ಲಿ ಕೊಡುತ್ತಿದ್ದರು. ಈಗ ಅದು ತಪ್ಪಿಹೋಗಿದೆ. 500 ರೂಪಾಯಿಗಳನ್ನು ಕೊಟ್ಟು ಬಡರೈತ ಹೇಗೆ ಗಾಡಿ ಮಾಡಿಕೊಂಡಾನು ?

ಈ ಕಷ್ಟವನ್ನು ಮನಗಂಡು ಹಿಂದಿನಂತೆ ರೈತರುಗಳಿಗೆ ಸುಲಭ ದರದಲ್ಲಿ ಮರಗಳು ಸಿಕ್ಕುವಂತೆ ಮಾಡಬೇಕೆಂದು ಹೇಳುತ್ತೇನೆ.

ಕೆಲವು ಕೋಮುಗಳವರು ತಾವು ಬಡವರು ತಮಗೆ ಸಹಾಯ ಮಾಡಬೇಕೆಂದು ಹೇಳುತ್ತಿದ್ದಾರೆ. ಬಡತನವೆಂಬುದು ಯಾವ ಒಂದು ಕೋಮಿಗೆ ಮಾತ್ರವೇ ಅಂಟಿದ್ದಲ್ಲ. ಪ್ರತಿಯೊಂದು ಕೋಮಿನಲ್ಲೂ ಬಡವರಿದ್ದಾರೆ. ಕೋಟ್ಯಾಧೀಶರು ಇರುವ ಕೋಮಿನಲ್ಲೂ ಬಡವರಿದ್ದೇ ಇರುತ್ತಾರೆ. ಆದ್ದರಿಂದ ಬಡತನದ ಸರ್ವೆ ನಡೆಸಿ ಬಡವರು ಯಾವ ಜಾತಿಯವರೇ ಆಗಿರಲಿ ಅವರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ. ಪ್ರಜಾ ಸರ್ಕಾರ ಬಂದ ಮೇಲೆ ದೇಶದ ದಾರಿದ್ರ್ಯವನ್ನು ದೂರ ಮಾಡುತ್ತದೆಂದು ಹೇಳಿದ್ದಾರೆ. ಆಂದ ಮೇಲೆ, ಬಡತನ ಸರ್ವೆಮಾಡಿ, ಯಾವ ಜಾತಿ, ಯಾವ ಸಂಬಂಧೀಕರೆಂದು ನೋಡದೆ ಎಲ್ಲರಿಗೂ ಸಹಾಯ ಮಾಡಿ. ಈಗ ಎಲ್ಲಿ ನೋಡಿದರೂ ಸಂಬಂಧಿಕರೆಂಬ ಬಾಂಧವ್ಯದ ಮೇಲೆಯೇ ಕೆಲಸಗಳು ನಡೆಯುತ್ತಿವೆ. ನಾನೀಗ ಆ ಪಕ್ಷ ಬಿಟ್ಟು ಈ ಪಕ್ಷಕ್ಕೆ ಬಂದಿರುವುದಾದರೂ ಏಕೆ? ಬಿಟ್ಟು ಬಂದಿರುವುದು ನನಗೆ ಎಷ್ಟೋ ನೋವಾಗಿದೆ. ಆದರೂ ನಾನು ಅವರನ್ನು ಬಿಟ್ಟಿದ್ದು ಏಕೆ ?

ಒಬ್ಬ ಸದಸ್ಯರು.—ಅವರಿಗೆ ಸೀಟ್ ಸಿಕ್ಕಲಿಲ್ಲ ಎಂದು.

ಶ್ರೀ ಜೆ. ದೇವಯ್ಯ.—ನನಗೆ ಶಕ್ತಿಯಿದೆಯೇ, ಇಲ್ಲವೇ ಎಂದು ತೋರಿಸಿಕೊಡಲು ನಾನು ಬೇರೆಯಾಗಿ ನಿಂತು ಆರಿಸಿಬಂದಿದ್ದೇನೆ. ಈಗಲೂ ನನಗೇನೂ ರಾಜಕೀಯದಲ್ಲಿ ಇರಬೇಕೆಂಬ ಇಚ್ಛೆ ಇಲ್ಲ. ನನಗೆ ವಯಸ್ಸಾಯಿತು. ಯಾರಾದರು ಬಂದು ಬೇಕಾದರೆ ಸ್ಥಾನ ಬಿಟ್ಟುಕೊಡಿ ಎಂದು ಕೇಳಲಿ, ಬಿಟ್ಟು ಕೊಡುತ್ತೇನೆ. ಇನ್ನೊಂದು ಪ್ರಾಮುಖ್ಯವಾದಂಥ ವಿಷಯವನ್ನು ಸಭಾಪತಿಗಳ ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಯಾವುದಾದರೂ ಸರಿಯೇ, ಸಂಘದ ಮೂಲಕ ನಡೆಸತಕ್ಕ ಸಕ್ಕರೆ ಕಂಪೆನಿಯ ಆಡಳಿತವನ್ನು ಎಂದಿಗೂ ನಾನ್-ಅಫಿಷಿಯಲ್ಸ್‌ಗೆ ಕೊಡಬೇಡಿ. ಏಕೆಂದರೆ ಸರ್ಕಾರದವರು ಪ್ರಜೆಗಳ ದುಡ್ಡನ್ನು ಅಲ್ಲಿ ಹಂಚಬೇಕಾಗುತ್ತದೆ. ಪಾಂಡವಪುರದ ಸಕ್ಕರೆ ಕಂಪೆನಿಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಜನಗಳ ಷೇರು ಮೊಬಲಗು ಸುಮಾರು 13 ಅಥವಾ 14 ಲಕ್ಷ ರೂಪಾಯಿಗಳಿವೆ. ಹೀಗೆ ಜನಗಳು ಸುರಿದಿರತಕ್ಕ ದುಡ್ಡನ್ನು ಮತ್ತು ಸರ್ಕಾರದವರು ಕೊಟ್ಟಿರುವ ಒಂದು ಕೋಟಿ ರೂಪಾಯಿಗಳ ವ್ಯವಹಾರ ನಡೆಸತಕ್ಕ ಆ ಸಕ್ಕರೆ ಕಂಪೆನಿಯ ಆಡಳಿತವನ್ನು ಒಬ್ಬ ನಾನ್-ಅಫಿಷಿಯಲ್ ಛೇರ್ಮನ್ನರ ಕೈಗೆ ಕೊಡುವುದು ಬಹಳ ಅನರ್ಥವಾಗುತ್ತದೆ. ನೀವು ಆ ರೀತಿ ಮಾಡುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೆ ಆ ರೀತಿ ಮಾಡಿದರೇನು ಎಂಬ ಒಂದು ಧೋರಣೆಯು ಈ ಸಂದರ್ಭದಲ್ಲಿ ಬೇಡ. ಅಲ್ಲಿ ದಕ್ಷರಾದ ಅಧಿಕಾರ ವರ್ಗದವರು ಇರಬೇಕು. ಮೂರು ವರ್ಷಗಳಿಂದಲೂ ಡೈರೆಕ್ಟರಾಗಿರುವುದರಿಂದ ನನಗೆ ಚೆನ್ನಾಗಿ ಅನುಭವ ಇದೆ. ಅದಕ್ಕೆ ಡಿವಿಜನಲ್ ಕಮಿಷನರ್ ಆದ ಶ್ರೀಮಾನ್ ಬೀರಪ್ಪನವರು ಅಧ್ಯಕ್ಷರು. ನಾನು ಈ ಅಧ್ಯಕ್ಷರ ಮುಖಾಂತರ ಅಲ್ಲಿನ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದೆ. ಯಾವ್ಯಾವ ಸಂದರ್ಭಗಳಲ್ಲಿ ಏನೇನು ನಡೆವಳಿಕೆಗಳು ನಡೆದಿವೆ. ಹಿಂದೆ ಏತಕ್ಕೋಸ್ಕರ ಈ ಕಂಪೆನಿ ಹಿಂದೆ ಬಿದ್ದುದು ಮತ್ತು ಸರ್ಕಾರದವರು ಈಗ ಮುಂದೆ ಬಂದು ಯಾವರೀತಿ ಸಹಾಯ ಮಾಡಿದರು ಎಂಬ ಬಗ್ಗೆ ಅಂಕಿ ಅಂಶಗಳನ್ನು ತೋರಿಸಬೇಕು. ಪಾಂಡವಪುರ ಒಂದೇ ಅಲ್ಲ. ಬಳ್ಳಾರಿಯಲ್ಲೂ ಸರ್ಕಾರದವರು ಕೊಟ್ಟಿರುವ ದುಡ್ಡನ್ನು ಯಾವ ರೀತಿ ವಿನಿಯೋಗಿಸಿದ್ದಾರೆಂಬ ಬಗ್ಗೆಯೂ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಬೇಕು. ಮುಖ್ಯವಾಗಿ ಸರ್ಕಾರದ ದುಡ್ಡನ್ನು ಬಿಗಿ ಹಿಡಿಯುವುದಕ್ಕೋಸ್ಕರ ಈ ಪ್ರಯತ್ನಗಳನ್ನು ಮಾಡಬೇಕು. ಇಂತಹ ಕಂಪೆನಿಗಳಲ್ಲಿ ನಾನ್-ಅಫಿಷಿಯಲ್ ಛೇರ್ಮನ್ ಇದ್ದರೆ ನ್ಯಾಯವೇ ಅನ್ಯಾಯವೇ ಎಂಬುದನ್ನು ನೀವು ಅಂಕಿ ಅಂಶಗಳನ್ನು ತರಿಸಿ ಆಲೋಚನೆಮಾಡಿ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡುವುದು ಯೋಗ್ಯವಾಗಿದೆ. ಎಲ್ಲಿ ಸಹಕಾರ ಸಂಘದ ಸಕ್ಕರೆ ಕಂಪೆನಿ ಇದೆಯೋ ಅಲ್ಲಿ ದಕ್ಷರಾದ ಅಧಿಕಾರ ವರ್ಗದವರನ್ನು ಇಟ್ಟು ಸರ್ಕಾರದವರು ಬಹಳ ಭದ್ರತೆಯಿಂದ ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. ನಾನು ಇದನ್ನು ಸುಮ್ಮನೆ ಹೇಳುತ್ತಾ ಇಲ್ಲ. ನನ್ನ 3 ವರ್ಷಗಳ ಅನುಭವವನ್ನು ಸಭಾಪತಿಗಳ ಮೂಲಕ ಅಲ್ಲಿ ಕಂಟ್ರಾಕ್ಟರ್‌ನಾಗಿ ಕೆಲಸ ಮಾಡಿದ ಮೇಲೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಏನಾದರೂ ಗುಂಪಿನ ಮನೋಭಾವ ತೋರ್ಪಡಿಸಿದರೂ ಈಗಿನ ಮಂತ್ರಿಗಳು ಹಾಗೆ ಮಾಡುತ್ತಾರೆಂಬ ಸಂಶಯ ನನಗಂತೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಸಕ್ಕರೆ ಕಂಪನಿ ಛೇರ್ಮನ್ ಆಗಿ ನಾನ್-ಅಫಿಷಿಯಲ್ ಮೆಂಬರ್ಸ್ ಇರಬೇಕಾದರೆ ಮಂತ್ರಿಮಂಡಲ 25 ಕ್ಕಿಂತ 30 ಆಗಬೇಕೆಂದು ತಮ್ಮ ಸಲಯೇ ?

ಶ್ರೀ ಜೆ. ದೇವಯ್ಯ.—ಅದು ತಮ್ಮ ಅಭಿಪ್ರಾಯ. ಆದರೂ ಸರ್ಕಾರದವರು ಇದನ್ನೆಲ್ಲಾ ಯೋಚನೆ ಮಾಡಬೇಕು.

ಇನ್ನು ದೊಡ್ಡ ದೊಡ್ಡ ಮೇಜರ್ ಕೆರೆಗಳ ವಿಚಾರವಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಅನೇಕ ಸರ್ಕಾರಗಳವರು ಮುಂದೆ ಬಂದು ಇತ್ತೀಚೆಗೆ ಕೆರೆ ಕಟ್ಟೆಗಳನ್ನು ಮತ್ತು ಪಿಕಪ್ ಚಾನಲ್‌ಗಳನ್ನು ದೊಡ್ಡ ದೊಡ್ಡದಾಗಿ ಕಟ್ಟಿದ್ದಾರೆ. ಈ ಯೋಜನೆಯಲ್ಲಿ ಒದಗಿಸಲಾಗಿದ್ದ ದುಡ್ಡನ್ನು ಸದುಪಯೋಗ ಪಡಿಸಿಕೊಂಡಿದ್ದಾರೆ. ಆದರೆ ನಮ್ಮ ಸರ್ಕಾರದಲ್ಲಿ ಈ ಬಾಬಿಗೆ ಬಡ್ಜೆಟ್ಟಿನಲ್ಲಿ ಹಣ ಒದಗಿಸಿದ್ದರೂ ಯಾವ ಕೆಲಸವೂ ಆಗಲಿಲ್ಲ. ಯಾವ ಜಮೀನು ಸಹ ಐದು ವರ್ಷಗಳಿಂದಲೂ ಆಬಾದು ಆಗಲಿಲ್ಲ. ಯಾವರೀತಿ ನಮ್ಮ ಸರ್ಕಾರದವರು ನೆರವು ಕೊಟ್ಟಿದ್ದಾರೆಂಬುದನ್ನು ಈ ಮಾನ್ಯ ಸಭಾಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ದುಡ್ಡೇನೋ ಖರ್ಚು ಮಾಡುತ್ತಾರೆ, ಫಲವೇನೋ ಇಲ್ಲ. ದುಡ್ಡು ಎಲ್ಲಾ ಮಣ್ಣಿನ ಪಾಲಾಗುತ್ತಿದೆ. ನೀರೇ ಬರುವಹಾಗಿಲ್ಲ. ಕೆರೆ ಕಟ್ಟೆಗಳನ್ನ ಕಟ್ಟಿಸಿದ್ದಾರೆ. ಆದರೆ ಅದರಲ್ಲಿ ನೀರೇ ತುಂಬುವಹಾಗಿಲ್ಲ. ಪಿಕಪ್ ಚಾನಲ್‌ಗಳಿಂದ ನೀರೇ

(ಶ್ರೀ ಜೆ. ದೇವಯ್ಯ)

ಬರುವುದಿಲ್ಲ. ಅನೇಕ ದೊಡ್ಡ ದೊಡ್ಡ ಮೇಜರ್ ಕೆರೆಗಳನ್ನು ಬೇಕಾದರೆ ಮಾಡಲಿ. ಆದರೆ ಸಣ್ಣ ಸಣ್ಣ ಕೆರೆಗಳ ಮತ್ತು ಸಣ್ಣ ಸಣ್ಣ ನೀರಾವರಿ ಯೋಜನೆಗಳ ಕೆಲಸವೇನಾದರೂ ತೆಗೆದುಕೊಂಡರೆ ಅದು ಬೇಗ ಬೇಗನೆ ಮುಗಿದು 6 ತಿಗಳುಗಳಲ್ಲಿ ವ್ಯವಸಾಯಕ್ಕೆ ಯೋಗ್ಯವಾದುದಾಗಬೇಕು. ಇಲ್ಲದೆ ಇದ್ದರೆ ಹೆಚ್ಚು ದುಡ್ಡು ಖರ್ಚು ಮಾಡಿದರೂ ಏನು ಪ್ರಯೋಜನವೆಂದು ನಾನು ಕೇಳುತ್ತೇನೆ. ಆ ತರಹ ಏರ್ಪಾಡು ಮಾಡಿ ದುಡ್ಡನ್ನು ಸದುಪಯೋಗ ಪಡಿಸಬೇಕೇ ಹೊರತು ವ್ಯರ್ಥವಾಗಿ ಹಣ ಖರ್ಚು ಮಾಡಬಾರದು ಎಂದು ನಾನು ಹೇಳುತ್ತೇನೆ.

ಇನ್ನು ಇಲ್ಲಿ ಟಿಬೆಟ್ ಜನಗಳು ಬಂದು ಸೇರಿದ್ದಾರೆ. ಅವರಿಗೆ ವಿದ್ಯಾಭ್ಯಾಸವನ್ನು ಇಲ್ಲಿ ಕನ್ನಡದಲ್ಲಿಯೂ ಮತ್ತು ಟಿಬೆಟ್ ಭಾಷೆಯಲ್ಲೂ ಷುರು ಮಾಡುತ್ತಾರೆ. ನನ್ನ ಮಾನ್ಯ ಮಿತ್ರರಾದ ಶ್ರೀಪರ್ವ ದೊಡ್ಡಮೇಟಿ ಯವರು ಐದಾರು ವರ್ಷಗಳಿಂದಲು ನಮ್ಮ ಮೈಸೂರು ಕರ್ಣಾಟಕ ಪ್ರಾಂತ್ಯ, ಕನ್ನಡಪ್ರಾಂತ್ಯವಾಗಬೇಕೆಂದು ಅವರು ಈ ಸಭೆಯ ಸದಸ್ಯರಾಗಿ ಬಂದಲಾಗಾಯಿತು ಹೇಳುತ್ತಿದ್ದಾರೆ. ಕರ್ಣಾಟಕ ಪ್ರಾಂತ್ಯ ರಚನೆ ಯಾದ ಮೇಲೆ ವಿದ್ಯಾಭ್ಯಾಸಗಳೆಲ್ಲಾ ಕನ್ನಡದಲ್ಲಿಯೇ ಷುರುವಾಗಬೇಕೆಂದು ನಾನು ಹೇಳುತ್ತೇನೆ. ಅದರ ಬಗ್ಗೆ ಅವರು ನಿರ್ಣಯವನ್ನು ಸಹ ಈ ಸಭೆಯ ಮುಂದೆ ಮತ್ತು ಸರ್ಕಾರದ ಮುಂದೆ ತಂದಿದ್ದಾರೆ. ಈ ಬಗ್ಗೆ ಮುಂದೆ ಮಾತನಾಡುವುದಕ್ಕೆ ಅವಕಾಶ ವಿರುವುದರಿಂದ, ಅಧ್ಯಕ್ಷರು ಈಗ ಸಾಕಷ್ಟು ಕಾಲಾವ ಕಾಶವಿಲ್ಲವೆಂದು ಹೇಳಿರುವುದರಿಂದ ನನ್ನ ಮಾತನ್ನು ಇಲ್ಲಿಗೆ ಮುಗಿಸುವುದಕ್ಕಾಗಿ ಉದ್ದೇಶಪಟ್ಟಿದ್ದೇನೆ.

Smt. VIJAYADEVI RAGHAVENDER RAO (Chitapur).—Sir, I support the Motion of Thanks which has been brought before us by the Hon'ble Member Sri Ganji Veerappa. I would like to support his suggestions and I would also like to make a few observations in this regard. Being a Lady Member first, I would like to speak on the Social Welfare programmes which the Governor has very fittingly mentioned in his Address. After hearing the speech that was laid before us, we have come down to the informed and uninformed and healthy and unhealthy criticisms which have been poured on this side of the House from the Opposition Benches. But still, we the Members on this side will welcome all those. Not only that. We act as buffers for any criticism that comes before us. We do admit that we do have some defects. But still, if correct and proper suggestions as also criticisms come from the Opposition Benches, we would like to rectify all our defects. Here, one of the Members started saying that our social welfare is just a Sadarama Nataka because he said, I believe knowingly or unknowingly, there is no co-ordinated welfare extension projects. But the social welfare Board not only have co-ordinated welfare extension projects, but it is conducting condensed courses of training for women. This course pertains to women who are deserted as well as who are widows. Then we have got another programme, that is urban pilot project. That is for industrial working women. Here we have a creche and creche attendants. Then we have got balavadi classes; we have also got tailoring sections and so many other things. In the evenings we have adult education classes. Apart from all these things, our social welfare Board also gives grants-in-aid. We have given grants to Mahila Mandals and also to orphanages. Our Mahila Mandals are not only Bajan Mandalis, but I would like to stress here that Hindi classes and music classes and nursery classes are conducted. So, I have known so many Mahila Mandals and in this regard they are receiving grants-in-aid from our Social Welfare Board.

So, I feel that all the members should see the grants sanctioned first and then see how the harvest is. Not only this, in the year 1960-61 we had a substantial provision in this respect. In 1960-61 our Finance Minister had just kept one programme as an appendix to the main off shoot of our social welfare programmes. In 1961-62 our Finance Miuister nicely cut out that appendix also. I feel that we must have a substantial provision for the social welfare programmes. Here, I would like to mention one thing and that is, for de-notified tribes all these years we had some grants for agricultural colonies. But, that has been stopped since March 1961, I request the Governmnt to continue it.

Then, the Governor has clearly pointed out one of the best schemes which deals with the subsidies to the Industrial Housing Schemes. I believe there are 4 to 5 patterns and one of them refers to the 34 tenements which have already been completed. Now, I believe there is one more application

pending before the Government with regard to the Industrial Housing Schemes for industrial workers, and that is from Shahabad. That will be a beneficial scheme if it comes out successful. This will be one of the kinds in all these five schemes. So, I request the Government to pay more attention to these industrial subsidised housing schemes.

Another important aspect which the Governor has mentioned is with regard to the fishery scheme. I have already spoken about fishery, *i.e.*, about food and feeding habits, transport and storage of fishes, mechanised fishing and the Japanese method of fishing. Still, one more suggestion I would like to make in this respect and that is about starting a few more research centres along with some of the aquaria. If we h ave an acquarium in our State it will be an asset to us because people will be attracted towards them—young and old women and men and boys and girls, all alike.So, I feel we must have more aquaria and I request the Government to pay more attention to this matter.

Mention is made of the Land Reforms and Inams Abolition Acts in the Address. Here, I would like to say regarding the inam lands of Koppal Taluk and Raichur. These lands belonged to one person who was a big Jagirdar in Hyderabad. He did not have anybody to inherit those lands, after his death. But soon after his death many people filed suist saying that they were the heirs. But after the States reorganisation the memlatdar has been authorised to settle the affairs, because if these cases are settled in Koppal Taluk alone the Government will have to pay a huge contribution. So, there will be a great demand on the State Exchequer. This question is pending for the last three years and I hope at least now the Government will pay attention to this matter. Even the publication of names of these villages in the Gazette is pending before the Government. So the Government must look into this matter and pay early attention to this matter.

The hon' ble member Sri Doddameti has mentioned about 50 miles limit. In some of the taluks in our side especially in Hyderabad Karnatak, we do not have any communications at all. There are no roads. I hope the Hon'ble Minister for Public Works who comes from that area and who had to taste once the pleasure of horse riding will look into this problem and try to relax the 50 miles limit wherever there are no communications. Very fittingly the Governor has mentioned the general hospitals and medical facilities to be given to the public. I was sorry to hear the other day when the Hon'ble Communist Member form Gulbarga spoke a few words about the Gulbarga Zanana Hospital. As far as my knowledge goes, the hospital there is well equipped and we are very happy and very fortunate in having an experienced and old lady doctor there. She works from morning till evening and between 8 and 10 O'clock in the nights ; she discusses some of the matters with the medical personnel. So, to say that whenever the Hon'ble Meamber went, the doctor was not available, is not correct.

In this connection I want to mention one thing about Ayurveda. Although much attention has been paid to it, there is no marked change or development in this regard and that is because we do not have standardised drugs. The percentage of the ingredients in those durgs is not known. So, research centres should be established to find out the percentages of the ingredients of all the drugs so that we can have standardised drugs and Ayurveda system may be suecessful.

SRI S. M. KRISHNA (Maddur).—I rise to a point of order. the Is reading of newspapers in the House allowed ?

MR. SPEAKER.—I do not see anybody reading the newspaper.

SMT. VIJAYADEVI RAGHAVENDER RAO.—The Governor has clearly mentioned the proposal regarding the nationalisation of text books. Here, I have one suggestion to make. In our sciecne textbooks, I believe, we do not have equivalent words in English in brackets for Kannada words. This

(SMT. VIJAYADEVI RAGHAVENDER RAO)

is very necessary. As regards the university education, now in the universities we do not have only Kannada as medium. English is our medium of instruction. So as long as we do not proceed to the university education in Kannada, we must have English equivalents for Kannada words.

With these observations, I would like to thank the Chair for giving me an opportunity to speak.

MR. SPEAKER.—I must tell the Hon'ble Members that for reading newspapers, there is a separate reading room.

The House will now rise and meet after half an hour.

The House adjourned for recess at Three of the Clock and reassembled at Thirty Minutes past Three of the Clock.

[MR. SPEAKER in the Chair.]

‡ಶ್ರೀ ಕೆ. ದೇವಯ್ಯ (ಮಲ್ಲೇಶ್ವರ)—ಮಾನ್ಯ ಅಧ್ಯಕ್ಷರೆ, ಈ ದಿನ ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕಾದ ಸಂದರ್ಭ ಬಂದಿದೆ. ನಾನಾದರೂ ಹೆಚ್ಚಿನ ಸಮಯವನ್ನು ನಮ್ಮ ಬೆಂಗಳೂರು ನಗರದ ಪರವಾಗಿ ಮಾತನಾಡಲು ವಿನಿಯೋಗ ಮಾಡಬೇಕಾಗಿದೆ. ನಾನು ಹಿಂದೆಯೇ ಹೇಳಿದ ಹಾಗೆ, ಮೈಸೂರು ಸಂಸ್ಥಾನದ ಪ್ರಜಾವರ್ಗದ ಬಹುಪಾಲು ಇಲ್ಲಿ ಕೇಂದ್ರೀಕೃತವಾಗಿದೆ. ಎಲ್ಲರೂ ಬೇರೆ ಕಡೆಗಳಿಂದ ಬಂದು ಇಲ್ಲಿ ತಮ್ಮ ವಾಸಸ್ಥಳವನ್ನು ಖಾಯಂ ಅಗಿ ಮಾಡಿ ಕೊಳ್ಳಲು ಅವಕಾಶ ಹೆಚಾಗಿದೆ. ಅದರಿಂದ ಜನಸಂಖ್ಯೆ ಇಲ್ಲಿ ದಿನೇದಿನೇ ಏರುತ್ತಾ ಬರುತ್ತಿದೆ.

ಮೊಟ್ಟ ಮೊದಲನೆಯದಾಗಿ ನಮ್ಮ ಮಕ್ಕಳ ವಿದ್ಯಾಭ್ಯಾಸದ ವಿಚಾರದಲ್ಲಿ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಬೆಂಗಳೂರಿನಲ್ಲಿ ಸರ್ಕಾರದವರು ಅನೇಕ ಪ್ರೈಮರಿ ಸ್ಕೂಲುಗಳನ್ನೂ ಮಿಡ್ಲ್‌ಸ್ಕೂಲುಗಳನ್ನೂ ಹೈಸ್ಕೂಲುಗಳನ್ನೂ ನಡೆಸಿಕೊಂಡು ಬರುತ್ತಿದ್ದಾರೆ. ಸರ್ಕಾರದವರು ನಡೆಸಿಕೊಂಡು ಬರುವ ಈ ವಿದ್ಯಾಲಯಗಳಲ್ಲಿ ಮಕ್ಕಳಿಗೆ ಸಾಕಷ್ಟು ಕಾನೂನುಬದ್ಧವಾದ ಸ್ಥಳಾವಕಾಶವಿರುವುದಿಲ್ಲ. ಮಕ್ಕಳನ್ನೂ ಕುರಿಗಳಂತೆ ಒಂದೊಂದು ಕೋಣೆಯಲ್ಲಿ ಸೇರಿಸಿ ಅವರಿಗೆ ವಿದ್ಯಾಭ್ಯಾಸವನ್ನೂ ಕೊಡುತ್ತಿದ್ದಾರೆ. ಅಲ್ಲಿ ಸರಿಯಾದ ಗಾಳಿಯಿರುವುದಿಲ್ಲ, ಬೆಳಕಿರುವುದಿಲ್ಲ. ಇದರಿಂದ ಖಂಡಿತವಾಗಿಯೂ ಮಕ್ಕಳ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮವುಂಟಾಗುತ್ತದೆ. ಖಾಸಗಿ ಜನರ ಮನೆಗಳನ್ನು ತೆಗೆದು ಕೊಂಡು ಅದರಲ್ಲಿ ಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ವಿದ್ಯಾಇಲಾಖೆಯಲ್ಲಿ ಒಬ್ಬೊಬ್ಬ ವಿದ್ಯಾರ್ಥಿಗೆ ಇಷ್ಟು ಸ್ಥಳವಕಾಶ ಬೇಕೆಂದು ಒಂದು ಕಾನೂನಿದೆ; ಅದನ್ನು ಅನುಸರಿಸುತ್ತಿಲ್ಲ. ಹೀಗಿದ್ದರೂ ಸರ್ಕಾರದವರು ಇವುಗಳಿಗೆ ಕಟ್ಟಡ ಕಟ್ಟಿಸಿ ಕೊಡುವ ವಿಚಾರದಲ್ಲಿ ಯಾವ ಒಂದು ತೀರ್ಮಾನವನ್ನೂ ತೆಗೆದು ಕೊಂಡಿಲ್ಲ, ಯಾವ ಧೋರಣೆಯನ್ನು ವ್ಯಕ್ತಪಡಿಸಿಲ್ಲ. ಒಂದು ವಿಷಯ ಪ್ರಾಯಶಃ ಇಲ್ಲಿ ಅನೇಕರಿಗೆಗೊತ್ತಿರಬಹುದು. ಆರ್ಕಾಟ್ ಶ್ರೀನಿವಾಚಾರ್ ರಸ್ತೆಯಲ್ಲಿ ಶಾಮಣ್ಣ ಬಿಲ್ಡಿಂಗ್ ಎಂಗಿದೆ. ಅದರಲ್ಲೊಂದು ಶಾಲೆಯಿದೆ. ಆ ಶಾಲೆಯ ಶತಮಾನೋತ್ಸವವನ್ನು ನಡೆಸುವವರಾಗಿದ್ದಾರೆ. ಸರ್ಕಾರದವರು ಆ ಕಟ್ಟಡವನ್ನು ಖಾಸಗಿ ಮನುಷ್ಯರಿಂದ ತೆಗೆದುಕೊಂಡು ಅಲ್ಲಿ ಶಾಲೆಯನ್ನು ನಡೆಸಿಕೊಂಡು ಬರುತ್ತಿದಾರೆ. ಆ ಪ್ರೈಮರಿ ಶಾಲೆ ಪ್ರಾರಂಭವಾಗಿ ನೂರುವರ್ಷವಾಗಿದೆ. ಅಲ್ಲಿ ಸರಿಯಾದ ಸ್ಥಳಾವಕಾಶವಿಲ್ಲ, ಮಕ್ಕಳಿಗೆ ಓದುವುದಕೆ ತೊಂದರೆಯಾಗಿದೆ. ಬಹಳ ಸಂಕುಚಿತ ಜಾಗದಲ್ಲಿ ಪಾಠ ಮಾಡ ಬೇಕಾಗಿದೆಯೆಂದು ಇಲಾಖೆಯವರು ಹೇಳಿದ್ದಾರೆ. ಅಷ್ಟು ಹೆಚ್ಚಿನ ಜನ ಸಂಖ್ಯೆಯುಳ್ಳ ಆ ಪ್ರದೇಶಲ್ಲಿದ. ಸರ್ಕಾರದವರು ಅಲ್ಲಿನ ಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ನಡೆಯಿಸಲು ತಕ್ಕಷ್ಟು ಸ್ಥಳವನ್ನು ಮಾಡುವುದಿಲ್ಲವೆಂದರೆ, ಇದು ನಿಜವಾಗಿ ಶೋಚನೀಯವಾದುದು. ಮಿಡ್‌ಸ್ಕೂಲಿನಲ್ಲಿಯೂ ಇದೇ ರೀತಿ ಸ್ಥಳಾಭಾವವಾಗಿದೆ.

ನಮ್ಮ ರಾಜ್ಯಪಾಲರ ಭಾಷಣದಲ್ಲಿ ಮನೆಗಳ ನಿರ್ಮಾಣದ ವಿಷಯವನ್ನು ಹೇಳಿದ್ದಾರೆ. ನಮ್ಮ ಮಲ್ಲೇಶ್ವರದಲ್ಲಿ ಸರ್ಕಾರಿ ಬಾಲಕಿಯರ ಹೈಸ್ಕೂಲಿದೆ. ಅಲ್ಲಿ ಸ್ಥಳಭಾವದ ತೊಂದರೆಯಿಂದ ಮಕ್ಕಳು ಪಾಠವನ್ನು ಮರದ ಕೆಳಗೆ ಹೇಳಿಸಿಕೊಳ್ಳುತ್ತಿದ್ದಾರೆ. ಗುಟ್ಟಹಳ್ಳಿ ಮತ್ತು ಶ್ರೀರಾಮಪುರದಿಂದ ಮಕ್ಕಳು ಆ ಶಾಲೆಗೆ ಹೋದರೆ ಅಲ್ಲಿ ಸ್ಥಳಾವಕಾಶವಿಲ್ಲವೆಂದು ಹೇಳುತ್ತಾರೆ. ಬೇರೆ ದೂರದಲ್ಲಿರುವ ಸ್ಕೂಲುಗಳಿಗೆ ಬಸ್ಸುಗಳಲ್ಲಿ ಹೋಗುವುದು ದೊಡ್ಡ ಸಮಸ್ಯೆಯಾಗಿದೆ. 1955 ರಿಂದ ನಾನು ಸಂಬಂಧಪಟ್ಟವರೊಡನೆ ಚರ್ಚೆ ನಡೆಸಿ ಈಗ ಸ್ವಲ್ಪ ಅನುಕೂಲಮಾಡಿದ್ದಾರೆ; ಆದರೂ ಸಾಲದು. ಆದುದರಿಂದ ಮಲ್ಲೇಶ್ವರದ ಸ್ಕೂಲಿನ ಕಟ್ಟಡವನ್ನು ಬಡಾವಣೆಮಾಡಿ ಆದಷ್ಟು ಅಭಿವೃದ್ಧಿ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಎಲ್ಲಕ್ಕಿಂತ ಮಕ್ಕಳ ವಿದ್ಯಾಭ್ಯಾಸ ಬಹಳ ಮುಖ್ಯವಾದ ವಿಷಯ. ನಮ್ಮಲ್ಲಿ ಹೆಣ್ಣು ಮಕ್ಕಳು ಮಹಾರಾಣಿ ಕಾಲೇಜು, ಸೇಂಟ್ ಕಾರ್ಮೆಲ್ ಕಾಲೇಜು ಇವುಗಳಿಗೆ ಹೋಗಬೇಕು. ಅ ಹೆಣ್ಣು ಮಕ್ಕಳ ಕಷ್ಟವನ್ನು ಯಾರಾದರೂ ನೋಡಿದ್ದರೆ, ನಮ್ಮ ಮಕ್ಕಳನ್ನು ಅಲ್ಲಿಗೆ ಏಕೆ ಕಳುಹಿಸುತ್ತೇವೋ ಎನಿಸುತ್ತ ಸರ್ಕಾರಿ ಬಸ್ಸುಗಳಲ್ಲಿ ಇತರ ಜನರ ಜೊತೆಯಲ್ಲಿ ಹೋಗಬೇಕು. ಸಕಾಲದಲ್ಲಿ ಬಸ್ಸುಗಳು ಸಿಕ್ಕದೆ ಬಹಳ ತೊಂದರೆ ಪಡಬೇಕಾಗುತ್ತದೆ. ಆದಕಾರಣ ಬಸವನಗುಡಿಯಲ್ಲಿ ಮತ್ತು ಮಲ್ಲೇಶ್ವರದಲ್ಲಿ ಒಂದೊಂದರಂತೆ ಹೆಣ್ಣುಮಕ್ಕಳಿಗಾಗಿ ಎರಡು ಕಾಲೇಜುಗಳನ್ನು ತೆರೆಯಬೇಕು. ಈಗ ಹೆಣ್ಣುಮಕ್ಕಳು ಬಹಳ ಕಷ್ಟಪಡುತ್ತಿದ್ದಾರೆ. ನಾನು ವಿಜಿಲೆನ್ಸ್ ಸಮಿತಿಯಲ್ಲಿದ್ದಾಗ ಅನೇಕ ದೂರುಗಳು ಬಂದಿವೆ. ಶೇಷಾದ್ರಿಪುರದ ಅಂಡರ್ ಬ್ರಿಡ್ಜಿನ ಹತ್ತಿರ ಯುವಕರಿಂದ ಹೆಣ್ಣುಮಕ್ಕಳಿಗೆ ಬಹಳ ತೊಂದರೆಯಾಗುತ್ತಿದೆ. ಕೆಲವು ಹೆಣ್ಣು ಮಕ್ಕಳು ಚಪ್ಪಲಿಯಿಂದ ಹೊಡೆದಿದ್ದಾರೆ. ನಾನು ಸಮಿತಿಯ ಸದಸ್ಯನಾಗಿ ಈ ತೊಂದರೆಯನು

ಪೊಲೀಸ್ ಸೂಪರಿಂಟೆಂಡೆಂಟ್ ಮತ್ತು ಇತರ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಗಂಡುಮಕ್ಕಳಾದರೆ ಇಂಥ ತೊಂದರೆಗಳಿರುವುದಿಲ್ಲ. ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿಯದೃಷ್ಟಿಯಿಂದ ಕಾಲೇಜು ಅವರ ವಾಸಸ್ಥಳಕ್ಕೆ ಆದಷ್ಟು ಹತ್ತಿರವಿರುವಂತೆ ಬಸವನಗುಡಿ ಮತ್ತು ಮಲ್ಲೇಶ್ವರದಲ್ಲಿ ಒಂದೊಂದು ಹೆಣ್ಣುಮಕ್ಕಳ ಕಾಲೇಜನ್ನು ತೆರೆಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಆಟದ ಮೈದಾನದ ವಿಚಾರ. ಈಗ ಒಂದು ಲಕ್ಷ ರೂಪಾಯಿಗಳಲ್ಲಿ ಸ್ಟೇಡಿಯಂ ಕಟ್ಟಬೇಕೆಂದಿದ್ದಾರೆ. ಎಲ್ಲಿ ಎಂಬುದು ಗೊತ್ತಿಲ್ಲ. 14 ಲಕ್ಷ ಜನಸಂಖ್ಯೆಯಿರುವ ಊರಿನಲ್ಲಿ ಅಲ್ಲಲ್ಲಿ ಎಲ್ಲಾ ಕಡೆಯೂ ಸ್ಟೇಡಿಯಂ ಕಟ್ಟದಿದ್ದರೆ ಜನರಿಗೆ ಬಹಳ ಕಷ್ಟವಾಗುತ್ತದೆ. ಈಗಿರುವ ಕಂಠೀರವ ಸ್ಟೇಡಿಯಂ ಪಕ್ಕದಲ್ಲಿ ಯಾವ ಮನೆಮಠಗಳೂ ಇಲ್ಲ. ಒಂದೇ ಕಡೆ ಕೇಂದ್ರದಂತೆ ಅದಿರುವುದರಿಂದ ನಮ್ಮ ಹುಡುಗರಿಗೆ ಬಹಳ ತೊಂದರೆಯಾಗಿದೆ. ಸರ್ಕಾರಕ್ಕೆ ಈ ವಿಚಾರದಲ್ಲಿ ಸರಿಯಾದ ಏರ್ಪಾಡುಮಾಡುವ ಜವಾಬ್ದಾರಿಯಿದೆ. ನಮ್ಮ ಮೈಸೂರು ಮಿಲ್ಸ್ ಪಕ್ಕದಲ್ಲಿ ದೊಡ್ಡದೊಂದು ಕೆರೆಯಿದೆ. ಅದು ಎರಡು ರೈಲ್ವೆಲೈನುಗಳ ಪಕ್ಕದಲ್ಲಿದೆ. ಅದನ್ನು ಸ್ಟೇಡಿಯಂ ಆಗಿ ಪರಿವರ್ತನೆ ಮಾಡಬೇಕು. ಅದರಂತೆಯೇ 18ನೆಯ ಕ್ರಾಸ್ ಗವರ್ನಮೆಂಟ್ ಬಾಯ್ಸ್ ಸ್ಕೂಲ್ ಪಕ್ಕದಲ್ಲಿ ವಿಶಾಲ ಮೈದಾನವಿದೆ. ಅಲ್ಲಿ ಸ್ಟೇಡಿಯಂ ಮಾಡಿ ಮಕ್ಕಳ ಆಟಕ್ಕೆ ಅನುಕೂಲ ಮಾಡಿಕೊಡಬೇಕು. ಇದಕ್ಕೆ ಹೆಚ್ಚಿನ ಗ್ರ್ಯಾಂಟನ್ನು ಕೊಡಬೇಕು.

ನಮ್ಮ ಬೆಂಗಳೂರು ನಗರವು ಸಮುದ್ರದಿಂದ ಬಹಳ ದೂರವಾಗಿರುವುದರಿಂದ ನಮ್ಮಲ್ಲಿರುವ ಯುವಕರು ನೇವಿಯಲ್ಲಿ ಕೆಲಸಕ್ಕೆ ಸೇರುವುದಕ್ಕಾಗಲೀ ಅಥವಾ ಬೇರೆ ಕೆಲಸ ಪಡೆಯುವುದಕ್ಕಾಗಲಿ ತೊಂದರೆಯಿದೆ. ನಮ್ಮಲ್ಲಿ ಹಲಸೂರು ಕೆರೆ, ಕೆಂಪಾಂಬುಧಿ ಕೆರೆ, ಕೋಡಮಂಗಲ ಕೆರೆ, ಸ್ಯಾಂಕಿ ಟ್ಯಾಂಕ್ ಮುಂತಾದ ಕೆರೆಗಳಿವೆ. ಅಲ್ಲಿ ಈಜುವುದಕ್ಕೆ ಮತ್ತು ಬೋಟಿಂಗಿಗೆ ಅನುಕೂಲವಾಗುವಂತೆ ಪರಿವರ್ತನೆಮಾಡಬೇಕು. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಈ ವಿಚಾರಗಳಲ್ಲೆಲ್ಲಾ ಹೆಚ್ಚು ಜವಾಬ್ದಾರಿಯಿದೆ. ಆದರೆ ಅದು ಹೆಚ್ಚು ಗಮನಕೊಡುತ್ತಿಲ್ಲ.

ಇನ್ನೊಂದು ವಿಚಾರವೇನೆಂದರೆ ನಮ್ಮ ನಗರದಲ್ಲಿ ಕೆಲವುಕಡೆ ಓವರ್ ಬ್ರಿಡ್ಜ್‌ಗಳು ಬೇಕಾಗಿವೆ, ಶೇಷಾದ್ರಿಪುರದಲ್ಲಿ ಹನ್ನೊಂದು ವರ್ಷಗಳಿಂದ ಕೇಳಿದ್ದಕ್ಕೆ ಈಗ ಓವರ್ ಬ್ರಿಡ್ಜ್ ಕೆಲಸ ಕೈಗೊಂಡಿದ್ದಾರೆ. ರಾಜಾಜಿನಗರದಲ್ಲಿ ಮೊದಲು ಲೇಔಟ್‌ಮಾಡಿ ಸೈಟ್‌ಗಳನ್ನು ಮಾಡಿದಾಗ ಚದರಗಜಕ್ಕೆ ಎಂಟಾಣೆಯಂತೆ ಕೊಂಡರು. ಶ್ರೀರಾಮಪುರದಲ್ಲಿ ಮತ್ತು 17ನೆಯ ಕ್ರಾಸಿನಲ್ಲಿ ಓವರ್‌ಬ್ರಿಡ್ಜ್ ಮಾಡಲು ಹಣ ವಸೂಲು ಮಾಡಿ ರೈಲ್ವೆ ಇಲಾಖೆಗೆ ತಿಳಿಸಿದ್ದಾರೆ. ಮಲ್ಲೇಶ್ವರದವರಿಗೆ ಅನುಕೂಲವಾಗುವಂತೆ ಓವರ್ ಬ್ರಿಡ್ಜ್ ಏನಿತ್ತು ಅದರಮೇಲೆ ಈಗ ಬೊಂಬಾಯಿ, ಹೈದರಾಬಾದು ಮತ್ತು ಮದ್ರಾಸುಗಳಿಂದ ಬಂದ ಅಧಿಕಾರಿಗಳ ಸಂಚಾರ ಹೆಚ್ಚಿದೆ. ರಾಜಾಜಿನಗರಕ್ಕೆ ಹೋಗಲು ಇರುವ $11\frac{1}{2}$ ಅಡಿ ರಸ್ತೆ ಬಹಳ ಚಿಕ್ಕದು. ಇದರಿಂದ ಜನರಿಗೆ ತೊಂದರೆಯಾಗಿದೆ. ಮೊನ್ನೆ ತಾನೆ 5—6 ದಿವಸಗಳ ಹಿಂದೆ ಆ ಕಡೆ ಓಡಾಡಿದ ಲಾರಿ ಒಂದು ಗೋಡೆಗೆ ಡ್ಯಾಷ್ ಹೊಡೆದು ಗೋಡೆ ಬೀಳುವ ಸ್ಥಿತಿಯಲ್ಲಿದೆ, ನಾಲ್ಕುಜನ ಮೃತಪಟ್ಟರು. ತಿಂಗಳಿಗೆ ಈ ರಸ್ತೆಯಲ್ಲಿಕನಿಷ್ಟಪಕ್ಷ ಒಂದೆರಡು ಆಕ್ಸಿಡೆಂಟ್‌ಗಳಾದರೂ ಆಗೇ ಆಗುತ್ತಿವೆ. ಈ ಕಡೆ ಸಂಬಂಧಪಟ್ಟ ಅಧಿಕಾರಿಗಳು, ಕಾರ್ಪೊರೇಷನ್ ಮತ್ತು ರೈಲ್ವೆ ಇಲಾಖೆ ಅಷ್ಟಾಗಿ ಗಮನಕೊಟ್ಟಿಲ್ಲ. ಈಗಲಾದರೂ ಇದಕ್ಕೆ ಟಾಪ್ ಪ್ರಯಾರಿಟಿ ಕೊಟ್ಟು ಸಂಬಂಧಪಟ್ಟ ಮಂತ್ರಿಗಳು ಬೇಕಾದ ಸೌಕರ್ಯ ಮಾಡುವಂತೆ ಟ್ರಸ್ಟ್ ಬೋರ್ಡಿಗೆ ಅಜ್ಞೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಲಿನ ಕೇಂದ್ರಕ್ಕಾಗಿ ಬೆಂಗಳೂರಿಗೆ 25 ಲಕ್ಷ ರೂಪಾಯಿಗಳನ್ನೊದಗಿಸಿರುವುದು ಸಂತೋಷಕರವಾದ ವಿಚಾರ. ಇದಕ್ಕೆ ಹಳ್ಳಿಗಳಿಂದ ಹಾಲು ಸರಬರಾಯಿ ಮಾಡುತ್ತಾರೆಂದು ನಂಬಿದ್ದೇನೆ. ಈಗ ಬೆಂಗಳೂರಿನಲ್ಲಿ ಸುಮಾರು 35 ಸಾವಿರ ದನಗಳಿವೆ. ಇದರಿಂದ ಜನರಿಗೆ ಸೊಳ್ಳೆ ಕಾಟ ಜಾಸ್ತಿಯಾಗಿದೆ. ಆದುದರಿಂದ ಮದರಾಸಿನಲ್ಲಿ ಮಾಧವ ನಗರದಲ್ಲಿ ಮಾಡಿರುವಂತೆ ಬೆಂಗಳೂರಿನಲ್ಲಿ ನಾಲ್ಕುಕಡೆ ಕೆಂಪಾಂಬುಧಿ ಅಚ್ಚುಕಟ್ಟು ಕೋರಮಂಗಲ ಅಚ್ಚುಕಟ್ಟು ಮುಂತಾದ ಕಡೆ ಕೇಂದ್ರಗಳನ್ನು ಮಾಡಿ ಅಲ್ಲಿಂದ ಪಟ್ಟಣಕ್ಕೆ ಹಾಲನ್ನೊದಗಿಸಲು ಏರ್ಪಾಡುಮಾಡುವುದು ಸೂಕ್ತ. ಮಾಧವನಗರದ ಸ್ಕೀಂ 2-7-1961ರ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಅಲ್ಲಿ ಹಾಲನ್ನು ತಂದು ಸರಬರಾಯಿಮಾಡಲು ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟಿದ್ದಾರೆ. ಎಮ್ಮೆ ಕೊಳ್ಳುವುದಕ್ಕೆ, ಮೇವಿಗೆ, ಹಾಲನ್ನು ವಾಹನಗಳಲ್ಲಿ ಸಾಗಿಸುವುದು ವಗೈರೆಗೆಲ್ಲಾ ಅಲ್ಲಿ ಬೇಕಾದ ಸೌಕರ್ಯಗಳನ್ನೊದಗಿಸಿದ್ದಾರೆ. ಅದೇ ರೀತಿ ಇಲ್ಲೂ ಸಹ ಒದಗಿಸಬೇಕೆಂದು ಸೂಚಿಸುತ್ತೇನೆ.

‡ಶ್ರೀಮತಿ ಬಿ.ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಅಪ್ಪಣೆಕೊಡಿಸಿರುವ ಭಾಷಣಕ್ಕೆ ಅಭಿನಂದನೆಗಳನ್ನರ್ಪಿಸುತ್ತೇನೆ. ಅವರು ಬಹಳ ಪ್ರಾಮುಖ್ಯವಾದ ದೇಶಾಭಿವೃದ್ಧಿ ಕಾರ್ಯಗಳು ವಗೈರೆ ತಮ್ಮ ಭಾಷಣದಲ್ಲಿ ಸೂಚಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿ, ಬಂದರಿನ ಆವಶ್ಯಕತೆ, ಭಾರಿ ಸೇತುವೆಗಳು ಮತ್ತು ಇತರ ಯೋಜನೆಗಳ ಬಗ್ಗೆ ತಮ್ಮ ಸರ್ಕಾರ ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮ ಮುಂತಾದ ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಪ್ರಸ್ತಾಪಮಾಡಿದ್ದಾರೆ. ಇದಕ್ಕಾಗಿ ನಾವು ಅವರಿಗೆ ಅಭಿನಂದನೆಗಳನ್ನು ಸೂಚಿಸಬೇಕಾದ್ದೂ ಬಹಳ ಆವಶ್ಯಕ.

ಅಭಿನಂದನಾ ನಿರ್ಣಯದ ಮೇಲೆ ಮಾತನಾಡುತ್ತಾ ನಮ್ಮ ಎದುರು ಪಕ್ಷದವರು ಕೆಲವು ಟೀಕೆಗಳನ್ನು ಮಾಡಿದ್ದಾರೆ. ಇದು ಸ್ವಾಭಾವಿಕ. ಆದರೆ ಸರ್ಕಾರ ಏನೂ ಮಾಡಿಲ್ಲ ಎಂಬುದು ನಂಬುವುದಕ್ಕೆ ಸಾಧ್ಯವಿಲ್ಲದ ಮಾತು. ಅನಾವೃಷ್ಟಿಯಾದಾಗ ಮತ್ತು ಅತಿವೃಷ್ಟಿಯಾದಾಗ ಮತ್ತು ಅತಿವೃಷ್ಟಿಯಾದಾಗ ಸರ್ಕಾರದವರು ಜನರಿಗೆ ಬಹಳ ನೆರವು ಕೊಟ್ಟಿದ್ದಾರೆ. ಜಾಸ್ತಿ ಮಳೆ ಬಂದಾಗ ಉದಾಹರಣೆ ಹೇಳುವುದಾದರೆ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಸರ್ಕಾರಿ ಅಧಿಕಾರಿಗಳು ಬಂದು ನೋಡಿ ಕಷ್ಟದಲ್ಲಿರುವ ಜನರಿಗೆ ಸಹಾಯನೀಡಿದರು. ಮಳೆ ಹೋದಾಗಲೂ ಕ್ಷಾಮ ನಿವಾರಣೆಗಾಗಿ ಭಾರತ ಸರ್ಕಾರ ಮತ್ತೆ ನಮ್ಮ ಸರ್ಕಾರ ಸಹಾಯ ಮಾಡಿವೆ. ಹಿಂದೆ ರೆವೆನ್ಯೂ ಮಂತ್ರಿಗಳಾಗಿದ್ದವರು ನಮ್ಮ ಜಿಲ್ಲೆಗೆ ದಯಮಾಡಿಸಿ ಕಷ್ಟಕಾಲದಲ್ಲಿ ಸಹಾಯಮಾಡಿದರು. ಆದರೆ ಸರ್ಕಾರ ಒದಗಿಸಿರುವ ಸಹಾಯ ಸರಿಯಾದ ರೀತಿ ವಿನಿಯೋಗವಾಗಿಲ್ಲ ಎಂಬ ಆಕ್ಷೇಪಣೆಯಿದೆ. ಆದುದರಿಂದ ಇನ್ನು ಮುಂದಾದರೂ ಅದಕ್ಕೆ ಅವಕಾಶವಿಲ್ಲದಂತೆ ಸರ್ಕಾರ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ).

ವಿದ್ಯಾಭ್ಯಾಸದ ವಿಷಯದಲ್ಲಿ ನಮ್ಮ ರಾಜ್ಯಪಾಲರು ವಿಶೇಷ ಸಲಹೆಮಾಡಿದ್ದಾರೆ. ದೇಶದಲ್ಲಿ ಬಲಾತ್ಕಾರ ವಿದ್ಯಾಭ್ಯಾಸ ಯೋಜನೆಯನ್ನು ಜಾರಿಗೆ ತರುವುದು ಬಹಳ ಉತ್ತಮವಾದರೂ ಒಂದು ಸಲಹೆ ನೀಡಬೇಕಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ತಾಲ್ಲೂಕು ಬೋರ್ಡ್ ಆಡಳಿತಕ್ಕೆ ವಹಿಸಬೇಕೆಂಬ ಯೋಚನೆಯಿದೆ. ಆದರೆ ಅದರಿಂದ ನಿಜವಾಗಿಯೂ ವಿದ್ಯಾಭಿವೃದ್ಧಿಗೆ ಸಹಾಯವಾಗುತ್ತದೆಯೆ ಎಂಬ ಅನುಮಾನವಿದೆ. ಆದುದರಿಂದ ವಿದ್ಯಾ ಇಲಾಖೆಯೇ ಇದರ ಆಡಳಿತವನ್ನು ವಹಿಸಿಕೊಳ್ಳುವುದು ಸೂಕ್ತ.

ಪಠ್ಯ ಪುಸ್ತಕಗಳ ವಿಷಯದಲ್ಲಿ ಹೇಳುವುದಾದರೆ, ಇದನ್ನು ರಾಷ್ಟ್ರೀಕರಣ ಮಾಡಿ ಸರ್ಕಾರದವರೇ ಪ್ರಕಟಿಸಬೇಕು ಎನ್ನುವ ಅಭಿಪ್ರಾಯ ಬಹಳ ಸಾಧುವಾದದ್ದು. ಪಠ್ಯ ಪುಸ್ತಕಗಳ ವಿಷಯದಲ್ಲಿ ನಮ್ಮ ದೇಶದಲ್ಲಿ ಹೆಚ್ಚಿನ ಆಕ್ಷೇಪಣೆ ಇವೆ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ಪಠ್ಯ ಪುಸ್ತಕಗಳನ್ನು ಬರೆಯುವುದಕ್ಕೆ ತಮಗೆ ಅನುಕೂಲ ಬಂದವರಿಗೆ ಕೊಡಬಾರದು. ಏತಕ್ಕೆಂದರೆ ದೇಶದ ಮುಂದಿನ ಪೀಳಿಗೆಯಾದ ವಿದ್ಯಾರ್ಥಿಗಳಿಗೆ ಅದರಿಂದ ತೊಂದರೆಯಾಗುತ್ತದೆ.

ಹಳ್ಳಿಗಾಡಿನಲ್ಲಿ ಸ್ಕೂಲುಗಳನ್ನು ತೆರೆಯುವಾಗ ತಾಲ್ಲೂಕು ಬೋರ್ಡಿನವರು 50 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು, ಮತ್ತು ಸರ್ಕಾರದವರು 50 ಪರ್ಸೆಂಟ್ ಕೊಡಬೇಕು ಎಂದು ಮಾಡಿದ್ದಾರೆ. ಇದರಿಂದ ಬಹಳ ಬಡತನವನ್ನು ಅನುಭವಿಸುವ ಹಳ್ಳಿಗಳಲ್ಲಿ ಜನರು ಕಾಂಟ್ರಿಬ್ಯೂಷನ್ ಕೊಡಲಾರದೆ ಸ್ಕೂಲು ಬಿಲ್ಡಿಂಗ್‌ಗಳಿಗೆ ಬಹಳ ತೊಂದರೆಯಾಗಿದೆ. ಒಂದುವೇಳೆ ಹಳ್ಳಿಗಳವರು ಸ್ಕೂಲ್ ಬಿಲ್ಡಿಂಗ್‌ಗಳಿಗೆ ಕಾಂಟ್ರಿಬ್ಯೂಷನ್ ಕೊಡಲೇಬೇಕು ಎಂದಿದ್ದರೆ ಕಾಲುಭಾಗವನ್ನು ಹಳ್ಳಿಗಳವರು ಕೊಡುವಂತೆಯೂ ಮುಕ್ಕಾಲು ಭಾಗವನ್ನು ತಾಲ್ಲೂಕು ಬೋರ್ಡಿನವರು ಕೊಡುವಂತೆಯೂ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಸರ್ಕಾರದವರು ಸ್ಕೂಲುಗಳನ್ನು ಕೊಡುವಾಗ ಅದನ್ನು ಖಾಸಗೀಯವರು ಪ್ರಾರಂಭಿಸಿದರೆ ಅದಕ್ಕೆ ಗ್ರ್ಯಾಂಟ್ ಇನ್ ಏಯ್ಡ್ ಕೊಡುವುದಕ್ಕೆ ಸರ್ಕಾರದವರು ಆಲೋಚಿಸಿದ್ದಾರೆ. ಅದು ಬಹಳ ಒಳ್ಳೆಯ ವಿಷಯ. ಆದರೆ ಸರ್ಕಾರದ ಯೋಜನೆ ಯಾವಾಗಲೂ ಒಂದೇ ತರಹ ಇರಬೇಕಾದ್ದು ಅವಶ್ಯಕವಾಗಿದೆ. 1957ನೇ ಇಸವಿಯಿಂದ 1961ನೇ ಇಸವಿಯವರೆಗೆ ಸರ್ಕಾರದವರು ಅನೇಕ ಹೈಸ್ಕೂಲುಗಳನ್ನು ಮಂಜೂರು ಮಾಡಿದ್ದಾರೆ. ಆದರೆ ಮಲೆನಾಡಿನಲ್ಲಿರತಕ್ಕ ಮತ್ತು ಬಹಳ ಹಿಂದುಳಿದಿರತಕ್ಕ ಚಿಕ್ಕಮಗಳೂರು ಜಿಲ್ಲೆಗೆ ಒಂದು ಹೈಸ್ಕೂಲನ್ನು ಕೊಡಬೇಕೆಂದು ಕೇಳಿಕೊಂಡರೂ ಅಲ್ಲಿಗೆ ಒಂದು ಹೈಸ್ಕೂಲನ್ನು ಮಂಜೂರು ಮಾಡುವುದಕ್ಕೆ ಸರ್ಕಾರಕ್ಕೆ ಆಗದೆ ಹೋಯಿತು. ಒಂದೇ ಡಿಸ್ಟ್ರಿಕ್ಟಿಗೆ 26 ಹೈಸ್ಕೂಲುಗಳನ್ನು ಕೊಟ್ಟಿರುವುದನ್ನು ನಾವು ಈ ಸಭೆಯಲ್ಲಿ ತೋರಿಸಬಹುದು. ಅದರೆ ದೇಶದ ಜನತೆಗೆ ಸರ್ಕಾರದಲ್ಲಿರತಕ್ಕ ನಂಬಿಕೆ ಹೋಗುತ್ತದೆ. ಆದ್ದರಿಂದ ಹೈಸ್ಕೂಲುಗಳನ್ನು ಕೊಡುವ ವಿಷಯದಲ್ಲಿಯಾಗಲೀ ಅಥವಾ ಬೇರೆಯಾವ ವಿಷಯದಲ್ಲಿ ಆಗಲೀ ಎಲ್ಲಾ ಡಿಸ್ಟ್ರಿಕ್ಟುಗಳಿಗೂ ಒಂದೇ ಸಮನಾಗಿ ಅನ್ವಯಿಸುವಂತೆ ಮಾಡಬೇಕು. ಎಂದು ನಾನು ಸರ್ಕಾರದಲ್ಲಿ ಪ್ರಸ್ತಾಪಿಸುತ್ತೇನೆ. ಈ ವಿಷಯದಲ್ಲಿ ನಾನು ಒಂದು ಪ್ರಶ್ನೆಯ ರೂಪದಲ್ಲಿ ಸರ್ಕಾರದ ಮುಂದೆ ಇಡಬೇಕೆಂದು ಮಾಡಿದ್ದೇನೆ. ನ್ಯಾಯವಾದ ಆಡಳಿತವನ್ನು ಸರ್ಕಾರದವರು ಜನಗಳಿಗೆ ಒದಗಿಸಿಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಆಮೇಲೆ ಮಲೆನಾಡಿನ ರಸ್ತೆಗಳು ಅಷ್ಟು ಸಮರ್ಪಕವಾಗಿಲ್ಲ. ಹಿಂದೆ ಮಲೆನಾಡು ಇಂಪ್ರೂವ್‌ಮೆಂಟ್ ಗ್ರೋಸ್ಕರ ಗ್ರ್ಯಾಂಟ್‌ನ್ನು ಕೊಡುತ್ತಿದ್ದರು. ಈಗ ಅದನ್ನು ನಿಲ್ಲಿಸಿರುವಂತೆ ಕಾಣುತ್ತದೆ. 1957ರಿಂದ 1961ರವರೆಗೆ ಚಿಕ್ಕಮಗಳೂರು ಜಿಲ್ಲೆಗೆ ಕೊಟ್ಟಿರತಕ್ಕ ಬಜೆಟ್ಟು ಮತ್ತು ಎಷ್ಟು ಹಣಕಾಸು ವೆಚ್ಚವಾಗಿದೆ ಎಂಬುದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಆದ್ದರಿಂದ ಮಲೆನಾಡಿನ ಕಡೆಗೆ ಹೆಚ್ಚು ದೃಷ್ಟಿ ಕೊಡಬೇಕು. ಪ್ರತಿಯೊಂದು ತಾಲ್ಲೂಕಿಗೂ 50 ಮೈಲಿಗಳಷ್ಟು ರೋಡನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. 50 ಮೈಲಿಗಳಷ್ಟನ್ನು ಮಾತ್ರ ತೆಗೆದುಕೊಳ್ಳಬೇಕೆಂದು ಹೇಳಿದರೆ ಹೆಚ್ಚು ಅಭಿವೃದ್ಧಿ ಆಗಲಾರದು. ಇನ್ನೂ ಹೆಚ್ಚು ತೆಗೆದುಕೊಂಡು ರಸ್ತೆಯನ್ನು ಒದಗಿಸಿ ಜನಗಳಿಗೆ ಸಹಾಯ ಮಾಡಬೇಕೆಂದು ನಾನು ಸರ್ಕಾರಕ್ಕೆ ತಿಳಿಸುತ್ತೇನೆ.

ಸಹಕಾರ ಸಂಘಗಳ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಹಕಾರ ಸಂಘಗಳಿಂದ ನಿಜವಾಗಿಯೂ ಜನಗಳಿಗೆ ಅನುಕೂಲವಾಗುತ್ತದೆ. ಈ ಸಹಕಾರ ಸಂಸ್ಥೆಗಳು ಜನಗಳಿಗೆ ಉಪಯುಕ್ತವಾದ ಸಿಮೆಂಟ್ ಮತ್ತು ಕಬ್ಬಿಣ ಇತ್ಯಾದಿಗಳನ್ನು ಸರಿಯಾದ ರೀತಿಯಲ್ಲಿ ಮಾರಾಟ ಮಾಡದೆ ಖಾಸಗೀ ಜನಗಳಿಗೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಾಟ ಮಾಡುವುದು ಎಷ್ಟೋ ಸರ್ಕಾರದ ಗಮನಕ್ಕೆ ಬಂದಿದೆ.

ಜನಗಳಿಗೆ ಬೇಕಾದಂಥ ಎಲ್ಲಾ ವಸ್ತುಗಳನ್ನೂ ಸಹಕಾರ ಸಂಸ್ಥೆಗಳಿಗೆ ಕೊಟ್ಟು ಅವು ಸರಿಯಾದ ರೀತಿಯಲ್ಲಿ ಜನಗಳಿಗೆ ಮಾರಾಟವಾಗುವಂತೆ ಅನುಕೂಲಪಡಿಸಬೇಕೆಂದು ನಾನು ಈ ಸಭೆಯಲ್ಲಿ ತಿಳಿಸುತ್ತೇನೆ.

ನಾವು ಸುಖೀರಾಜ್ಯದ ಸ್ಥಾಪನೆಯ ಆದರ್ಶವನ್ನು ಬಹುಮಟ್ಟಿಗೆ ಸಮೀಪಿಸಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ನಮ್ಮ ಸರ್ಕಾರದವರು ಸುಖೀರಾಜ್ಯದ ಸ್ಥಾಪನೆಯ ಆದರ್ಶವನ್ನು ಆದಷ್ಟು ಬೇಗ ಮುಟ್ಟುವುದಕ್ಕೆ ಪ್ರಯತ್ನವನ್ನೇನೋ ಪಟ್ಟಿದ್ದಾರೆ. ಆದರೆ ದೇಶದಲ್ಲಿ ನಡೆಯತಕ್ಕ ಕೆಲಸ ಕಾರ್ಯಗಳು ಯಶಸ್ವಿಯಾಗಿ ನಡೆಯಬೇಕಾದರೆ ದೇಶದಲ್ಲಿ ನ್ಯಾಯಬದ್ಧವಾದಂಥ ಮತ್ತು ಒಂದೇ ಸಮನಾದಂಥ ಆಡಳಿತ ಇರುವುದು ಅಗತ್ಯ.

ಆಸ್ಪತ್ರೆಗಳ ವಿಷಯದಲ್ಲಿ ಹೇಳುವುದಾದರೆ ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಒಬ್ಬ ಲೇಡಿ ಡಾಕ್ಟರು ಅಂಟಿ ಕರಪ್ಷನ್ನಿನವರಿಗೆ ಸಿಕ್ಕಿಬಿದ್ದು ಸಸ್‌ಪೆನ್ಷನ್ ಆಗಿತ್ತು. ಆ ರೀತಿ ಒಂದೂವರೆ ವರ್ಷ ಸಸ್‌ಪೆನ್ಷನ್‌ನಲ್ಲಿಟ್ಟಿದ್ದ ಅವಧಿಯನ್ನು ಸರ್ಕಾರದವರು ಲೀವ್ ಎಂದು ಟ್ರೀಟ್ ಮಾಡಿ ಅವರನ್ನು ಇನ್ನೊಂದು ಊರಿಗೆ ಲೇಡಿ ಮೆಡಿಕಲ್ ಆಫೀಸರ್ ಆಗಿ ಹಾಕಿದ್ದಾರೆ. ಹೀಗಾದರೆ ನಿಜವಾಗಿ ಸತ್ಯವಂತರಾಗಿ ಕೆಲಸ ಮಾಡತಕ್ಕ ಜನಗಳಿಗೆ ಏನು ಅನುಕೂಲ ಮಾಡಿದಂತಾಗುತ್ತದೆ? ಸರ್ಕಾರದವರು ನಿಷ್ಪಕ್ಷಪಾತವಾದ ಆಡಳಿತವನ್ನು ಮಾಡಬೇಕು.

ಇನ್ನೊಂದು ವಿಷಯ. ಈಗತಾನೇ ಮಾತನಾಡಿದ ಶ್ರೀಮಾನ್ ದೊಡ್ಡಮೇಟಿಯವರು ಶ್ರೀ ಎ. ಜಿ. ರಾಮಚಂದ್ರರಾಯರ ವರದಿಯ ವಿಷಯದಲ್ಲಿ ಒಂದೆರಡು ವಿಷಯಗಳನ್ನು ಹೇಳಿದರು. ಈಗಾಗಲೇ ಶ್ರೀ ರಾಮಚಂದ್ರರಾಯರ ಕಮಿಟಿ ರಿಪೋರ್ಟ್ ಆಯಿತು. ಗೋರ್ವಾಲಾ ಕಮಿಟಿ ರಿಪೋರ್ಟ್ ಆಯಿತು. ಡಾಕ್ಟರ್ ನಾಗನಗೌಡ ಕಮಿಟಿಯ ರಿಪೋರ್ಟ್

ಆಯಿತು. ಹೀಗೆ ನಾನಾ ವಿಧವಾದ ರಿಪೋರ್ಟು ಗಳನ್ನು ತಯಾರು ಮಾಡುತ್ತಾರೆ. ಆದರೆ ಅವು ಅಲ್ಲಿಗೆ ಪರ್ಯವಸಾನವಾಗುತ್ತವೆ. ಶ್ರೀ ರಾಮಚಂದ್ರ ರಾಯರ ವರದಿಯಲ್ಲಿ ಉಳಿತಾಯದ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಜಿಲ್ಲೆಗಳನ್ನು ಕಡಮೆ ಮಾಡ ಬೇಕು ಎಂದು ಹೇಳಿದ್ದಾರೆ. ಇದರಿಂದ ನಮಗೆ ತೊಂದರೆಯಾಗಬಹುದು. ಕಾರಣ ತಮಗೆಲ್ಲರಿಗೂ ಗೊತ್ತಿದೆ. ನಮ್ಮ ಚಿಕ್ಕಮಗಳೂರು ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳನ್ನು ಶ್ರೀ ರಾಮಚಂದ್ರರಾಯರ ವರದಿಯಲ್ಲಿ ಪ್ರಸ್ತಾಪ ಮಾಡಿದ ಹಾಗೆ ಕಾಣುತ್ತದೆ. ಚಿಕ್ಕಮಗಳೂರು ಜಿಲ್ಲೆಯು 2787 ಚದುರಮೈಲಿ ಇದೆ. ಹಾಸನಾ ಜಿಲ್ಲೆಯು 2638 ಚದುರಮೈಲಿ ಇದೆ. ಯಾವ ದೃಷ್ಟಿಯಿಂದ ಚಿಕ್ಕಮಗಳೂರು ಜಿಲ್ಲೆಯನ್ನು ತೆಗೆಯಬೇಕೆಂದು ಯೋಚನೆ ಮಾಡಿದರೋ ನನಗಂತೂ ಗೊತ್ತಿಲ್ಲ. ಮಾನ್ಯ ಸದಸ್ಯರು ಈ ವಿಚಾರದಲ್ಲಿ ಒತ್ತಾಯಪಡಿಸುತ್ತಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಈ ವಿಚಾರವನ್ನು ಸರ್ಕಾರ ದವರು ಬಹಳ ಎಚ್ಚರಿಕೆಯಿಂದ ಯೋಚನೆ ಮಾಡಬೇ ಕೆಂದು ನಾನು ಸರ್ಕಾರದ ಮುಂದೆ ಈ ಸಭೆಯಲ್ಲಿ ಹೇಳುತ್ತೇನೆ. ಇಂಥಾ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಸರ್ಕಾರದವರು ಬಹಳ ದೀರ್ಘವಾಗಿ ಯೋಚನೆ ಮಾಡುತ್ತಾರೆಂದು ನಾನು ನಂಬಿಕೊಂಡಿ ದ್ದೇನೆ. ಆದ್ದರಿಂದ ಆ ವಿಷಯವನ್ನು ನಾನು ಇನ್ನು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಮಲೆನಾಡಿನ ಎಲ್ಲಾ ಜಿಲ್ಲೆಗಳನ್ನೂ ಒಟ್ಟಾಗಿ ಸೇರಿಸಿ ಮಲೆನಾಡು ಇಂಪ್ರೂವ್‌ಮೆಂಟ್ ಬೋರ್ಡ್ ಮಾಡಬೇಕು. ಹಿಂದಿನ ಸರ್ಕಾರದವರು ಮಲೆನಾಡಿನ ಇಂಪ್ರೂವ್‌ಮೆಂಟ್ ಬೋರ್ಡನ್ನು ಮಾಡಿದ್ದರು. ಆದರೆ ಬೋರ್ಡಿನ ಕಾರ್ಯಕ್ರಮಗಳು ಏನೂ ಕಾಣಲಿಲ್ಲ. ಆ ಬೋರ್ಡ್ ಹೇಗೆ ಹುಟ್ಟಿತೋ ಹಾಗೆಯೇ ಅದು ಪರ್ಯವಸಾನ ವಾಯಿತು. ಮಲೆನಾಡಿನ ಜಿಲ್ಲೆಗಳಿಗೆ ಯಾವ ಬದ ಲಾವಣೆಯೂ ಆಗದಂತೆ ಸರ್ಕಾರದವರು ಯೋಚನೆ ಮಾಡಿ ಯಾವ ಜಿಲ್ಲೆಗಳ ಜನಗಳಿಗೂ ತೊಂದರೆಯಾಗ ದಂತೆ ಕೆಲಸ ಮಾಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ರಾಜ್ಯಪಾಲರು ಈ ಸಭೆಯ ಮುಂದೆ ಪ್ರಸ್ತಾಪ ಮಾಡಿರುವ ವಿಷಯಗಳನ್ನು ಅಭಿನಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಸ್ವಾಮಿ, ರಾಜ್ಯಪಾಲರು ಉಭಯ ಶಾಸನ ಸಭೆಯೊಳಗೆ ಕೊಟ್ಟಿರತಕ್ಕ ಭಾಷಣದ ಮೊದಲನೆಯ ಭಾಗದಲ್ಲಿ ನಮ್ಮ ದೇಶದಲ್ಲಿ ಕಾರ್ಯಗತ ಮಾಡತಕ್ಕ ಪಂಚ ವಾರ್ಷಿಕ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಅವರ ಭಾಷಣದಲ್ಲಿ ಪಂಚವಾರ್ಷಿಕ ಯೋಜನೆ ಗಳಿಂದ ಎಷ್ಟರ ಮಟ್ಟಿಗೆ ನಮ್ಮ ದೇಶಕ್ಕೆ ಉಪಯೋಗ ವಾಗಿದೆ ಎಂಬುದನ್ನು ಪ್ರಸ್ತಾಪ ಮಾಡಿಲ್ಲ. ನಮಗೆ ಸ್ವಾತಂತ್ರ್ಯ ಬಂದು 15 ವರ್ಷಗಳಾದುವು. ಎರಡ ನೆಯ ಪಂಚವಾರ್ಷಿಕ ಯೋಜನೆಯು ಮುಗಿದು ಈಗಾಗಲೇ ಮೂರನೇ ಪಂಚವಾರ್ಷಿಕ ಯೋಜನೆಯ ಒಂದೆರಡು ವರ್ಷಗಳನ್ನು ನಾವು ಕಳೆಯುತ್ತಿದ್ದೇವೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆಂದು ಯೋಚನೆ ಮಾಡಿ ನೋಡಿದರೆ ನಮಗೆ ಶೋಚನೀಯವಾಗುತ್ತದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಮೈಸೂರು ರಾಜ್ಯಕ್ಕೆ ಇಂಡಿಯಾ ಸರ್ಕಾರದವರು 140 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಆಡ ಳಿತ ಪಕ್ಷದವರು ಆ 140 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಶಕ್ತಿಹೀನರಾಗಿ ಶೇಕಡಾ 75-80 ರಷ್ಟು ಹಣವನ್ನು ಮಾತ್ರ ಖರ್ಚು ಮಾಡಿದ್ದರು. ಇದನ್ನು ನೋಡಿದ ಇಂಡಿಯಾ ಸರ್ಕಾರದವರು ಎರಡ ನೆಯ ಪಂಚವಾರ್ಷಿಕ ಯೋಜನೆಗೆ ಕೇವಲ 139 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದರು. ಇದನ್ನು ನೋಡಿದರೆ ನಮ್ಮ ಸರ್ಕಾರದವರು ಶಕ್ತಿ ಹೀನರಾಗಿ, ಸರಿಯಾದ ವಿವೇಚನೆ ಇಲ್ಲದೆ ಕೆಲಸ ಮಾಡಿದರು ಎಂಬುದು ಇದರಿಂದ ಅರ್ಥವಾಗುತ್ತದೆ. ಈಗ ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ನೋಡಿದರೆ ಇದಕ್ಕೆ ಕೇವಲ 250 ಕೋಟಿ ರೂಪಾಯಿ ಗಳನ್ನು ಮಾತ್ರ ಒದಗಿಸಿಕೊಟ್ಟಿದ್ದಾರೆ. ಇದರಿಂದ ದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆಯುವು ದಿಲ್ಲ ಎಂದು ನಾನು ಭಾವಿಸುತ್ತೇನೆ. ಒಟ್ಟಾರೆ ನೋಡಿದರೆ ಇಡೀ ಭರತಖಂಡದಲ್ಲಿ 45 ಕೋಟಿ ಜನ ಸಂಖ್ಯೆ ಇದೆ. ನಮ್ಮ ಕರ್ಣಾಟಕ ರಾಜ್ಯದಲ್ಲಿ ಎರಡು ಕೋಟಿ ಜನಸಂಖ್ಯೆ ಇದೆ. ಆ ಒಂದು ಲೆಕ್ಕಾಚಾರದ ಮೇಲೆ ಇಂಡಿಯಾ ಸರ್ಕಾರದವರು ಸುಮಾರು 16 ಸಾವಿರ ಕೋಟಿ ರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಗೋಸ್ಕರ ಖರ್ಚು ಮಾಡಿದ್ದಾರೆ. ನಮ್ಮ ರಾಜ್ಯದ ಜನಸಂಖ್ಯೆಯ ದೃಷ್ಟಿಯಿಂದ ನೋಡಿದರೆ ನಮ್ಮ ರಾಜ್ಯಕ್ಕೆ 800 ಕೋಟಿ ರೂಪಾಯಿಗಳನ್ನು ಪಂಚವಾರ್ಷಿಕ ಯೋಜನೆಗೋಸ್ಕರ ಖರ್ಚುಮಾಡ ಬೇಕಾಗಿತ್ತು. ಆದರೆ 529 ಕೋಟಿ ರೂಪಾಯಿ ಗಳನ್ನು ಮಾತ್ರ ಖರ್ಚುಮಾಡಿರುವುದನ್ನು ನೋಡಿದರೆ ನಮ್ಮ ಸರ್ಕಾರದವರು ಎಂತಹ ಆಡಳಿತವನ್ನು ನಡೆಸು ತ್ತಿದ್ದಾರೆಂಬುದು ಗೊತ್ತಾಗುತ್ತದೆ. ನಮ್ಮ ರಾಜ್ಯದ ಕಾಂಗ್ರೆಸ್ ಪಕ್ಷದವರು ಇಂಡಿಯಾ ಸರ್ಕಾರದ ಮೇಲೆ ಭಾರ ಹಾಕಿ ನ್ಯಾಯವಾದ ಭಾಗವನ್ನು ಅಲ್ಲಿಂದ ತರಲು ಸಮರ್ಥರಿಲ್ಲ ಎಂದು ಹೇಳಬೇಕಾಗಿದೆ. ನಮ್ಮ ದೇಶದ ಒಬ್ಬ ಸಾಮಾನ್ಯ ಮನುಷ್ಯನ ವರಮಾನ ಇಂಡಿಯಾ ದೇಶದ ಒಬ್ಬ ಸಾಮಾನ್ಯ ಮನುಷ್ಯನ ವರ ಮಾನಕ್ಕಿಂತ ಕಡಮೆ ಮಟ್ಟದಲ್ಲಿ ಇದೆ. ಇಂಡಿಯಾ ದೇಶದ ಒಬ್ಬ ಸಾಮಾನ್ಯ ಮನುಷ್ಯನ ವರಮಾನ 302 ರೂಪಾಯಿ ಇದ್ದರೆ ನಮ್ಮ ದೇಶದಲ್ಲಿ ಒಬ್ಬ ಸಾಮಾನ್ಯ ಮನುಷ್ಯನ ವರಮಾನ 298 ರೂಪಾಯಿ ಗಳಿದೆ. ಇದನ್ನು ನೋಡಿದರೂ ಸಹ ನಮ್ಮ ಸರ್ಕಾರ ಶಕ್ತಿಯುತವಾಗಿ ಕೆಲಸ ಮಾಡುತ್ತಿಲ್ಲ ಎಂದು ವಿಷಾದ ದಿಂದ ಹೇಳಬೇಕಾಗಿದೆ.

4-00 P.M.

ಹಾಗೆಯೇ ಯೋಚನೆ ಮಾಡುತ್ತಾ ಹೋದರೆ, ನಾವು ಸುಖೀರಾಜ್ಯದ ಸ್ಥಾಪನೆಯ ಆದರ್ಶವನ್ನು ಬಹುಮಟ್ಟಿಗೆ ಸಮೀಪಿಸಿದ್ದೇವೆಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ಅದು ಎಷ್ಟು ದೂರ ಇದೆಯೋ ನನಗಂತೂ ಅರ್ಥವಾಗುತ್ತಿಲ್ಲ. ಕಾಂಗ್ರೆಸ್ ಸರ್ಕಾರದವರು ಕಲ್ಯಾಣ ರಾಜ್ಯವನ್ನು ಸ್ಥಾಪನೆ ಮಾಡುತ್ತೇವೆಂದು ಏನು ಒಂದು ಗುರಿಯನ್ನು ಇಟ್ಟು ಕೊಂಡಿದ್ದಾರೆಯೋ ಅದನ್ನು ಎಷ್ಟರಮಟ್ಟಿಗೆ ಸಾಧಿ ಸುತ್ತಾರೆಂಬುದು ನನಗೆ ಅರ್ಥವಾಗುತ್ತಿಲ್ಲ.

ಮೊಟ್ಟಮೊದಲನೆಯದಾಗಿ ಇವರು ಹೇಳಿದ್ದು ತಾವು ಸಹಕಾರಿ ಸಂಘದ ರಾಜ್ಯ (Co-operative) ರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳಿದರು. ಅದು ಹೋಗಿ, ಕಲ್ಯಾಣರಾಜ್ಯ ಎಂದಿರಿ. ಅದೂ ಹೋಯಿತು ಸೋಷಿಯಲಿಸ್ ಪ್ಯಾಟರ್ನ್ ಸೊಸೈಟಿಯ ನಿರ್ಮಾಣವೇ ನಿಮ್ಮ ಗುರಿಯೆಂದಿರಿ. ಈಚೆಗೆ, ಅದನ್ನೂ ಬಿಟ್ಟು, ಸೋಷಿಯಲಿಸ್ಟ್ ಸೊಸೈಟಿ ಸ್ಥಾಪನೆ ಮಾಡಬೇಕೆಂದು ಹೊರಟಿದ್ದೀರಿ. ಈ ರೀತಿಯಾಗಿ ನಿಮ್ಮ ಗುರಿಯೇ ನೆಂಬುದೇ ನಿಮಗೆ ಗೊತ್ತಿಲ್ಲದೆ ಅಲೆದಾಡುತ್ತಿದೀರಿ.

(ಶ್ರೀ ಬಿ. ಎಲ್. ಗೌಡ)

ಈಗ ನಮ್ಮ ದೇಶದಲ್ಲಿ ಪಂಚಾಯ್ತಿ ರಾಜ್ಯ ಸ್ಥಾಪನೆ ಮಾಡಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ ನನ್ನ ಪಾತ್ರ ಕೂಡ ಸ್ವಲ್ಪ ಇದೆ. ನಾನು ಒಂದು ತಾಲ್ಲೂಕ್ ಬೋರ್ಡಿನ ಅಧ್ಯಕ್ಷನಾಗಿದ್ದು, ಅದರ ವಿಚಾರ ಹೇಳುತ್ತಿದ್ದೇನೆ. ಪಂಚಾಯ್ತಿ ರಾಜ್ಯ ಸ್ಥಾಪನೆಯಾಯಿತೆಂದು ಹೇಳುವುದಷ್ಟೆ. ಅದಕ್ಕೆ ಯಾವ ಅಧಿಕಾರವೂ ಇಲ್ಲ. ಅದರಲ್ಲಿ ಹಣವಿಲ್ಲ. 30 ಯೋಜನೆಗಳನ್ನು ಪಂಚಾಯ್ತಿಗಳಿಗೆ ವಹಿಸಿದೆಯೆಂದು ಹೇಳಿದ್ದೀರಿ. ಆದರೆ, ಅದಕ್ಕೆ ಎಷ್ಟರಮಟ್ಟಿನ ಜವಾಬ್ದಾರಿ ಕೊಟ್ಟಿದ್ದೀರಿ. ಎಷ್ಟು ಹಣ ಕೊಟ್ಟಿದ್ದೀರಿ. Forest ಅಭಿವೃದ್ಧಿ ಮಾಡುವುದನ್ನು transfer ಮಾಡಿದ್ದೇವೆಂದಿದ್ದೀರಿ. ಅದಕ್ಕಾಗಿ ಕೊಟ್ಟಿರುವ ಹಣ ಎಂದರೆ 800 ರೂಪಾಯಿ. ಹೀಗಾದರೆ ಅರಣ್ಯ ಎಷ್ಟರಮಟ್ಟಿಗೆ ಅಭಿವೃದ್ಧಿಯಾದೀತು. ಇದೇರೀತಿ ಎಲ್ಲಾ ಸ್ಕೀಮುಗಳೂ ಇವೆ. ಹೀಗಾದರೆ, ಎಷ್ಟರಮಟ್ಟಿಗೆ ಪಂಚಾಯ್ತಿ ರಾಜ್ಯ ನಡೆಯಬೇಕು ಯಾವ ಸ್ಕೀಮನ್ನೇ ಆಗಲೀ ಕಾರ್ಯಗತ ಮಾಡುವುದಕ್ಕೆ ಸಾಕಾದಷ್ಟು ಹಣ ಕೊಡದೆ ಇದ್ದರೆ ಅದನ್ನು ನಡೆಸುವುದು ಹೇಗೆ? ಆದ್ದರಿಂದ ಆದಷ್ಟು ಜಾಗ್ರತೆ ತಾಲ್ಲೂಕ್ ಬೋರ್ಡ್‌ಗಳಿಗೆ ಸಾಕಷ್ಟು ಹಣ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಶೋಚನೀಯ ವಿಷಯವೆಂದರೆ, ತಾಲ್ಲೂಕ್ ಬೋರ್ಡ್‌ಗಳು ಸ್ಥಾಪನೆಯಾಗಿ ಈಗಾಗಲೇ ಎರಡು ವರ್ಷಗಳಾಯಿತು. ಇನ್ನೂ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು, ಉಪಾಧ್ಯಕ್ಷರುಗಳ ಸ್ಥಾನಮಾನವೇನು, ಅವರ ವೇತನ ಏನೆಂಬುದು ಇದುವರೆಗೂ ಗೊತ್ತಾಗಿಲ್ಲ. ಸಾಮಾನ್ಯವಾದ ಇಂಥಾ ಒಂದು ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಎರಡು ವರ್ಷ ಸಾಲದೆ ಹೋದರೆ ಇನ್ನು ಈ ಸರ್ಕಾರ ಏನು ಕೆಲಸ ನಡೆಸೀತು.

ಪಾನನಿರೋಧದ ಬಗ್ಗೆ ಈಗಾಗಲೇ ಮಾನ್ಯ ಸ್ನೇಹಿತರನೇಕರು ಹೇಳಿದ್ದಾರೆ. ನಾನು ಅದರ ವಿಷಯದಲ್ಲಿ ಪುನರುಕ್ತಿಯಾಗಿ ಏನನ್ನೂ ಹೇಳದೆ ಒಂದೆರಡು ಅಂಶಗಳನ್ನು ಮಾತ್ರ ಗಮನಕ್ಕೆ ತರುತ್ತೇನೆ. ಪಾನನಿರೋಧವೆನ್ನುವುದು ಮಹಾತ್ಮಾ ಗಾಂಧಿಯವರಿಗೆ ಪ್ರಿಯವಾಗಿದ್ದ ಒಂದು ವಿಷಯ. ಅಂದಮೇಲೆ ಸ್ವರಾಜ್ಯ ಬಂದಮೇಲೆ ಅಂತೂ ಪಾನನಿರೋಧ ಬರಲೇಬೇಕು. ಪ್ರಜಾಕೋಟಿಯ ಕ್ಷೇಮಾಭಿವೃದ್ಧಿಯಾಗಬೇಕಾದರೆ, ಅವರಿಗೆ ಆರ್ಥಿಕವಾಗಿ ಒಳಿತಾಗಬೇಕಾದರೆ ಪಾನನಿರೋಧ ಬೇಕೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಸರ್ಕಾರದವರು ದುಡ್ಡಿನ ಆಸೆಗಾಗಿ ಮದ್ಯಪಾನವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಈ ನೀತಿಯಿಂದಾಗಿ ಮೂರು ಕೋಟಿ ರೂಪಾಯಿಗಳ ಆದಾಯ ಬರುತ್ತಿದ್ದರೂ, ಕಳ್ಳಬಟ್ಟಿ ತಯಾರು ಮಾಡುವವರ ಸಂಖ್ಯೆ ಹೆಚ್ಚಿ ಜನರಿಗೆ ಅನ್ಯಾಯವಾಗುತ್ತಿದೆ. ಒಂದು ರೂಪಾಯಿ ಸರ್ಕಾರಕ್ಕೆ ಕೊಡುತ್ತಿರುವಕಡೆ ಈಗ ಐದು ರೂಪಾಯಿ ಕಳ್ಳಬಟ್ಟಿಗಾಗಿ ಕೊಡುತ್ತಿದ್ದಾರೆ. ಆದ್ದರಿಂದ 3 ಕೋಟಿ ರೂಪಾಯಿಗಳ ಲುಕ್ಸಾನಾದರೂ ಚಿಂತೆಯಿಲ್ಲ, ಇದಕ್ಕೆ 5ರಷ್ಟು ಜನತೆಗೆ ಆಗುತ್ತಿರತಕ್ಕ ಅನ್ಯಾಯವನ್ನು, ನಷ್ಟವನ್ನು ನಿಲ್ಲಿಸುವ ದೃಷ್ಟಿಯಿಂದ ಪೂರ್ಣ ಪಾನನಿರೋಧವನ್ನು ಎಲ್ಲ ಕಡೆಯಲ್ಲೂ ಜಾರಿಗೆ ತರಬೇಕೆಂದು ಹೇಳುತ್ತೇನೆ. ಅರೆ ಮನಸ್ಸಿನ ಕೆಲಸ ಯಾವುದೂ ಮಾಡಬಾರದು.

ಸಮಾಜ ಕಲ್ಯಾಣ ವ್ಯವಸ್ಥೆಯನ್ನು ನೋಡಿದರೆ ನಾಚಿಕೆಗೇಡು. ಇಂಡಿಯಾ ಸರ್ಕಾರದವರು ಎಷ್ಟೋ ರೀತಿಯ ಅನುಕೂಲಗಳನ್ನು ಒದಗಿಸಬೇಕೆಂದು ಹೇಳುತ್ತಿದ್ದರೂ ಅದರಲ್ಲಿ ಕೊಂಚ ಭಾಗ ಕೂಡ ನಮ್ಮ ಜನರಿಗೆ ಲಭಿಸುತ್ತಿಲ್ಲ. ಹರಿಜನ ಗಿರಿಜನರಿಗೆ ಮೊದಲು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸರ್ಕಾರದವರು ಸಹಾಯ ಮಾಡುತ್ತಿದ್ದರು. ಈ ವರ್ಷ ಅದೂ ಇಲ್ಲ. ಮೊದಲು ಇದ್ದ ಸೌಕರ್ಯ ತಪ್ಪಿಹೋಯಿತು. ಅತ್ತ ಸಹಕಾರ ಸಂಘಗಳ ಮೂಲಕ ಸಹಾಯ ಒದಗಿಸುವ ಏರ್ಪಾಡೂ ಬರಲಿಲ್ಲ. ಹೀಗಾಗಿ ಹರಿಜನರಿಗೆ ನಾನಾ ವಿಧದಲ್ಲಿ ಅನುಕೂಲ ಲಭಿಸುವುದನ್ನು ದೊರಕಿಸಿಕೊಡದೆ ಅವರಿಗೇ ಅನ್ಯಾಯ ಮಾಡುತ್ತಿದ್ದಾರೆ. ಇಂಡಿಯಾ ಸರ್ಕಾರದವರು ಕೊಟ್ಟಿದ್ದ 8 ಲಕ್ಷ ರೂಪಾಯಿಗಳೂ ಖರ್ಚಾಗದೆ ಉಳಿದಿದೆಯೆಂದರೆ ನಾಚಿಕೆಗೇಡಲ್ಲವೇ!

ಹರಿಜನರು ಗಿರಿಜನರಲ್ಲದೆ Non Scheduled tribesಗೆ ಸೇರಿರುವ ಒಡ್ಡರೂ, ಕೊರಚರುಗಳಿಗಂತೂ ಬಹಳ ಅನ್ಯಾಯ ಮಾಡಿದ್ದಾರೆ. ಅವರಿಗೆ ಸರಿಯಾದ ಹಾಸ್ಟಲ್‌ಗಳಾಗಲೀ ವಿದ್ಯಾರ್ಥಿ ವೇತನಗಳಾಗಲೀ ಇಲ್ಲದಿರುವುದು ಬಹಳ ಅನ್ಯಾಯ.

ಇನ್ನು ಈ ಸಂಬಂಧದಲ್ಲಿ ಕ್ಷಾಮದ ವಿಷಯವನ್ನು ಪ್ರಸ್ತಾಪಿಸುವುದಾದರೆ, ಈಗ 3–4 ವರ್ಷಗಳಿಂದಲೂ ನಮ್ಮ ಸೀಮೆಯ ನಾಲ್ಕಾರು ಜಿಲ್ಲೆಗಳಲ್ಲಿ ಕ್ಷಾಮ ಬರುತ್ತಿದ್ದರೂ ಆದರ ಬಗ್ಗೆ ಒಂದು 'ಚಕಾರ'ವನ್ನೂ ರಾಜ್ಯಪಾಲರ ಭಾಷಣಲ್ಲಿ ಹೇಳಿಲ್ಲದಿರುವುದು ಬಹಳ ವಿಷಾದಕರ. ಆದ್ದರಿಂದಲೇ ಈ ಬಗ್ಗೆ ನಾನು ಒಂದು ತಿದ್ದುಪಡಿಯನ್ನು ಸಹ ಕಳುಹಿಸಿದ್ದೆ. ನಮ್ಮ ದೇಶದಲ್ಲಿ ಚಿತ್ರದುರ್ಗ, ತುಮಕೂರು, ಮುಂತಾದ ಕೆಲವು ಜಿಲ್ಲೆಗಳಲ್ಲಿ ಈಗ ನಾಲ್ಕು ವರ್ಷಗಳಿಂದಲೂ ಕ್ಷಾಮ ಇದ್ದೇ ಇದೆ. ಅಲ್ಲಿ ಶೇಕಡಾ 80ರಷ್ಟು ಜನ ಎರಡು ಹೊತ್ತೂ ಊಟ ಮಾಡುವುದಕ್ಕಿಲ್ಲದವರಾಗಿದ್ದಾರೆ. ಕತ್ತಾಳೆ ಪಟ್ಟೆ ಗೆಡ್ಡೆ ಗೆಣಸುಗಳನ್ನು ತಿಂದು ಜನ ಜೀವಿಸುತ್ತಿದ್ದಾರೆ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ಜನ ಒದ್ದಾಡುತ್ತಿದ್ದರೂ ಸರ್ಕಾರ ಆ ಪ್ರದೇಶಗಳನ್ನು ಕ್ಷಾಮ ಪ್ರದೇಶವೆಂದು ಘೋಷಣೆ ಮಾಡದೆ ಅನಾದರಣೆ ಮಾಡಿದ್ದಾರಲ್ಲಾ! ಅಲ್ಲಿನ ಜನರು ಇಂದಿಗೂ 1½ ಮೈಲಿ ದೂರ ಹೋಗಿ ನೀರು ಹೊತ್ತು ತರಬೇಕಲ್ಲಾ. ಹೊಟ್ಟೆಗೆ ಹಿಟ್ಟಿಲ್ಲ, ಕುಡಿಯುವುದಕ್ಕೆ ನೀರಿಲ್ಲ! ಇದು ಕಲ್ಯಾಣ ರಾಜ್ಯವೆ? ಇನ್ನಾದರೂ ಸರ್ಕಾರದವರು ಈ ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸುವುದಕ್ಕೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ಕ್ಷಾಮ ನಿವಾರಣೆಯ ದೃಷ್ಟಿಯಿಂದ ಆ ಭಾಗದಲ್ಲಿ ರೈಲ್ವೆ ಮಾರ್ಗಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಚಿತ್ರದುರ್ಗ, ರಾಯದುರ್ಗ, ಹೊಸಪೇಟೆ, ಹರಿಹರ ರೈಲ್ವೆ ಮಾಡಿದರೆ ಕ್ಷಾಮ ಪರಿಸ್ಥಿತಿ ಬಂದಾಗ ಬೇಗ ಆಹಾರಪದಾರ್ಥಗಳನ್ನು ಸಾಗಿಸುವುದಕ್ಕೆ ಅನುಕೂಲವಾಗುತ್ತದೆಂಬ ದೃಷ್ಟಿಯಿಂದ ತೀವ್ರಕಾರ್ಯಕ್ರಮ ಕೈಕೊಳ್ಳಬೇಕು. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಇಂಡಿಯಾ ಸರ್ಕಾರದವರ ಮೇಲೆ ಒತ್ತಾಯ ತರಬೇಕಾದ್ದು ಅವಶ್ಯಕ. ಹಿಂದಿನ ಪಾಂಚವಾರ್ಷಿಕ ಯೋಜನೆಯಲ್ಲಿ ಮೈಸೂರು-ಮಂಗಳೂರು ರೈಲ್ವೆ ಮಾಡಬೇಕೆಂದಿದ್ದುದನ್ನು ಆಗ ಮಾಡದಿರುವುದು ಶೋಚನೀಯ ಈಗಲಾದರೂ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೀರೆಂದು ನಂಬಿದ್ದೇನೆ.

ಆ ಮೇಲೆ, ಕ್ಷಾಮದ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಹೆಚ್ಚು ಹೆಚ್ಚಾಗಿ ತೋಡಿಸಬೇಕೆಂದು ಹಿಂದಿನಿಂದಲೂ ನಾವು ಹೇಳುತ್ತಿದ್ದೇವೆ.

ಈಗಲೂ ಮತ್ತೆ ಅದನ್ನು ಹೇಳಬಯಸುತ್ತೇನೆ. ಇದಲ್ಲದೆ, ಈ ಭಾಗದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಳ್ಳುವ ಮನಸ್ಸು ಮಾಡಬೇಕು. ಅಂಥ ಒಂದು ಯೋಜನೆಯೆಂದರೆ, ವಾಣಿವಿಲಾಸ ಸಾಗರಕ್ಕೆ ಯಗಚಿ ನದಿಯಿಂದ ನೀರನ್ನು ಒದಗಿಸಿ ಕೊಟ್ಟು, ಅದರಿಂದ ಚಳ್ಳಕೆರೆ, ಹಿರಿಯೂರು ಮುಂತಾದ ತಾಲ್ಲೂಕುಗಳಿಗೆ ನೀರನ್ನು ಒದಗಿಸಬೇಕು. ಈ ವಿಷಯವನ್ನು ಜಿಲ್ಲಾ ಮತ್ತು ತಾಲ್ಲೂಕ್ ಕಾನ್ಫರೆನ್ಸ್‌ಗಳಲ್ಲಿ ಕೂಡ ನಿರ್ಣಯ ಮಾಡಿ ಕಳುಹಿಸಿದ್ದೇವೆ. ಇಷ್ಟೆಲ್ಲಾ ಆದರೂ ಏನೂ ಮಾಡದಿರುವುದು ವಿಷಾದಕರ. ಸರ್ಕಾರದವರು ಈಗಲಾದರೂ ಇದಕ್ಕೆ ಗಮನ ಕೊಡುವರೆಂದು ನಂಬಿದ್ದೇನೆ.

ಕ್ಷಾಮ ಪರಿಸ್ಥಿತಿಯನ್ನು ಹೋಗಲಾಡಿಸಲು ಇನ್ನೊಂದು ಕಾರ್ಯಕ್ರಮವನ್ನು ಕೈಕೊಳ್ಳಬಹುದು. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಕೊಂಡು ಕ್ಷಾಮವನ್ನು ತಡೆಗಟ್ಟುವುದು ಒಂದು ರೀತಿ. ಆದರೆ ಇದು ನಮ್ಮ ದೇಶದ ಕೇವಲ ಶೇಕಡ 10 ರಷ್ಟು ಪ್ರದೇಶದಲ್ಲಿ ಮಾತ್ರ ಸಾಧ್ಯ. ಆದ್ದರಿಂದ ಇನ್ನೊಂದು ಸಲಹೆಯೆಂದರೆ, ಇಂಥ ಕ್ಷಾಮದ ಪ್ರದೇಶಗಳಲ್ಲಿ ಒಡ್ಡುಗಳನ್ನು (contour Bunding) ಮಾಡುವುದರಿಂದ ಎಷ್ಟೋ ಅನುಕೂಲವಾಗುತ್ತದೆ. ಇಂಥದನ್ನು ಮಾಡಿಸುವ ದೃಷ್ಟಿಯಿಂದಲೇ Land Improvement Act ಮುಂತಾದುವುಗಳನ್ನು ಮಾಡಿದ್ದರೂ ಅವುಗಳ ಮುಖೇನ ಯಾವ ಕೆಲಸವೂ ಕೈಕೊಂಡಿಲ್ಲ. ಇದನ್ನು ಮಾಡುವುದರಿಂದ ಕ್ಷಾಮ ಪ್ರದೇಶದವರಿಗೆ ಹೆಚ್ಚಿನ ಅನುಕೂಲಮಾಡಿದಂ ತಾಗುವುದಲ್ಲದೆ ಒಳ್ಳೆಯ ಬೆಳೆಯನ್ನು ಬೆಳೆಯುವುದಕ್ಕೂ ಅನುಕೂಲವಾಗುತ್ತದೆ. ಈ ಬಗ್ಗೆ ಪರಿಶೋಧನೆ ನಡೆಸಿದ ಕೆಲವು ಸಂದರ್ಭಗಳಿಂದ contour bunding ಮಾಡುವುದರಿಂದ ರೈತರಿಗೆ ವ್ಯವಸಾಯಕ್ಕೆ ಬಹಳ ಅನುಕೂಲವಾಗುತ್ತದೆಂದು ಗೊತ್ತಾಗಿದೆ. ಆದ್ದರಿಂದ ಕ್ಷಾಮಕ್ಕೊಳಗಾಗುವ ಎಲ್ಲಾ ಪ್ರದೇಶಗಳಲ್ಲೂ contour bunding ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಈ ಸುಖೀ ರಾಜ್ಯದಲ್ಲಿ ಅದರಲ್ಲೂ ಕಲ್ಯಾಣ ರಾಜ್ಯದಲ್ಲಿ ಮೊದಲನೆಯದಾಗಿ ನಾವು ಗಮನ ಕೊಡಬೇಕಾಗಿರುವುದು ರೈತರ ಮತ್ತು ವ್ಯವಸಾಯಗಾರರ ಯೋಗಕ್ಷೇಮ. ನಮ್ಮ ದೇಶದಲ್ಲಿ ಬಹುತೇಕ ಜನರು ವ್ಯವಸಾಯಗಾರರು ಇರುವುದರಿಂದ ಅವರ ಯೋಗಕ್ಷೇಮ, ಎಷ್ಟರಮಟ್ಟಿಗೆ ಇದೆ ಮತ್ತು ಅವರು ಯಾವ ರೀತಿಯಲ್ಲಿ ಉತ್ತಮಸ್ಥಿತಿಯಲ್ಲಿದ್ದಾರೆಂಬುದನ್ನು ನಾವು ಈಗ ಯೋಚನೆ ಮಾಡಬೇಕಾಗಿದೆ. ಇನ್ನು ವ್ಯವಸಾಯಗಾರನಿಗೆ ಉಪಕೃತವಾದ ಇಲಾಖೆಯಲ್ಲಿರುವ ಪರಿಸ್ಥಿತಿಯನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಈಗ ಈ ವ್ಯವಸಾಯ ಇಲಾಖೆಗೆ ವ್ಯವಸಾಯ ಮಂತ್ರಿಗಳು ಹೊಸದಾಗಿ ಬಂದಿದ್ದಾರೆ. ಅವರಲ್ಲಿ ನಾನು ಒಂದು ಮಾತನ್ನು ಕೇಳಬೇಕಾಗಿದೆ. ಈಗ ವ್ಯವಸಾಯ ಇಲಾಖೆಯಲ್ಲಿ ಸೀನಿಯಾರಿಟಿ ಲಿಸ್ಟ್ ತಲೆಕೆಳಕಾಗಿದೆ. ಸಾಮಾನ್ಯವಾಗಿ ರಾಜ್ಯಗಳ ಪುನರ್ವಿಂಗಡಣೆಯಾದಮೇಲೆ ಅದನ್ನು ಫೈನಲೈಜ್ ಮಾಡುವುದು ಇಂಡಿಯಾ ಸರ್ಕಾರಕ್ಕೆ ಸೇರಿದ್ದಾಗಿದೆಯೆಂದು ಹೇಳಿದ್ದಾರೆ. ಆದರೆ ಈಗ್ಗೆ 10-15 ವರ್ಷಗಳಾಗಿದ್ದರೂ ಇನ್ನೂ ಈ ಪಟ್ಟಿ ತಯಾರಾಗಿಲ್ಲ ಸುಮಾರು 10-12 ಸಂಖ್ಯೆಗಿಂತ ಕೆಳಗಿದ್ದ ಮನುಷ್ಯನನ್ನು ಆ ಪಟ್ಟಿಯಲ್ಲಿ ಮೇಲೆ ಹಾಕಿದ್ದಾರೆ. ಈ ಬಗ್ಗೆ ಖಂಡಿತವಾಗಿ ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮಿಷನರೂಲ್ಸನ್ನಾಗಲೀ ಅಥವಾ ಇನ್ನಾವ ರೂಲ್ಸನ್ನಾಗಲೀ ಅನುಸರಿಸಲಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಯಾವ ದರ್ಜೆಯವರು ?

ಶ್ರೀ ಬಿ. ಎಲ್. ಗೌಡ.—ಅಸಿಸ್ಟೆಂಟ್ ಡೈರೆಕ್ಟರ್ ದರ್ಜೆಯವರು.

ಶ್ರೀ ಬಿ. ರಾಚಯ್ಯ.—ಹಂಗಾಮಿ ಅಸಿಸ್ಟೆಂಟ್ ಡೈರೆಕ್ಟರನ್ನು ಖಾಯಂ ಆಗಿ ಮಾಡಿದ್ದೇವೆ.

ಶ್ರೀ ಬಿ. ಎಲ್. ಗೌಡ.—ಮುಖ್ಯವಾಗಿ ಸೀನಿಯಾರಿಟಿ ಕಳೆದುಕೊಂಡ ಜನರಿಗೆ ಆಫೀಸಿನಲ್ಲಿ ಕೆಲಸ ಮಾಡುವುದಕ್ಕೆ ಎಷ್ಟರ ಮಟ್ಟಿಗೆ ಮನಸ್ಸು ಇರುತ್ತದೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕೆಲವು ಅಧಿಕಾರಿಗಳು ಹಳೆಯ ಮೈಸೂರಿನಲ್ಲಿ 12 ವರ್ಷಗಳಿಂದ ಕೆಲಸ ಮಾಡುತ್ತಿದ್ದು 12 ಸಂಖ್ಯೆಗಳಿಗಿಂತಲೂ ಕೆಳಗಿದ್ದರು. ಅಂತಹವರನ್ನು ಯಾವುದೋ ಒಂದು ಕಾರಣದಿಂದ ಒಂದಾನೊಂದು ರಾತ್ರಿ ಒಂದೇ ಒಂದು ಆರ್ಡರಿನಲ್ಲಿ ಆ ಸೀನಿಯಾರಿಟಿ ಪಟ್ಟಿಯಲ್ಲಿ ಮೇಲೆ ಹಾಕಿದ್ದಾರೆ, ಯಾವ ಒಂದು ಕಾರಣವನ್ನು ಕೊಟ್ಟಿಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೊಸಬರಾಗಿದ್ದರೂ ಹೆಚ್ಚಿನ ಉತ್ಸಾಹಶಾಲಿಗಳಾಗಿ ಅದರ ಬಗ್ಗೆ ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನೊಂದು ವಿಷಯ. ಸಾಮಾನ್ಯವಾಗಿ ಫೀಲ್ಡ್‌ಮೆನ್‌ಗಳನ್ನು ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರುಗಳನ್ನಾಗಿ ನೇಮಕಮಾಡಿಕೊಳ್ಳುವುದರಲ್ಲಿ ಯಾವ ಕಾನೂನಿನಲ್ಲಿಯೂ ಅವಕಾಶ...ಆದರೆ ಇಲ್ಲಿ ಯಾವುದಾದರೂ ಒಂದು ನೇಮಕದ ಬಗ್ಗೆ ಸರ್ಕಾರಕ್ಕೆ ಪ್ರೊಪೋಸಲ್ ಹೋದರೆ ಎಷ್ಟು ದಿನ ತೆಗೆದುಕೊಳ್ಳುತ್ತಾರೆ. ತಮಗೇ ಗೊತ್ತಿದೆ. ಹೀಗಿರುವಾಗ ಸರ್ಕಾರದವರು ಯೋಚನೆ ಮಾಡಬೇಕು. ಕೇವಲ 24 ಗಂಟೆಗಳಲ್ಲಿಯೇ ಒಬ್ಬ ಫೀಲ್ಡ್‌ಮೆನ್ ನನ್ನು ಅಗ್ರಿಕಲ್ಚರಲ್ ಇನ್‌ಸ್ಪೆಕ್ಟರನ್ನಾಗಿ ನೇಮಕಮಾಡಿರುವ ನಿದರ್ಶನಗಳೂ ಸಹ ಇವೆ. ಈ ಇಲಾಖೆ ನೌಕರರಲ್ಲಿ ಈ ರೀತಿಯಾದ ಅತೃಪ್ತಿ ಅಸಡ್ಡೆ ಅಸಮಾಧಾನವಿದ್ದರೆ, ಇನ್ನು ಎಷ್ಟರ ಮಟ್ಟಿಗೆ ಬಡ ರೈತರಿಗೆ ಉಪಕಾರವಾದೀತು ಎಂಬುದಾಗಿ ನಾನು ಕೇಳುತ್ತೇನೆ.

ಇನ್ನು ರೈತರಿಗೆ ನೇರವಾಗಿ ಗೊಬ್ಬರ ಮತ್ತು ಬೀಜ ಸರಿಯಾಗಿ ಸಪ್ಲೈ ಆಗದೆ ಅವರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ಸಹಕಾರ ಇಲಾಖೆಯಲ್ಲಿ ಮತ್ತು ವ್ಯವಸಾಯ ಇಲಾಖೆಯಲ್ಲಿ ಸೂಕ್ತವಾದ ವ್ಯವಸ್ಥೆಯನ್ನು ಏರ್ಪಾಡು ಮಾಡಿ ರೈತರಿಗೆ ಇರತಕ್ಕ ತೊಂದರೆಗಳನ್ನು ಜಾಗ್ರತೆ ಮಾನ್ಯ ಸಚಿವರು ಬಗೆಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಆಲೂರು ಹನುಮಂತಪ್ಪ (ಸೋಲೂರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ನಾನು ಅವರು ಮಾಡಿರತಕ್ಕ ಭಾಷಣವನ್ನು ಪುಷ್ಟೀಕರಿಸುತ್ತೇನೆ. ಅವರು ತಮ್ಮ ಭಾಷಣದಲ್ಲಿ ಹೇಳಿದ ರೀತಿಯಲ್ಲಿ ನಮ್ಮ ದೇಶದ ಹಾಗೂ ನಮ್ಮ ಕಾಂಗ್ರೆಸ್ ಸರ್ಕಾರದ ಧ್ಯೇಯಧೋರಣೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ನನ್ನ ಮಾನ್ಯ ಸ್ನೇಹಿತರು ಕೆಲವರು ಮಾತನಾಡುತ್ತಾ ಈ ಭಾಷಣ ಬಹಳ ದುರದೃಷ್ಟವಾದುದೆಂದು ಹೇಳಿದರು. ನನಗೆ ಆ ರೀತಿ ಅನ್ನಿಸುವುದಿಲ್ಲವೆಂದು ಹೇಳುತ್ತೇನೆ. 15 ವರ್ಷಗಳಿಂದ

(ಶ್ರೀ ಆಲೂರು ಹನುಮಂತಪ್ಪ)

ಲೂ ಈ ಕಾಂಗ್ರೆಸ್ ಸರ್ಕಾರದವರು ಇಡಿ ದೇಶದಲ್ಲಿ ಎಷ್ಟೋ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನೂ ನೀರಾವರಿ ಯೋಜನೆಗಳನ್ನೂ ಮತ್ತು ವಿದ್ಯುಚ್ಛಕ್ತಿ ಯೋಜನೆಗಳನ್ನೂ ಹಾಗೂ ಜನ ಸಾಮಾನ್ಯರಿಗೆ ಬೇಕಾದಂಥ ರೈಲ್ವೆ ಸೌಕರ್ಯಗಳನ್ನೂ ಮಾಡಿದ್ದಾರೆ. ಇಂತಹ ಅನೇಕ ಯೋಜನೆಗಳನ್ನು ಇನ್ನೂ ಕೈಗೊಳ್ಳುವವರಾಗಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ರೈಲ್ವೆ ಸೌಕರ್ಯವನ್ನು ಎಷ್ಟರಮಟ್ಟಿಗೆ ಜನತೆಗೆ ಕೊಟ್ಟಿದ್ದಾರೆ ಮತ್ತು ಎಷ್ಟು ಮೈಲಿಗಳವರೆಗೆ ರೈಲ್ವೆ ಲೈನುಗಳನ್ನು ಹಾಕಿದ್ದಾರೆ? ತಿಳಿಸಬೇಕು.

ಶ್ರೀ ಆಲೂರು ಹನುಮಂತಪ್ಪ.---ಅದೆಲ್ಲವೂ ಕಾರ್ಯ ರೂಪಕ್ಕೆ ಬರುತ್ತಿದೆ. ಯೋಜನೆಗಳೂ ಸಹ ಆ ಬಗ್ಗೆ ನಡೆಯುತ್ತಿವೆ. ಬೇಕಾದಷ್ಟು ಯೋಜನೆಗಳನ್ನೂ ಸಹ ಜಾರಿಗೆ ತರುತ್ತಿದ್ದಾರೆ. ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಿದ್ದಾಗ ನಾವು ಯಾವ ರೀತಿ ಸಾವಧಾನದಿಂದ ಕೇಳುತ್ತಿದ್ದೆವೋ ಅದೇ ರೀತಿ ಅವರೂ ಸಹ ನಾವು ಮಾತನಾಡುವಾಗ ಸಾವಧಾನದಿಂದ ಶಾಂತಿಯಿಂದ ಕೇಳಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶಾಂತಿ ಎಂಬುದು ಇದರಲ್ಲಿ ಮಾತ್ರ ಇದೆ. ಅಂದರೆ ನಮ್ಮಷ್ಟು ಶಾಂತಿ ಇವರಿಗೆ ಇಲ್ಲವೆಂದು ಬೇಕಾದರೆ ಹೇಳಬಹುದು.

ಶ್ರೀ ಆಲೂರು ಹನುಮಂತಪ್ಪ.—ನಾವು ಹಿಂದೆ ಈ ಅಸೆಂಬ್ಲಿಯಲ್ಲಿ ಕುಳಿತು ಚರ್ಚೆಮಾಡಿದಾಗಲೇ 3 ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಕೈಗೊಳ್ಳಬೇಕೆಂದು ತೀರ್ಮಾನ ಮಾಡಿದ್ದೆವು. ಈಗ ಆ ಸೌಕರ್ಯವನ್ನು ನಾವು ಪಡೆಯುತ್ತಿದ್ದೇವೆ. ಈ ಯೋಜನೆ ದೇಶದಲ್ಲಿ ಇವೊತ್ತು ಮಾಡಿದ ಯೋಜನೆಯಲ್ಲ. ಈ ಯೋಜನೆ 2-3-4 ವರ್ಷಗಳಿಂದಲೂ ಬರುತ್ತಿದೆ. ಈಗ ಇದನ್ನು ಕಾರ್ಯ ರೂಪಕ್ಕೆ ತರತಕ್ಕ ಯೋಚನೆ ದೇಶದ ಮುಂದಿದೆ. ಈಗಾಗಲೇ ಎರಡನೆಯ ಪಾಚವಾರ್ಷಿಕ ಯೋಜನೆ ಮುಗಿದಿದೆ. ಇನ್ನು 3 ನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ನಾವು ಈಗಾಗಲೇ ನಮ್ಮ ದೇಶದ ಆಶೋತ್ತರಗಳನ್ನು ಈ ಸಭೆಯಲ್ಲಿಯೂ ಮತ್ತು ವಿಧಾನ ಪರಿಷತ್ತಿನಲ್ಲಿಯೂ ಚರ್ಚೆಮಾಡಿ ದೇಶದ ಅಭಿಪ್ರಾಯವನ್ನು ಭಾರತ ಸರ್ಕಾರದೊಡನೆ ವ್ಯವಹರಿಸಲು ತಿರ್ಮಾನ ಮಾಡುತ್ತಿದ್ದೇವೆ. ಕೆಲವು ಮಾನ್ಯ ಸ್ನೇಹಿತರು ಈ ಬಗ್ಗೆ ಅಪಹಾಸ್ಯಮಾಡುತ್ತಾ ಹೇಳಿದರು. ಅನೇಕ ಗ್ರಾಮಗಳಲ್ಲಿ ಕುಡಿಯಲಿಕ್ಕೇ ನೀರಿಲ್ಲ, ನಿಜ. ಆದರೆ ಸರ್ಕಾರದ ಆಡಳಿತದಲ್ಲಿ ಎಡರು ತೊಡರುಗಳೇ ಇಲ್ಲವೆಂದು ಹೇಳುವ ಸದಸ್ಯರು ಯಾರು ಇದ್ದಾರೆಂದು ನಾನು ಪ್ರಶ್ನೆ ಮಾಡುತ್ತೇನೆ. ನಮ್ಮ ದೇಶದಲ್ಲಿ ಇನ್ನೂ ಬೇಕಾದಷ್ಟು ರಸ್ತೆಗಳ ಸೌಕರ್ಯಗಳು, ಕುಡಿಯುವ ನೀರಿನ ಸೌಕರ್ಯಗಳು ಕೆರೆ ಕಟ್ಟೆಗಳ ಯೋಜನೆಗಳು ಆಗಬೇಕಾಗಿವೆ. ರೈತರ ಕಷ್ಟಗಳನ್ನು ಹೋಗಲಾಡಿಸಬೇಕು. ಅದಕ್ಕಾಗಿಯೇ ಈ ಪಾಂಚವರ್ಷಿಕ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ. ನಮ್ಮ ಹಳ್ಳಿಗಾಡಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ನಾವು ಮೊದಲು ಯೋಜನೆ ಮಾಡಬೇಕು. ಕೆಲವು ಮಾನ್ಯ ಸ್ನೇಹಿತರು ಈಗ ರಾಮರಾಜ್ಯ ಸ್ಥಾಪನೆಯಾಗಿದೆ. ಪಂಚಾಯಿತ ರಾಜ್ಯ ಮತ್ತು ತಾಲ್ಲೂಕ್ ಬೋರ್ಡ್‌ಗಳು ಸ್ಥಾಪನೆಯಾಗಿವೆ. ಅವುಗಳಲ್ಲಿ ಹಣಕಾಸು ಇಲ್ಲ; ಎಷ್ಟು ಅಭಿವೃದ್ಧಿ ಆಗಬೇಕೋ ಅಷ್ಟು ಅಭಿವೃದ್ಧಿ ಆಗುತ್ತಿಲ್ಲವೆಂದು ಹೇಳಿದರು. ಯಾವ ರೀತಿಯಲ್ಲಿ ಕೆಲಸಮಾಡಿದರೆ ಇವೊತ್ತಿನ ದಿವಸ ಹಳ್ಳಿಗಾಡಿನ ಪರಿಸ್ಥಿತಿಯನ್ನು ಚೆನ್ನಾಗಿ ಸುಧಾರಿಸಬಹುದು ಎಂಬುದನ್ನು ನಾವು ಯೋಚನೆಮಾಡಬೇಕಾಗುತ್ತದೆ ಎಂಬುದಾಗಿಯೂ ಹೇಳಿದರು. ಈ 15 ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರ ಮಾಡಿರತಕ್ಕ ಯೋಜನೆಗಳನ್ನು ಮತ್ತು ನಮ್ಮ ದೇಶದ ಸಮಸ್ಯೆಗಳನ್ನು ಯಾವ ರೀತಿ ನಮ್ಮ ಕಾಂಗ್ರೆಸ್ ಸರ್ಕಾರ ಈಡೇರಿಸಿದೆ ಎಂಬುದನ್ನು ಒಂದೊಂದಾಗಿ ನೋಡಿದರೆ ನಾವು ಬಹಳವಾಗಿ ಮುಂದುವರಿದಿದ್ದೇವೆ ಎಂಬುದಾಗಿ ಹೇಳಬಹುದು. ನಮ್ಮ ಹಳ್ಳಿಗಾಡಿನ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ಬೇಕಾದಷ್ಟು ಸೌಕರ್ಯಗಳನ್ನು ಜನತೆಗೆ ಅದರಲ್ಲೂ ರೈತಾಪಿ ಜನಗಳಿಗೆ ಮಾಡಿಕೊತ್ತಿರುವುದನ್ನು ಯಾರೂ ಮರೆಮಾಚುವಂತಿಲ್ಲ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಶರಾವತಿ ವ್ಯಾಲಿ ಪ್ರಾಜೆಕ್ಟ್ ಬಹಳ ಬೇಗ ಕಾರ್ಯ ರೂಪಕ್ಕೆ ಬರುತ್ತದೆ. ಆಗ ಪ್ರತಿಯೊಂದು ಹಳ್ಳಿಗೂ ವಿದ್ಯುಚ್ಛಕ್ತಿ ಸೌಕರ್ಯ ಒದಗುತ್ತದೆಂಬ ಆಶೋತ್ತರವನ್ನು ಕೊಟ್ಟಿದ್ದಾರ. ಇದಕ್ಕೆ ಪೂರ್ವ ಭಾವಿಯಾಗಿ ನೀರಾವರಿ ಯೋಜನೆಗಳನ್ನು ದೇಶದಲ್ಲಿ ಹೆಚ್ಚಿನ ಮಟ್ಟದಲ್ಲಿ ಜಾರಿಯಲ್ಲಿ ತರತಕ್ಕದ್ದು ನಮ್ಮ ಸರ್ಕಾರದ ಮುಖ್ಯ ಗುರಿಯಾಗಿದೆ. ಅದರಲ್ಲೂ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಇತ್ಯಾದಿ 5-6 ಜಿಲ್ಲೆಗಳಲ್ಲಿ ಮಳೆ ಅಭಾವದಿಂದ ಕ್ಷಾಮ ಪರಿಸ್ಥಿತಿ ಉಂಟಾಗಿರುವ ಕಾರಣ ಕ್ಷಾಮ ನಿವಾರಣಾ ಬೋರ್ಡನ್ನು ರಚಿಸಬೇಕೆಂದು ನಾನು ಹೇಳುತ್ತೇನೆ. ಆದರೆ ಸುಮ್ಮನೆ ಕ್ಷಾಮ ನಿವಾರಣಾ ಬೋರ್ಡ್ ಎಂದು ರಚನೆಮಾಡಿದರೆ ಸಾಲದು. ಅದರಲ್ಲಿ ಹಣ ಕಾಸಿನ ಪರಿಸ್ಥಿತಿಯನ್ನು ನಾವು ಸಾಕಷ್ಟು ಉತ್ತಮಗೊಳಿಸಲು ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಕೇಂದ್ರ ಸರ್ಕಾರದೊಡನೆ ಹೊಡೆದಾಡಬೇಕು. ಪ್ರತಿಯೊಬ್ಬ ರೈತನೂ ಕಷ್ಟಪಟ್ಟು ದುಡಿಯಬೇಕು. ತನ್ನ ಗ್ರಾಮಕ್ಕೆ ಹೇಗಾದರೂ ಮಾಡಿ ಬಾವಿಯನ್ನು ಕಟ್ಟಿಸಬೇಕೆಂಬ ಉದ್ದೇಶವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ದುಡಿಯಬೇಕು. ಹಳ್ಳಿಗಳಲ್ಲಿ ನೀರಾವರಿ ಬಾವಿಗಳನ್ನು ತೆಗೆಸಬೇಕಾದರೆ ಸುಮಾರು 10-20 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಬಗ್ಗೆ ನಾವು ಒಂದು ನಿರ್ಣಯ ಮಾಡುವುದಾದರೆ ಮೈಸೂರು ಸರ್ಕಾರದ ಹಾಗೂ ಇಂಡಿಯಾ ಸರ್ಕಾರದ ಸಂಪೂರ್ಣ ಹಣ ಸಹಾಯ ಒದಗುತ್ತದೆಂದು ನಾನು ಹೇಳುತ್ತೇನೆ. ಈ ಬಗ್ಗೆ ರಿವಾಲ್‌ವಿಂಗ್ ಫಂಡ್ ಎಂದು ಮಾಡಿದರೆ ಸುಮಾರು 10-20 ಕೋಟಿ ರೂಪಾಯಿಗಳನ್ನು ಸುಲಭವಾಗಿ ಪಡೆಯಬಹುದು. ಆಗ ಮೈಸೂರಿನ ಎಲ್ಲಾ ಭಾಗಗಳಿಗೂ ಪ್ರತಿಯೊಂದು ಕುಟುಂಬಕ್ಕೂ ಸಾಕಷ್ಟು ಸಾಕರ್ಯಗಳನ್ನು ಕೊಡಬಹುದು. ಇವೊತ್ತಿನ ದಿವಸ ಕೆರೆ ಕಟ್ಟೆಗಳ ದುರಸ್ತು ಮಾಡುವುದು ಬಹಳ ಮುಖ್ಯ. ರೈತನು ಬೆಳೆಯುವ ಪದಾರ್ಥಗಳಿಗೆ ಸಾಕಷ್ಟು ಬೆಲೆ ಬಾರದೇ ಇರುವುದರಿಂದ ಅವನು ಬೆಳೆಯುವುದೇ ಅನಾವಶ್ಯಕವೆಂದು ಹೇಳುವ ಪರಿಸ್ಥಿತಿ ಇತ್ತೀಚೆಗೆ ಗ್ರಾಮಾಂತರಗಳಲ್ಲಿ ಉಂಟಾಗುತ್ತಿದೆ. ರೈತರು ಆಹಾರ ಪದಾರ್ಥಗಳನ್ನು ಬೆಳೆಯಲು ಪಡತಕ್ಕ ಕಷ್ಟವನ್ನು ವರ್ಣಿಸಲಸಾಧ್ಯವಾಗಿದೆ. ಆದ್ದರಿಂದ ಅವರಿಗೆ ನೀರಾವರಿ ಬಾವಿಗಳನ್ನು ಒದಗಿಸುವುದು, ಸಾಲ ಸಿಕ್ಕುವ ವ್ಯವಸ್ಥೆ ಮಾಡುವುದು, ಇವೆಲ್ಲಾ ಕೊಟ್ಟರೆ ನಿಜವಾಗಿ ಅವರು ದೇಶಕ್ಕೆ ಬೇಕಾದಷ್ಟು ಆಹಾರೋತ್ಪತ್ತಿಯ ಕಡೆ ಗಮನಕೊಡಲು ಅವಕಾಶವಾಗುತ್ತದೆ. ಅವರಿಗೆ ಆಹಾರ ಸಾಮಾಗ್ರಿಗಳನ್ನು ಬೆಳೆಯುವ ಶಕ್ತಿಯೂ ಜಾಸ್ತಿಯಾಗುತ್ತದೆ. ಮುಖ್ಯವಾಗಿ

63 ನೆಯ ಇಸವಿಯಲ್ಲಿ ಶರಾವತಿ ವ್ಯಾಲಿ ಪ್ರಾಜೆಕ್ಟ್ ಕೆಲಸ ಮುಗಿಯುವ ನಿರೀಕ್ಷೆ ಇರುವುದರಿಂದ ಅದನ್ನು ಉಪಯೋಗಿಸುವ ರೈತರಿಗೆ ಹೆಚ್ಚಿಗೆ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ. ಈ ವಿದ್ಯುಚ್ಛಕ್ತಿ ಸರಬರಾಯಿಯ ರೀತಿನೀತಿಗಳು ಹೇಗಿವೆ ಎಂಬುದನ್ನು ಸರ್ಕಾರದವರು ಪರಿಶೀಲಿಸಿ 28,800 ಗ್ರಾಮಾಂತರ ಪ್ರದೇಶಗಳಿಗೆಲ್ಲಾ ನೀರಾವರೀ ಬಾವಿಗಳನ್ನು ಒದಗಿಸಲು ತಕ್ಕ ವ್ಯವಸ್ಥೆ ಮಾಡಬೇಕು. ಒಟ್ಟಿನಲ್ಲಿ ನಾಲಾ ಪ್ರದೇಶಗಳನ್ನು ಬಿಟ್ಟು ಯಾವ ಭಾಗದಲ್ಲಿ ರೈತ ಕೇವಲ 1,2,3,4,5,10 ಎಕರೆ ಜಮೀನು ಮಾಡುತ್ತಿದ್ದರೂ ಅವನಿಗೂ ಆ ಸ್ಥಳದಲ್ಲಿ ಬಾವಿ ತೋಡಲಿಕ್ಕೆ ಬೇಕಾದಷ್ಟು ಹಣವನ್ನು ಸಾಲದ ರೂಪವಾಗಿ ಕೊಡುವುದು ಬಹಳ ಪ್ರಾಮುಖ್ಯವಾದದು.

ನೀರಾವರೀ ಯೋಜನೆಯ ವಿಚಾರದಲ್ಲಿ ಒಂದು ಅಂಶವನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. 10 ಕೋಟಿ ರೂಪಾಯಿಗಳನ್ನು ನೀರಾವರಿ ಬಾವಿಗಳಿಗಾಗಿ ಇಟ್ಟಿರುವುದರಲ್ಲಿ ಪ್ರತಿ ವರ್ಷ 1 ಕೋಟಿ ರೂಪಾಯಿ ಖರ್ಚಾಗುವ ಒಂದು ಸ್ಕೀಂ ಇದು. 10 ಕೋಟಿ ರೂಪಾಯಿಗಳನ್ನು ಸಾಲ ಕೊಡುವುದಾದರೆ ವರ್ಷಕ್ಕೆ 1 ಕೋಟಿ ರೂಪಾಯಿಗಳಂತೆ 10 ವರ್ಷಗಳಲ್ಲಿ ವಾಪಸು ಬರುತ್ತದೆ. ಈ ರೀತಿ ಇದು ಒಂದು ರಿವಾಲ್ವಿಂಗ್ ಸ್ಕೀಂ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅರ್ಥ ಶಾಸ್ತ್ರದಲ್ಲಿ ತಾವು ಕೌಟಿಲ್ಯನನ್ನು ಮೀರಿಸಿದ್ದೀರಿ...(ನಗು)

ಶ್ರೀ ಆಲೂರು ಹನುಮಂತಪ್ಪ.—ನಾನು ಹೇಳಿದ್ದನ್ನು ತಾವು ಅರ್ಥ ಮಾಡಿಕೊಳ್ಳದಿದ್ದರೆ ನನ್ನ ತಪ್ಪಲ್ಲ. ಅನೇಕ ಸದಸ್ಯರು ಬೆಂಗಳೂರು ನಗರದ ಡೈರಿ ಪ್ರಾಜೆಕ್ಟ್ ವಿಷಯವನ್ನು ಪ್ರಸ್ತಾಪಮಾಡಿದ್ದಾರೆ. ಅತ್ಯಂತ ಮುಖ್ಯವಾಗಿ ಆಗಬೇಕಾದ್ದು ಇದು. ಬೆಂಗಳೂರು ಜಿಲ್ಲೆ, ಹಾಗೂ ಕೋಲಾರ ಜಿಲ್ಲೆಯಲ್ಲಿ ರೈತರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾಗಿದ್ದರೆ ಪ್ರತಿಯೊಂದುಕುಟುಂಬಕ್ಕೂ ಒಂದು ಹಸು ಅಥವಾ ಎಮ್ಮೆಯ ಸಲುವಾಗಿ ಹಣ ಸಹಾಯ ಮಾಡುವುದಾದರೆ ಹಾಲಿನ ಕೊರತೆ ನೀಗುವುದಲ್ಲದೆ ಅವರ ಜೀವನವನ್ನು ಸುಧಾರಿಸಿದಂತಾಗುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ ಆದಷ್ಟು ಜಾಗ್ರತೆ ಇದನ್ನು ಕಾರ್ಯ ರೂಪಕ್ಕೆ ತರಲು ತಾವು ಗಮನ ಕೊಡಬೇಕು.

ಅಗ್ರಿಕಲ್ಚರಲ್ ಕೋ ಆಪರೇಟೀವ್ ಸೊಸೈಟಿಗಳಲ್ಲಿ 12 ಲಕ್ಷದವರೆಗೂ ಸದಸ್ಯರಿದ್ದಾರೆ ಎಂದು ಕೇಳುತ್ತೇವೆ. ಯಾವ ದೇಶದಲ್ಲೇ ಆಗಲಿ ಪ್ರತಿಯೊಂದು ಕುಟುಂಬವೂ ಕೂಡ ಯಾವುದಾದರೂ ಒಂದು ಸೊಸೈಟಿಗೆ ಸದಸ್ಯರಾಗಿರಬೇಕಾದ್ದು ಬಹಳ ಮುಖ್ಯ. ಈ ಸೊಸೈಟಿಗಳಲ್ಲಿ ಸಾಲ ಕೊಡತಕ್ಕ ವ್ಯವಸ್ಥೆ ಆದರೂ ಕೂಡ ಬಹಳ ಕಠಿಣವಾಗಿದೆ. ಸರಿಯಾದ ಕಾಲಕ್ಕೆ ಸಾಲ ಸಿಕ್ಕುವಂತಹ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಸಾಧ್ಯವಾದ ಮಟ್ಟಿಗೂ ಸುಲಲಿತವಾದ ರೀತಿಯಲ್ಲಿ ಆದಷ್ಟು ಜಾಗ್ರತೆ ನಮ್ಮ ರೈತರಿಗೆ ಸಾಲ ಸಿಕ್ಕುವಂತಹ ವ್ಯವಸ್ಥೆ ಮಾಡಬೇಕಾದ್ದು ಬಹಳ ಮುಖ್ಯ.

ರೂರಲ್ ಕಮ್ಯುನಿಕೇಷನ್ ವಿಷಯ. ಒಂದೊಂದು ತಾಲ್ಲೂಕಿನಲ್ಲಿ 50 ಮೈಲಿ ಮಾತ್ರ ತೆಗೆದುಕೊಳ್ಳುತ್ತೇವೆ ಎಂದು ನಿಗದಿ ಮಾಡಿದ್ದೀರಿ. ಇವೊತ್ತಿನ ದಿವಸ ಈ ರಸ್ತೆಗಳ ನಿರ್ಮಾಣ ಬಹಳ ಪ್ರಾಮುಖ್ಯವಾಗಿ ಆಗಬೇಕಾಗಿದೆ. ಇದಕ್ಕೆ ಹೆಚ್ಚು ಹಣ ಕೊಡಬೇಕು. ಸೆಂಟರ್‌ನಿಂದ ಬರಬೇಕಾದ ಹಣ ಸಹಾಯವನ್ನು ಸಹ ಪಡೆದು ಈ ಕೆಲಸ ತ್ವರಿತವಾಗಿ ಮಾಡಬೇಕು.

ಕೆರೆಗಳ ದುರಸ್ತಿ ವಿಷಯವಾಗಿ ಹೇಳುವುದಾದರೆ ಡೀಸಿಲ್ಟಿಂಗ್ ಆಫ್ ಟ್ಯಾಂಕ್ ಆಗಬೇಕು. ನಿರುದ್ಯೋಗ ಸಮಸ್ಯೆ ಬಹಳವಾಗಿದೆ. ವಿದ್ಯಾವಂತ ನಿರುದ್ಯೋಗಿಗಳು ಹಳ್ಳಿಗಳಿಗೆ ಹೋಗಿ ವ್ಯವಸಾಯ ಮಾಡುತ್ತೇವೆ ಎಂದು ಹೇಳುತ್ತಾ ಇದ್ದಾರೆ. ಆದರೆ ಹಳ್ಳಿಗಳಲ್ಲಿರುವವರಿಗೇ ಉದ್ಯೋಗವಿಲ್ಲದೆ ನಿರುದ್ಯೋಗ ತಾಂಡವವಾಡುತ್ತಿದೆ. ದೇಶದ ಎಲ್ಲಾ ಭಾಗದಲ್ಲೂ ಸಹ ಕೆರೆಗಳು ಹೂಳಿನಿಂದ ಮುಚ್ಚಿ ಹೋಗುತ್ತಾ ಇವೆ. ಆ ಹೂಳನ್ನು ತೆಗೆಯುವ ಕೆಲಸ ಮಾಡಿಸಿ ಕೆರೆಗಳಲ್ಲಿ ಒಂದು ವರ್ಷದವರೆಗೂ ನೀರು ನಿಲ್ಲುವಂಥಾ ವ್ಯವಸ್ಥೆ ಮಾಡಬೇಕು. ಇದನ್ನು ಸಂಬಂಧಪಟ್ಟ ಮಂತ್ರಿಗಳು ಇಲಾಖೆಯ ಕಡೆಯಿಂದಲೂ ಹಾಗು, ತಾಲ್ಲೂಕು ಬೋರ್ಡ್ ರಚನೆಯಾಗಿರುವುದರಿಂದ ಅವರ ಮೂಲಕವೂ ಮಾಡಿಸಬೇಕು. Man Power ಏನಿದೆ, ಮನುಷ್ಯ ಶಕ್ತಿ, ಅದನ್ನು ಆದಷ್ಟು ಉಪಯೋಗಿಸಿಕೊಳ್ಳಲು ಪ್ರಯತ್ನ ಮಾಡಬೇಕು, ಹಣವೇ ಮುಖ್ಯವಲ್ಲ. ತಾಲ್ಲೂಕು ಬೋರ್ಡ್ ಸದಸ್ಯರ ಶಕ್ತಿ, ಗ್ರಾಮಪಂಚಾಯ್ತಿ ಸದಸ್ಯರ ಶಕ್ತಿ ಬಹು ಮುಖ್ಯವಾಗಿ ಬೇಕಾಗಿದೆ, ಇವತ್ತಿನ ದಿವಸ ಗ್ರಾಮ ಪುನರ್ ನಿರ್ಮಾಣವಾಗಬೇಕಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಗ್ರಾಮ ಪಂಚಾಯ್ತಿ ಚೆನ್ನಾಗಿ ಕೆಲಸ ಮಾಡುತ್ತಿಲ್ಲ, ವ್ಯಾಜ್ಯ ವ್ಯವಹಾರಗಳು ಅಲ್ಲಿ ನಡೆಯುತ್ತೀವೆ ಎಂದು ಕೆಲವರು ಹೇಳುತ್ತಾರೆ. ಪ್ರಜಾಪ್ರಭುತ್ವದಲ್ಲಿ ಎಲ್ಲಿ ವ್ಯತ್ಯಾಸ ಇದೆ ಅಲ್ಲಿ ಸತ್ಯಾಂಶ ಹೊರಗೆ ಬರುತ್ತದೆ. ಎಲ್ಲಿ ವ್ಯತ್ಯಾಸ ಇಲ್ಲ, ಅಲ್ಲಿ ವ್ಯಾಜ್ಯವೂ ಇಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಪ್ರಜಾಪ್ರಭುತ್ವದಲ್ಲಿ ವ್ಯತ್ಯಾಸವಿದ್ದ ಮಾತ್ರಕ್ಕೆ ಅದು ತಪ್ಪು ಎಂದು ಭಾವನೆ ಮಾಡಬಾರದು. ಪ್ರಜಾಪ್ರಭುತ್ವದ ನಿಜವಾದ ಸಂಕೇತ ಎಂದರೆ ಆ ರೀತಿ ವ್ಯತ್ಯಾಸ ಮನೋಭಾವ ಇದ್ದು ಒಬ್ಬರಿಗೊಬ್ಬರಲ್ಲಿ ವಿಚಾರ ವಿನಿಮಯ ಮಾಡಿಕೊಂಡು ತಪ್ಪನ್ನು ಸರಿಪಡಿಸಿಕೊಳ್ಳುವುದೇ ಆಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡೀಸಿಲ್ಟಿಂಗ್ ಮಾಡಿದರೆ ನಿರುದ್ಯೋಗ ನಿವಾರಣೆ ಹೇಗೆ ಆಗುತ್ತದೆ?

ಶ್ರೀ ಆಲೂರು ಹನುಮಂತಪ್ಪ.—ಗ್ರಾಮಾಂತರ ಪ್ರದೇಶದಲ್ಲಿ ಕೆರೆಗಳು ಹೂಳಿನಿಂದ ತುಂಬಿರುವುದು ಪ್ರತಿಯೊಬ್ಬ ಸದಸ್ಯರಿಗೂ ಗೊತ್ತಿದೆ. ಬೇಸಿಗೆಯಲ್ಲಿ 3-4 ತಿಂಗಳು ವ್ಯವಸಾಯದ ಯಾವ ಕಸಬೂ ಇರುವುದಿಲ್ಲ. ಸುಮ್ಮನೆ ಕಾಲ ಕಳೆಯತಕ್ಕ ಪರಿಸ್ಥಿತಿ ಇದೆ. ಬೇಸಿಗೆ ಕಾಲದಲ್ಲಿ ನಮ್ಮ ಕೆರೆಗಳನ್ನು ದುರಸ್ತಿ ಮಾಡಿಕೊಳ್ಳದಿದ್ದರೆ ಸರ್ಕಾರದ ಹಣ ಸಹಾಯವನ್ನು ಅಪೇಕ್ಷೆ ಮಾಡತಕ್ಕ ಪರಿಸ್ಥಿತಿ ಇದೆ. ನಮ್ಮ ಗ್ರಾಮದ ಪ್ರತಿಯೊಂದು ಕುಟುಂಬದವರೂ ಸಹ ಈ ಕೆರೆ ಹೂಳನ್ನು ತೆಗೆದು ಗ್ರಾಮದ ಸುತ್ತಮುತ್ತಲೂ ಇರತಕ್ಕ ಹಳ್ಳಗಳಿಗೆ ತುಂಬುವುದಾದರೆ ಗ್ರಾಮದ ನೈರ್ಮಲ್ಯವೂ ಆಯಿತು; ಕೆರೆಯ ದುರಸ್ತಿಯೂ ಆಯಿತು. ಈ ರೀತಿ ಮಾಡುವುದು ಉತ್ತಮವಾದ ಮಾರ್ಗ ಎಂದು ನನ್ನ ಖಚಿತವಾದ ಅಭಿಪ್ರಾಯ ಅದನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

5-30 P.M.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ರಾಜ್ಯಪಾಲರ ಭಾಷಣದ ಮೇಲೆ ಚರ್ಚೆನಡೆಸುವಾಗ 15 ನಿಮಿಷ ಕಾಲಾವಕಾಶವನ್ನು ಎಲ್ಲ ಸದಸ್ಯರಿಗೂ

(ಶ್ರೀ ಎಸ್. ಗೋಪಾಲಗೌಡ)

ಸಾಮಾನ್ಯವಾಗಿ ಕೊಡುವ ಹಾಗೆಕಾಣುತ್ತದೆ. ನಾವು ತಿದ್ದುಪಡಿಗಳನ್ನು ಕಳುಹಿಸಿದ್ದೇವೆ, ಸಂಪ್ರದಾಯದ ಪ್ರಕಾರ ರಾಜ್ಯಪಾಲರ ಭಾಷಣವನ್ನು ವಂದನಾ ನಿರ್ಣಯನ್ನು ಸಭೆಯ ಮುಂದಿಟ್ಟಿದ್ದಾರೆ. ಮಂತ್ರಿಗಳು ಅದನ್ನು ಸಮರ್ಥಿಸುತ್ತಾರೆ. ಸದಸ್ಯರು ಮಾತನಾಡಿದಮೇಲೆ ಉತ್ತರ ಕೊಡುವ ಹಕ್ಕು ಸರ್ಕಾರಕ್ಕಿದೆ. ಪಕ್ಷದ ಮೀಟಿಂಗಿನಲ್ಲಿಟ್ಟು ಅಲ್ಲಿ ಸದಸ್ಯರ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಇಲ್ಲಿ ನಮ್ಮ ಮುಂದೆ ಬರುತ್ತದೆ. ಹೀಗಿರುವಾಗ ಈ ರೀತಿಯಾದರೆ ವಿರೋಧ ಪಕ್ಷದವರಿಗೆ ಈ ಭಾಷಣದಲ್ಲಿರುವ ಲೋಪ ದೋಷಗಳನ್ನು ತೋರಿಸುವುದಕ್ಕೆ ಅವಕಾಶ ಕಡಮೆಯಾಗುತ್ತದೆಂದು ಈಸಂದರ್ಭದಲ್ಲಿ ನಮ್ರತೆಯಿಂದ ಹೇಳುತ್ತಾ ಈ ಕಡೆ ಹೆಚ್ಚು ಗಮನ ಕೊಡುತ್ತೀರೆಂದು ನಂಬಿದ್ದೇನೆ.

ಅಧ್ಯಕ್ಷರು.—ಇದುವರೆಗೆ ಭಾಷಣಗಳನ್ನು ಮಾಡಿದವರು ಯಾರು ಯಾರು ಎಷ್ಟು ಸಮಯ ತೆಗೆದುಕೊಂಡಿದ್ದಾರೆಂದು ನೋಡಿದರೆ, ನಾನು ಎದುರು ಪಕ್ಷದವರಿಗೇ ಹೆಚ್ಚು ಅವಕಾಶ ಕೊಟ್ಟಿದ್ದೇನೆಂದು ಕಾಣುತ್ತದೆ. ಈ ಪಕ್ಷದವರು, ಆ ಪಕ್ಷದವರು ಮಾತನಾಡಬಾರದೆಂದು ಕೇಳಿಕೊಳ್ಳಬಹುದು, ಅಷ್ಟೆ. ಆದರೆ ಅವರು ಮಾತನಾಡಲು ಎದ್ದು ನಿಂತರೆ ಕೂಡದು ಎಂದು ಹೇಳುವುದು ಸರಿಯಲ್ಲವೆಂದು ಕಾಣುತ್ತದೆ. ಪ್ರಥಮದಲ್ಲಿ ಒಬ್ಬೊಬ್ಬರು ಸದಸ್ಯರು 15 ನಿಮಿಷಗಳಿಗೆ ಜಾಸ್ತಿ ಸಮಯವನ್ನು ತೆಗೆದು ಕೊಳ್ಳಬಾರದೆಂದು ಅರಿಕೆಮಾಡಿಕೊಂಡಿದ್ದೇನೆ. ಆ ಸಮಯದಲ್ಲಿ ಶ್ರೀಮಾನ್ ಗೋಪಾಲಗೌಡರು ಸಭೆಯಲ್ಲಿಲ್ಲದಿದ್ದರೆ ಅದು ನನ್ನ ತಪ್ಪಲ್ಲ. ಒಬ್ಬರಿಗೆ ಜಾಸ್ತಿ ಸಮಯ ಕೊಟ್ಟು ಮಿಕ್ಕವರಿಗೆ ಕಡಮೆ ಸಮಯ ಕೊಟ್ಟರೆ ಆಗ ನನ್ನದು ತಪ್ಪಾಗುತ್ತದೆಂದು ನನ್ನ ಭಾವನೆ.

ಶ್ರೀ ಎಚ್. ಡಿ ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕಾಗಿ ವಂದನೆ ಗಳನ್ನರ್ಪಿಸುವ ಸಮಯದಲ್ಲಿ ರಾಜ್ಯಪಾಲರ ಭಾಷಣವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನೋಡಿದರೆ, ರಾಜ್ಯದ ಜನರಿಗೆ, ಅದರಲ್ಲಿಯೂ ಹಳ್ಳಿಗಾಡಿನ ಜನರಿಗೆ ಉತ್ಸಾಹ ಜನಕವಾದುದು ಇದರಲ್ಲೇನೂ ಇಲ್ಲವೆಂದು ಕಾಣುತ್ತದೆ. ವಿರೋಧ ಪಕ್ಷದ ಸದಸ್ಯರು ಮಾತನಾಡಿದುದನ್ನು ಆಡಳಿತ ಪಕ್ಷದ ಸದಸ್ಯರು ಬರಿಯ ಟೀಕೆಎಂದು ಒಂದು ಶ್ಲೋಕವನ್ನು ಹೇಳುತ್ತಾರೆ. ಆದರೆ ಆಡಳಿತ ಪಕ್ಷದ ಸದಸ್ಯರ ಭಾಷಣಗಳನ್ನು ನೋಡಿದರೆ ಅವರೇ ಟೀಕೆಮಾಡುತ್ತಾರೆಂಬುದು ವ್ಯಕ್ತವಾಗುತ್ತದೆ. ಆದುದರಿಂದ, ವಿರೋಧ ಪಕ್ಷದವರು ಮಾತ್ರ ಟೀಕೆ ಮಾಡುತ್ತಿಲ್ಲವೆಂದು ಹೇಳುತ್ತೇನೆ. ಆಡಳಿತ ಪಕ್ಷದವರು ಆಡಳಿತದ ದೋಷಗಳನ್ನು ಈ ಸಭೆಯ ಮುಂದಿಡುತ್ತಿರುವುದು ಗಮನಾರ್ಹವಾದ ವಿಷಯ. ಈ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಅನೇಕ ಟೀಕೆಗಳನ್ನು ಮಾಡಬಹುದು, ಮೊನ್ನೆ ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಶಿವಪ್ಪನವರು ಮಾತನಾಡುತ್ತ ಆಡಳಿತದಲ್ಲಿ ಲಂಚದ ಹಾವಳಿ ಹೆಚ್ಚಾಗಿದೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. ಆಡಳಿತ ಪಕ್ಷದ ಶ್ರೀಮಾನ್ ಘೋರ್ಪಡೆಯವರು ಇತರರೂ ಇದನ್ನೇ ಹೇಳಿದರೂ ಕೂಡ ಯಾರೂ ಇದರ ನಿವಾರಣೋಪಾಯವನ್ನು ಕಂಡು ಹಿಡಿಯುತ್ತೇವೆಂದು ಹೇಳಲಿಲ್ಲ. ಮೊದಲು ಆಡಳಿತ ಸೂತ್ರವನ್ನು ವಹಿಸಿರುವ ಜನ, ಅವರು ಯಾವ ಪಕ್ಷದವರೇ ಆಗಲಿ, ಸಾರ್ವಜನಿಕ ಮುಖಂಡರೆನಿಸಿ ಕೊಂಡಿರುವವರು ತಮ್ಮನ್ನು ತಾವು ಸರಿಪಡಿಸಿಕೊಂಡು ನಡೆದರೆ ಉತ್ತಮ. ಮಂತ್ರಿಗಳಾಗಲೀ, ಶಾಸಕರಾಗಲಿ ಕಾನೂನು ಮುರಿಯುವುದಕ್ಕೆ ಪ್ರಯತ್ನ ಮಾಡಿದರೆ ಇತರರಿಗೆ ಇಂಥದಕ್ಕೆ ಹೆಚ್ಚು ಅವಕಾಶಗಳನ್ನು ಕಲ್ಪಿಸಿದ ಹಾಗಾಗುತ್ತದೆ. ಒಂದು ಘಟನೆಯನ್ನು ತಮ್ಮ ಮುಂದಿಡುತ್ತೇನೆ. ಕೆಲವು ದಿವಸಗಳ ಹಿಂದೆ ರುದ್ರಪಟ್ಟಣದಲ್ಲಿ ಮಹಾಯಾಗವಾದ ಸಮಯದಲ್ಲಿ ಆಡಳಿತ ಸೂತ್ರವನ್ನು ವಹಿಸಿದ್ದ ಒಬ್ಬರು ಮಂತ್ರಿಗಳು ಅಲ್ಲಿಗೆ ತಮ್ಮ ಪರಿವಾರ ಸಮೇತ ಹೋದ ವಿಷಯವನ್ನು ನನಗಿಷ್ಟವಿಲ್ಲದಿದ್ದರೂ ಸಭೆಯ ಮುಂದಿಡಬೇಕಾಗಿದೆ. ಹೀಗಿರುವಾಗ ಅಧಿಕಾರಿಗಳಲ್ಲಿರುವ ಲಂಚದ ಚಟವನ್ನು ಲಂಚ ನಿರೋಧ ಇಲಾಖೆಯಿಂದ ತಪ್ಪಿಸಲು ಸಾಧ್ಯವೇ ಎನ್ನುವುದನ್ನು ಯೋಚಿಸಬೇಕು. ಆ ಮಂತ್ರಿಗಳು ತಮ್ಮ ಸಂಸಾರ ಸಮೇತ ಅಲ್ಲಿಗೆ ಹೋದಾಗ ಅವರಿಗೆ ಬೇಕಾದ ಟೆಂಟ್ ವಗೈರೆ ಸಾಮಗ್ರಿಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯ ಲಾರಿಯಲ್ಲಿ ಸಾಗಿಸಿ ಆ ಖರ್ಚನ್ನು ತಮಗೆ ಹಾಕಬಾರದೆಂದು ಬೇರೆಯ ಕೆಲಸಗಳಿಗೆ ಚಾರ್ಜು ಮಾಡಬೇಕೆಂದು ಹೇಳಿರುವ ನಿದರ್ಶನ ನನಗೆ ಗೊತ್ತಿದೆ. ವ್ಯಕ್ತಿಯ ಮೇಲಿನ ದ್ವೇಷದಿಂದ ನಾನು ಇದನ್ನು ಹೇಳುತ್ತಿಲ್ಲ. ಆಡಳಿತ ಸೂತ್ರಗಳನ್ನು ಹಿಡಿದಿರುವ ಈ ಪಕ್ಷದವರು ತಮ್ಮನ್ನುತಾವು ತಿದ್ದಿಕೊಳ್ಳುವವರೆಗೆ ಬೇರೆಯವರನ್ನು ಸರಿಪಡಿಸುವುದು ಸಾಧ್ಯವಿಲ್ಲವೆಂದು ಹೇಳುತ್ತಿದ್ದೇನೆ. ನಾವು ಸಭೆಗೆ ಸದಸ್ಯರಾಗಿ ಬಂದು ಸಭೆಯ ಮುಂದೆ ಪ್ರಮಾಣ ವಚನವನ್ನು ಸ್ವೀಕಾರ ಮಾಡಿರುವಂತೆ ನಡೆದರೆ ಮಾತ್ರ ದೇಶಕ್ಕೆ ಕಲ್ಯಾಣವಾಗುತ್ತದೆ.

ರಾಜ್ಯಪಾಲರ ಭಾಷಣದ ಮೇಲೆ ಅನೇಕ ವಿಷಯಗಳನ್ನು ಚರ್ಚೆಮಾಡಬಹುದು. ನೀರಾವರಿಯ ವಿಚಾರದಲ್ಲಿ ಹೇಳುವುದಾದರೆ, ನಮ್ಮ ಜಿಲ್ಲೆಯಲ್ಲಿ ಹೇಮಾವತಿ ಯೋಜನೆಯನ್ನು ಕಾರ್ಯಗತ ಮಾಡಬೇಕೆಂದು ಮೂವತ್ತು ನಲವತ್ತು ವರ್ಷಗಳಿಂದಲೂ ಈ ಸಭೆಯ ಮುಂದೆ ನಿನಂತಿ ಬರುತ್ತಲೇ ಇದೆ. ಹಾರಂಗಿ ಯೋಜನೆಯ ವಿಷಯದಲ್ಲಿ ಸೆಂಟ್ರಲ್ ವಾಟರ್ ಅಂಡ್ ಪವರ್ ಕಮೀಷನವರು ಕೆಲವು ಸಲಹೆಗಳನ್ನು ಕೊಟ್ಟಿದ್ದರಿಂದ ಪುನಃ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆಂದು ಪಬ್ಲಿಕ್‌ವರ್ಕ್ಸ್ ಮಂತ್ರಿಗಳು ಹೇಳಿದರು. ಆದರೆ ಹೇಮಾವತಿ ಯೋಜನೆಯ ವಿಷಯದಲ್ಲಿ ಅವರೇನನ್ನೂ ಹೇಳಲಿಲ್ಲ. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿಯೂ ನಮಗೇನೂ ತಿಳಿವಳಿಕೆ ಕೊಟ್ಟಿಲ್ಲ. ಆಹಾರ ಮತ್ತು ಆರ್ಥಿಕ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಆಡಳಿತ ಪಕ್ಷದವರು ಚುನಾವಣೆಯ ಕಾಲದಲ್ಲಿ ಹೇಳುತ್ತಾರೆ. ಜನತೆಯ ಕಲ್ಯಾಣಕ್ಕಾಗಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಪಬ್ಲಿಕ್ ವರ್ಕ್ಸ್ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ. ಹಾರಂಗಿ ಯೋಜನೆಯನ್ನು ಕಾರ್ಯಗತ ಮಾಡುವುದು ಬಹಳ ಸೂಕ್ತ. ಏಕೆಂದರೆ, ಹತ್ತು ಕೋಟಿರೂಪಾಯಿ ಖರ್ಚಾದರೂ ಅದರಿಂದ ಹೆಚ್ಚಿನ ಫಲದೊರಕುತ್ತದೆ. ನ್ಯಾಯವಾಗಿ ಪರಿಶೀಲನೆ ಮಾಡಿ, ಸರ್ಕಾರ ಯಾವ ವ್ಯಕ್ತಿಗಳ ಪ್ರಭಾವಕ್ಕೂ ಒಳಗಾಗದೆ ದೇಶದ ಹಿತದೃಷ್ಟಿಯಿಂದ ಕೆಲಸಮಾಡಬೇಕೆಂದು ಸಂಬಂಧ ಪಟ್ಟಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ಈ ಒಂದು ಯೋಜನೆಯಿಂದ ನಮ್ಮ ಒಂದು ತಾಲ್ಲೂಕಿನಲ್ಲಿ, ಅದರಲ್ಲಿಯೂ ಹಳ್ಳಿಮೈಸೂರು ಹೋಬಳಿಗೆ ಅಪಾರ ಉಪಕಾರ ವಾಗುತ್ತದೆ. ಅಲ್ಲಿನ ಜನ ಕ್ಷಾಮದ ಹಾವಳಿಗೆ ಸಿಕ್ಕಿ ನರಳುತ್ತಿದ್ದಾರೆ. ಈ ವಿಷಯವನ್ನು ಮಾನ್ಯ ರೆವಿನ್ಯೂ ಸಚಿವರಾಗಿದ್ದ

ಶ್ರೀ ಕಡಿದಾಳ್ ಮಂಜಪ್ಪನವರಲ್ಲಿ ಬಂದು ಅಲ್ಲಿನ ತಾಲ್ಲೂಕು ಬೋರ್ಡ್ ಅಧ್ಯಕ್ಷರೂ ಇತರ ಮುಖಂಡರೂ ಬಂದು ನಿವೇದನೆ ಮಾಡಿಕೊಂಡಿದ್ದಾರೆ. ಹಾರಂಗಿ ಯೋಜನೆಯಿಂದ ಆ ಪ್ರದೇಶದ ಹತ್ತು ಸಾವಿರ ಎಕರೆ ಖುಶ್ಕಿ ಜಮೀನು ತರಿಯಾಗುತ್ತದೆ. ಆದುದರಿಂದ, ಇದರಬಗ್ಗೆ ಏನೇ ಭಿನ್ನಾಭಿಪ್ರಾಯವಿದ್ದರೂ ಅದನ್ನು ಬಗೆಹರಿಸಿ, ಕ್ಷಾಮ ನಿವಾರಣೆಯ ದೃಷ್ಟಿಯಿಂದ ಈ ಯೋಜನೆಯನ್ನು ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕಾರ್ಯಗತ ಮಾಡಲು ಸರ್ವಪ್ರಯತ್ನ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಹಾಸನ—ಮಂಗಳೂರು ರೈಲ್ವೆ ವಿಷಯವನ್ನು ಅನೇಕ ಸದಸ್ಯರು ಈಗಾಗಲೇ ಹೇಳಿದ್ದಾರೆ. ಹೋದ ಸಾರಿ ರಾಜ್ಯಪಾಲರ ಭಾಷಣದಲ್ಲಿ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ಆದರೆ ಈ ಸಾರಿ ಏಕೆಕೈಬಿಟ್ಟಿದ್ದಾರೋ ಗೊತ್ತಿಲ್ಲ. ಹಾಸನ-ಮಂಗಳೂರು ರೈಲ್ವೆ ಮಾರ್ಗ ಬಹು ಮುಖ್ಯವಾದುದು. ಈ ಸಾರಿ ಕೇಂದ್ರ ರೈಲ್ವೆ ಮಂತ್ರಿಗಳೂ ಇದರ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಇದನ್ನು ಶೀಘ್ರವಾಗಿ ಪ್ರಾರಂಭಿಸುವುದಕ್ಕೆ ಈ ಸಭೆ ಕೇಂದ್ರಸರ್ಕಾರದಲ್ಲಿ ಪ್ರಭಾವ ಬೀರಬೇಕೆಂದುಪ್ರಾರ್ಥಿಸುತ್ತೇನೆ. ಮಂಗಳೂರಿನಿಂದ ಹಾಸನಕ್ಕೆ ಹಾಕಿದರೆ ಸಾಲದು, ಹಾಸನದಿಂದ ಬೆಂಗಳೂರಿಗೆ ಕುಣಿಗಲ್ಲು ಮಾರ್ಗವಾಗಿ ರೈಲ್ವೆ ಲೈನಲ್ಲಿ ಹಾಕುವುದು ಸೂಕ್ತ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು, ಪ್ರಾಂತ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಹೆಚ್ಚು ಪ್ರಭಾವ ಬೀರಬೇಕೆಂದು ಪ್ರಾರ್ಥಿಸುತ್ತೇನೆ.

ಆಡಳಿತಪಕ್ಷ ಒಂದು ಸರಿಯಾದ ನೀತಿಯನ್ನನುಸರಿಸಿದರೆ ಬಹಳ ಉತ್ತಮವಾಗುತ್ತದೆ. ಅದು ಮಾಡತಕ್ಕ ಆರ್ಡರುಗಳು ಬಹಳ ವಿಚಿತ್ರವಾಗಿವೆ. ಒಂದು ನಿದರ್ಶನವನ್ನು ಗಮನಕ್ಕೆ ತರಲಿಚ್ಛಿಸುತ್ತೇನೆ. ರೂರಲ್ ಹೌಸಿಂಗ್‌ನಲ್ಲಿ ಸರ್ಕಾರದ ಒಂದು ಪೈಲಟ್ ಸ್ಕೀಂ ಇದೆ. ವರ್ಷಕ್ಕೆ ಒಂದು ತಾಲ್ಲೂಕಿನಲ್ಲಿ 2-3 ಗ್ರಾಮಗಳನ್ನು ಆರಿಸಿಕೊಳ್ಳುತ್ತಾರೆ. ಹಿಂದಿನ ವರ್ಷದ ಉದಾಹರಣೆಯನ್ನು ಹೇಳುವುದಾದರೆ 1961-62ರಲ್ಲಿ ರೂರಲ್ ಹೌಸಿಂಗಿಗೆ ಮಂಜೂರು ಮಾಡಿದ್ದ ಹಣದಲ್ಲಿ ಅರ್ಧಕೂಡ ಖರ್ಚಾಗಿಲ್ಲ. ಕೆಲಸವನ್ನು ಅರ್ಧಕ್ಕೇನಿಲ್ಲಿಸಿದ್ದಾರೆ, ಹಣ ಕೊಟ್ಟಿಲ್ಲ ಹೊಸದಾಗಿ ಮಂಜೂರಾಗಿರುವ ಗ್ರಾಮಕ್ಕೆ ಏಕೆ ಹಣ ಒದಗಿಸಿಲ್ಲವೋ ಗೊತ್ತಾಗಿಲ್ಲ. ಸಂಬಂಧಪಟ್ಟವರು ಸಕಾಲದಲ್ಲಿ ಸೂಕ್ತ ಕ್ರಮವನ್ನು ಕೈಕೊಳ್ಳದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ. ಅದನ್ನು ಬಿಟ್ಟು ಬೇರೆಯವರಿಗೆ ತೊಂದರೆ ಮಾಡಿರುವುದು ನಿಜವಾಗಿಯೂ ಯೋಗ್ಯವಲ್ಲ, ಇದಕ್ಕೆ ಅವಕಾಶವಿರಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ.

ಅನೇಕರು ಶಾಲಾ ಕಟ್ಟಡದ ವಿಷಯವನ್ನು ಹೇಳಿದ್ದಾರೆ. ಈ ವಿಚಾರ ಬಹಳ ವ್ಯಥೆಯನ್ನುಂಟುಮಾಡಿದೆ. ಮೂರನೆಯ ಯೋಜನೆಯಲ್ಲಿ ವಿದ್ಯಾಭ್ಯಾಸಕ್ಕಾಗಿ ಸುಮಾರು 5ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಇಷ್ಟು ಹೇಳಬೇಕಾಗಿದೆ ಯಾವುದಕ್ಕೆ ಎಷ್ಟು ಹಣ ಕಡಮೆಯಾದರೂ ಚಿಂತೆಯಿಲ್ಲ, ವಿದ್ಯಾಭ್ಯಾಸದ ಬಾಬಿಗೆ ಸಾಕಷ್ಟು ಹಣ ಒದಗಿಸಲೇಬೇಕು. ಹಳ್ಳಿಗಳಲ್ಲಿ ಶಾಲಾ ಕಟ್ಟಡ ಕಟ್ಟುವುದು ಒಂದು ಸಣ್ಣ ಕೆಲಸ ಮೂರು ಸಾವಿರ ರೂಪಾಯಿಗಳಲ್ಲಿ ಕಟ್ಟಡ ಕಟ್ಟಿಸುವುದು ಅಷ್ಟೇನೂ ದೊಡ್ಡದಲ್ಲ, ಕೋಟಿ ಗಟ್ಟಲೆ ಹಣ ಅನೇಕ ಬಾಬುಗಳಿಗೆ ವ್ಯಯವಾಗುತ್ತಿದೆ. ಸುಮಾರು ಹತ್ತು ವರ್ಷಗಳಲ್ಲಿ ಶಾಲಾ ಕಟ್ಟಡಗಳ ವಿಷಯದಲ್ಲಿ ಅನೇಕ ಆರ್ಡರುಗಳನ್ನು ಮಾಡಿದ್ದಾರೆ. ಮೊದಲು ಒಂದು ಸಾವಿರ ರೂಪಾಯಿಗಳನ್ನು ಗ್ರಾಮಸ್ಥರು ಕೊಟ್ಟರೆ ಉಳಿದ ಹಣವನ್ನು ಸರ್ಕಾರ ವಹಿಸಿಕೊಳ್ಳುತ್ತಿತ್ತು, ಶೇಕಡ 60 ಮತ್ತು ಶೇಕಡ 40 ಭಾಗ ಎಂದು ಮಾಡಿದ್ದರು. ಇದನ್ನೇಕೆ ಬದಲಾಯಿಸಿದರೋ ಅರ್ಥವಾಗುವುದಿಲ್ಲ. ಇದಕ್ಕಾಗಿ ಗ್ರಾಮ ಪಂಚಾಯಿತಿ ಕಂದಾಯ ಹೆಚ್ಚಿಸಬೇಕೆನ್ನುತ್ತಾರೆ. ಶಾಲಾಕಟ್ಟಡ ಕಟ್ಟಬೇಕಾದರೆ ಶೇಕಡ 30ಭಾಗ ಸರ್ಕಾರ ಕೊಡುತ್ತದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ರೈತರ ಶೋಷಣೆಗೆ ಸ್ವಲ್ಪ ಮಿತಿಯಿರಬೇಕು. ಸರ್ಕಾರ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಂಡು ಅದನ್ನು ತಾಲ್ಲೂಕುಬೋರ್ಡು ಮತ್ತು ಪಂಚಾಯಿತಿಮೇಲೆ ಹಾಕುವುದು ಸರಿಯಲ್ಲ.

ಮೀಡಿಯಂ ಇರಿಗೇಷನ್ ಮತ್ತು ಮೇಜರ್ ಇರಿಗೇಷನ್ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವಿದೆ, ಮೈನರ್ ಇರಿಗೇಷನ್ ವಿಚಾರವಿಲ್ಲ. 50ಎಕರೆಗಳೊಳಗಿರುವ ನೀರಾವರಿ ವಿಚಾರವನ್ನು ತಾಲ್ಲೂಕ್ ಬೋರ್ಡಿಗೆ ವಹಿಸುವವರಾಗಿದ್ದಾರೆ. ಹಿಂದೆ ರೈತರೇ ಇದಕ್ಕೆ ಅರ್ಜಿಹಾಕಿದರೆ ಮೇಲಕ್ಕೆ ಕಳುಹಿಸುತ್ತಿದ್ದರು. ತಾಲ್ಲೂಕು ಬೋರ್ಡಿನಲ್ಲಿ ಹಣವಿಲ್ಲವೆಂದು ಹೇಳುವಾಗ ಅದಕ್ಕೇಕೆ ಇದನ್ನು ವಹಿಸುತ್ತಾರೋ ಅರ್ಥವಾಗುತ್ತಿಲ್ಲ.

ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಇರುವ ಲೀಕೇಜ್ ತಪ್ಪಿಸದಿದ್ದರೆ ಇಲಾಖೆ ದಿವಾಳಿಯಾಗುತ್ತದೆ. ಪ್ರಯಾಣಿಕರಿಗೆ ತೊಂದರೆಯಿದೆ, ರೈಲ್ವೆ ಇಲಾಖೆಯಲ್ಲಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುವುದು ಅಪರಾಧವೆಂದು ಕಾನೂನು ಮಾಡಿರುವಂತೆ ಸಾರಿಗೆ ಇಲಾಖೆಯವರೂ ಮಾಡುವುದು ಸೂಕ್ತ ಎಂದು ಸಲಹೆಮಾಡಿ ಇಷ್ಟು ಹೇಳಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಸಭಾಧ್ಯಕ್ಷರೆ, ಈ ದಿನ ರಾಜ್ಯಪಾಲರು ಉಭಯ ಸದನಗಳ ಮುಂದೆ ಅಪ್ಪಣೆ ಕೊಡಿಸಿರುವ ಅವರ ಭಾಷಣಕ್ಕೆ ಈ ಸಭೆ ವಂದನೆ ಸಲ್ಲಿಸುವ ಈ ನಿರ್ಣಯವನ್ನು ನಾನು ಪುಷ್ಟೀಕರಿಸುತ್ತಾ ಒಂದೆರಡು ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕೆಂದು ನಿಂತಿದ್ದೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸರ್ಕಾರ ಮಾಡುತ್ತಿರುವ ಕೆಲಸಗಳ ಒಂದು ಹಕ್ಕಿ ನೋಟವನ್ನು ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ದೇಶದಲ್ಲಿ ನಡೆಯುವ ನಾನಾ ಅಭಿವೃದ್ಧಿ ಕಾರ್ಯಗಳ ಕಡೆಗೆ ಈ ಸಭೆಯ ಗಮನವನ್ನು ಅವರ ಭಾಷಣದಲ್ಲಿ ಸೆಳೆದಿದ್ದಾರೆ. ದೇಶದಲ್ಲಿ ನಾನಾ ಮೂಲೆಗಳಲ್ಲಿ ಪಂಚವಾರ್ಷಿಕ ಯೋಜನೆಯ ಕೆಲಸಗಳಾಗುತ್ತಿವೆ. ಬಹಳ ಮುಖ್ಯವಾಗಿ ನಮ್ಮ ಗಮನವನ್ನು ಎರಡು ಮೂರು ವಿಷಯಗಳ ಕಡೆ ಸೆಳೆದಿದ್ದಾರೆ. ಮೂರನೆಯ ಯೋಜನೆಯಿಂದ ಸುಮಾರು 24 ಲಕ್ಷ ಎಕರೆಗಳು ಹೊಸದಾಗಿ ನೀರಾವರಿಯಾಗುತ್ತವೆ, ವಿದ್ಯುಚ್ಛಕ್ತಿಗಾಗಿ ಮೂರು ಯೂನಿಟ್ಟುಗಳನ್ನು ಪ್ರಾರಂಭಿಸಿ ಸುಮಾರು ಎರಡು ಲಕ್ಷ ಚಿಲ್ಲರೆ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಬಹಳ ಮುಖ್ಯವಾಗಿ ಕೆಲವರು ಹೇಳಿದಂತೆ ಬೆಂಗಳೂರಿಗೆ ನೀರು ಸರಬರಾಯಿ ಮತ್ತು ಹಾಲು ಸರಬರಾಯಿಗಳಿಗಾಗಿ ಯೋಜನೆ ಮಾಡಿದೆ ಎಂದು ಹೀಗೆ ನಾನಾ ಯೋಜನೆಗಳ ವಿಚಾರವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. 24ನೆಯ ಪ್ಯಾರಾದಲ್ಲಿ ನದಿ ನೀರಿನ ವಿವಾದದ ವಿಚಾರವಿದೆ. "My Government have sent a formal

(ಶ್ರೀ ಎಂ. ಸಿ. ಬಸಪ್ಪ)

application to the Government of India..." ಎಂದು ತಿಳಿಸಿದ್ದಾರೆ. ಹಕ್ಕಿನ ವಿಚಾರದಲ್ಲಿ ಫಾರ್ಮ್ಯಾಲಿಟೀಸ್ ಮೇಲೆ ನಿಲ್ಲದೆ ನಿಜವಾಗಿಯೂ ನಮಗೆ ಸಲ್ಲಬೇಕಾದ ಹಕ್ಕನ್ನು ಹೊಡೆದಾಡಿ ತೆಗೆದುಕೊಳ್ಳಬಹುದು. ಆದುದರಿಂದ 'formal' ಎಂಬ ಪದ ಬಿಟ್ಟಿದ್ದರೆ ಚೆನ್ನಾಗಿತ್ತು ಎನಿಸುತ್ತದೆ. ಈ ವಿಚಾರ ಅನೇಕ ಸಾರಿ ಇಲ್ಲಿ ಚರ್ಚೆಯಾಗಿದೆ. ಹಿಂದೆ ಸಂಬಂಧಪಟ್ಟ ಮಂತ್ರಿಗಳು ನಾಲ್ಕಾರು ಬಾರಿ ಕೇಂದ್ರ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿದ್ದಾರೆಂಬುದನ್ನು ಪತ್ರಿಕೆಗಳಲ್ಲಿ ನೋಡಿದ್ದೇವೆ. ಆದುದರಿಂದ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವ ಹಾಗೆ ಫಾರ್ಮಲ್ ಅಪ್ಲಿಕೇಷನ್ ಹಾಕಿ ಕೊಡುವರೇ, ಬಿಡುವರೇ ಎಂದು ಯೋಚನೆಮಾಡುವುದಕ್ಕಿಂತ ಬಹುಶಃ ಈ ವಿಚಾರದಲ್ಲಿ ಸಾಕಾದಷ್ಟು ಅಂಕಿ ಅಂಶಗಳನ್ನೊದಗಿಸಿ ಈ ಹಕ್ಕನ್ನು ಕಾಪಾಡಿಕೊಳ್ಳುವುದಕ್ಕೆ ಸರ್ಕಾರ ತಕ್ಕ ಏರ್ಪಾಡು ಮಾಡುತ್ತದೆ ಎಂದು ನಂಬಿ ತಮ್ಮ ಮೂಲಕ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಎರಡನೆಯದು ಸೋಷಿಯಲ್ ವೆಲ್‌ಫೇರ್ ಸ್ಕೀಂ ವಿಚಾರ. ರಾಜ್ಯಪಾಲರ ಭಾಷಣದ 7ನೆಯ ಪ್ಯಾರಾದಲ್ಲಿ ಅನುಸೂಚಿತ ಜಾತಿಗಳ ಮತ್ತು ಇತರ ಹಿಂದುಳಿದ ತರಗತಿಗಳ ಕಲ್ಯಾಣಕ್ಕಾಗಿ ಸರ್ಕಾರದವರು ವಿಶೇಷ ಗಮನ ಕೊಡುತ್ತಿದ್ದಾರೆಂದು ಹೇಳಿದ್ದಾರೆ. ನನಗೆ ಕಂಡಂತೆ ಇದರಲ್ಲಿ ಕೆಲವು ಅಂಶಗಳನ್ನು ಬಿಟ್ಟಿದ್ದಾರೆ. ಅದು ಏನೆಂದರೆ ಈಗ ಸರ್ಕಾರದ ಕೆಲವು ನೀತಿಗಳು ಬದಲಾವಣೆಯಾಗಿವೆ. ಹಿಂದೆ ಸರ್ಕಾರದವರು ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಒಂದು ಯೋಜನೆಯನ್ನು ಹಾಕಿಕೊಂಡು ಹಣವನ್ನು ಅವರಿಗೆ ಗ್ರಾಂಟು ರೂಪವಾಗಿ ಕೊಡುತ್ತಿದ್ದರು. ಹಿಂದಿನ ಮಂತ್ರಿಮಂಡಲದಲ್ಲಿ ಹರಿಜನ ಮಂತ್ರಿಗಳಾಗಿದ್ದ ಶ್ರೀ ರಾಚಯ್ಯನವರು ಪ್ರವಾಸ ಬಂದಿದ್ದಾಗ ಇನ್ನು ಮುಂದೆ ಹರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಗ್ರಾಂಟು ಕೊಡುವುದನ್ನು ನಿಲ್ಲಿಸಿ ಹರಿಜನರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತೇವೆ, ಆದರೆ ಮನೆ ಕಟ್ಟಿಕೊಳ್ಳುವುದಕ್ಕೆ ಕೊಡತಕ್ಕ ಹಣವನ್ನು ಸಂಪೂರ್ಣವಾಗಿ ನಿಲ್ಲಿಸುವುದಿಲ್ಲ. ಸಾಲದ ರೂಪದಲ್ಲಿ ಕೊಡುತ್ತೇವೆ. ಕಡಮೆ ಬಡ್ಡಿ ಪ್ರಕಾರ 25 ವರ್ಷಗಳಲ್ಲಿ ಅವರು ಸಾಲ ತೆಗೆದುಕೊಂಡ ಹಣವನ್ನು ಸರ್ಕಾರಕ್ಕೆ ವಾಪಸ್ಸು ಕೊಡಬೇಕು, ಆ ರೀತಿ ಒಂದು ಸ್ಕೀಮನ್ನು ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದು ನನ್ನ ಗಮನಕ್ಕೆ ಬಂದಿದೆ. ಆ ರೀತಿ ಸರ್ಕಾರದ ಪಾಲಸಿ ಬದಲಾವಣೆಯಾದ ವಿಚಾರವಾಗಿ ಒಂದೆರಡು ವಾಕ್ಯಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಬೇಕಾಗಿತ್ತು. ಸರ್ಕಾರದವರು ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಗ್ರಾಂಟ್ ಕೊಡುತ್ತೇವೆ, ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿ ಇವೊತ್ತು ಅವರಿಗೆ ಯಾವ ವಿಧವಾದ ಸಹಾಯವೂ ದೊರೆಯುತ್ತಿಲ್ಲ. ಈ ವಿಚಾರದಲ್ಲಿ ನನಗೆ ಅನುಮಾನ ಕಾಣುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ರಾಜ್ಯಪಾಲರ ಭಾಷಣದ ಚರ್ಚೆಯ ಮೇಲೆ ಉತ್ತರ ಕೊಡುವಾಗ ಈ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವೆಲ್ ಇರಿಗೇಷನ್ ವಿಷಯ. ನೀರಾವರಿ ಬಾವಿಗಳಿಗೆ ಸರ್ಕಾರದವರು ಕೊಡತಕ್ಕಂಥ ಸಹಾಯದ ವಿಚಾರದಲ್ಲಿ ನಾನಾ ಸಲಹೆಗಳನ್ನು ಕೊಟ್ಟಿದ್ದಾರೆ. ನೀರಾವರಿ ಬಾವಿಗಳಿಗೆ ಸರ್ಕಾರದ ಸಹಾಯವನ್ನು ಕೊಡತಕ್ಕಂಥ ವಿಚಾರದಲ್ಲಿ ನಮ್ಮ ಅಧಿಕಾರಿಗಳಿಗೆ ಕಾನೂನು ಪ್ರಕಾರ ಬಹಳ ನಿರ್ಬಂಧವಿದೆಯೋ ಏನೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ನನ್ನ ಅನುಭವದಲ್ಲಿರುವ ಹಾಗೆ ಅವರು ಹಣವನ್ನು ಕೊಡುವುದಕ್ಕಿಂತ ಮೊದಲೇ ಅನೇಕ ಕಂಡೀಷನ್‌ಗಳನ್ನು ಕಾನೂನು ಪ್ರಕಾರ ಹಾಕುತ್ತಾರೆ. ಇದರಿಂದ ಉತ್ಸಾಹವಿರುವ ಜನಗಳಿಗೆ ಸಾಕಷ್ಟು ರೀತಿಯಲ್ಲಿ ಸಹಾಯ ದೊರೆಯುವುದಿಲ್ಲ. ಅನೇಕ ಜನಗಳಿಗೆ ಸರ್ಕಾರದವರು ನೀರಾವರಿ ಬಾವಿಗೋಸ್ಕರ ಹಣವನ್ನು ಕೊಟ್ಟಿರುವುದನ್ನು ನೋಡುವುದಾದರೆ ಅನೇಕ ಬಾವಿಗಳು ಇನ್ನೂ ಪೂರ್ತಿಯಾಗಿಲ್ಲ. ಇನ್ನು ಕೆಲವರು 3ನೇ ಇನ್‌ಸ್ಟಾಲ್‌ಮೆಂಟ್ ತೆಗೆದುಕೊಂಡಿಲ್ಲ. ಮತ್ತೆ ಕೆಲವರು ಬಾವಿ ಕೆಲಸ ಪೂರ್ತಿ ಆಗದೆ ವ್ಯವಸಾಯವನ್ನು ಪ್ರಾರಂಭ ಮಾಡಿಲ್ಲ. ಅಧಿಕಾರಿಗಳು ಹಣವನ್ನು ಕೊಡುವಾಗ ಜನಗಳಿಗೆ ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ. ಅವರಿಗೆ ಎರಡನೇ ಇನ್‌ಸ್ಟಾಲ್‌ಮೆಂಟನ್ನು ಸಕಾಲದಲ್ಲಿ ಕೊಡದೆ ಇರುವುದರಿಂದ ಅವರು ಪ್ರಾರಂಭಮಾಡಿದ ಬಾವಿಯ ಕೆಲಸವನ್ನು ನಿರ್ದಿಷ್ಟವಾದ ಕಾಲದಲ್ಲಿ ಪೂರ್ತಿ ಮಾಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಈ ಯೋಜನೆಯ ಉಪಯೋಗವನ್ನು ಜನಗಳು ಸರಿಯಾದ ರೀತಿಯಲ್ಲಿ ಹೊಂದಲಿ ಮತ್ತು ಇದರಿಂದ ಹೆಚ್ಚಿನ ಜನಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ತಂದಿದ್ದರೂ ಸಹ ಇದು ಸರಿಯಾಗಿ ಕಾರ್ಯಗತವಾಗಿಲ್ಲ. ಹಣವನ್ನು ಮಂಜೂರು ಮಾಡುವಾಗ ಅಧಿಕಾರಿಗಳು ರೈತರಿಗೆ ತೊಂದರೆಯನ್ನು ಕೊಡುತ್ತಿದ್ದಾರೆ. ಮತ್ತು ಬಾವಿ ತೆಗೆಸುವುದಕ್ಕೆ ಸರ್ಕಾರದಿಂದ ಹಣವನ್ನು ಸಾಲ ತೆಗೆದುಕೊಂಡು ಅದರ ಉಪಯೋಗವನ್ನು ಪಡೆದುಕೊಂಡು ಸರ್ಕಾರಕ್ಕೆ ಹಣವನ್ನು ವಾಪಸ್ಸು ಕೊಡದಿದ್ದರೆ ಕಾನೂನು ರೀತ್ಯಾ ಅತನಿಂದ ಹಣವನ್ನು ವಸೂಲು ಮಾಡದಿದ್ದರೆ ಇನ್ನೊಬ್ಬರಿಗೆ ಅದರ ಅನುಕೂಲ ದೊರೆಯುವುದಿಲ್ಲ. ಇದನ್ನೂ ಸಹ ಅಧಿಕಾರಿಗಳು ಯೋಚನೆ ಮಾಡಬೇಕು. ಒಟ್ಟಿನಲ್ಲಿ ಅಧಿಕಾರಿಗಳು ಕಾನೂನು ಪಾಲನೆ ಮಾಡುವ ವಿಷಯದಲ್ಲಿ ನನಗೆ ಶಂಕೆ ಇದೆ. ಇದನ್ನು ಸರ್ಕಾರದವರು ಪರ್ಯಾಲೋಚನೆ ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಪಂಚಾಯಿತಿ ರಾಜ್ಯದ ವಿಷಯದಲ್ಲಿ ಹೇಳುವುದಾದರೆ, ರಾಜ್ಯಪಾಲರ ಭಾಷಣದಲ್ಲಿ ಹೇಳಿದ ಹಾಗೆ 30 ಯೋಜನೆಗಳು ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳ ಮುಖಾಂತರ ಕೆಲಸ ಮಾಡುತ್ತಿವೆ. ಈ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕಾನೂನನ್ನು ಸುಲಭವಾಗಿ ಜಾರಿಗೆ ತರುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಹಣದ ಅಭಾವ ಇದೆ. ಅದನ್ನು ಆದಷ್ಟು ಸರ್ಕಾರದವರು ಪರಿಹಾರ ಮಾಡಿದ್ದಾರೆ. ದೇಶದ ಅಭಿವೃದ್ಧಿ ಕಾರ್ಯಗಳಿಗಾಗಿ ಸರ್ಕಾರದವರು ನೇರವಾಗಿ ಯಾವ ಹಣವನ್ನು ಖರ್ಚು ಮಾಡುತ್ತಿದ್ದಾರೋ ಅಷ್ಟನ್ನೂ ಕೂಡ ತಾಲ್ಲೂಕು ಬೋರ್ಡುಗಳ ಮತ್ತು ಪಂಚಾಯಿತಿಗಳ ವ್ಯಾಪ್ತಿಗೆ ಕೊಡುವುದರ ಮುಖಾಂತರ ಅಭಿವೃದ್ಧಿ ಯೋಜನೆಗಳನ್ನು ನಿರ್ಮಾಣ ಮಾಡಿ, ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯಿತಿಗಳು ದೇಶದ ಅಭಿವೃದ್ಧಿಗಾಗಿ ಕೆಲಸ ಮಾಡುವುದಕ್ಕೆ ಸಾಧಕವಾಗಬೇಕು. ಮತ್ತು ಇದಕ್ಕಾಗಿ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸುವ

ವ್ಯವಸ್ಥೆಯನ್ನು ಮಾಡಬೇಕು ಎಂದು ನಾನು ಅಧ್ಯಕ್ಷರ ಮುಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ.

ಆ ಮೇಲೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ವಿಷಯ. ರಾಜ್ಯಪಾಲರ ಭಾಷಣ 27ನೆಯ ಪ್ಯಾರಾದಲ್ಲಿ ಸುಮಾರು 70,000 ಎಕರೆಗಳಷ್ಟು ಭೂಮಿಯನ್ನು ಅಫಾರೆಸ್ಟೇಷನ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರಲ್ಲಿ ನನಗೆ ಸ್ವಲ್ಪ ಶಂಕೆ ಬಂದಿದೆ. ಫಾರೆಸ್ಟ್ ವಿಚಾರದಲ್ಲಿ ಸರ್ಕಾರದವರು ಅನುಸರಿಸತಕ್ಕ ನೀತಿ ಸರಿಯಾದ ಕ್ರಮದಲ್ಲಿಲ್ಲ. ಕಾಡು ನಮ್ಮ ದೇಶದ ಸಂಪತ್ತು. ಈಗ ನಮ್ಮ ದೇಶದ ಕಾಡು ಹಾಳಾಗುತ್ತಿದೆ; ಅದನ್ನು ಕಾಪಾಡಬೇಕು ಎಂದು ಮಂತ್ರಿಗಳು ಹೇಳಿದ್ದನ್ನು ನಾನು ಕೇಳಿದ್ದೇನೆ. ಆದರೆ ಈಗ ಸರ್ಕಾರದವರು ಈ ಬಗ್ಗೆ ಅನುಸರಿಸತಕ್ಕ ನೀತಿಯನ್ನು ನೋಡುವುದಾದರೆ ನಿಜವಾಗಿಯೂ ಕೂಡ ಈಗಿನ ರೂಲ್ಸ್ ಪ್ರಕಾರ ಕಾಡನ್ನು ಅಭಿವೃದ್ಧಿ ಮಾಡಬೇಕಾದ್ದು ಮತ್ತು ಕಾಪಾಡಬೇಕಾದ್ದು ಇಲ್ಲವೋ ಏನೋ ಎನಿಸುತ್ತದೆ. ಸಾಮಾನ್ಯವಾಗಿ ಒಂದು ಸೌದೆಯನ್ನು ಕಾಡಿನಿಂದ ತರಬೇಕಾದರೆ ಒಣ ಸೌದೆಯನ್ನು ತರಬಹುದು ಎಂದು ಒಂದು ರೂಲ್ಸ್ ಇದೆ. ಹಸಿ ಸೌದೆಯನ್ನು ತರಕೂಡದು ಎಂದು ರಿಸ್ಟ್ರಿಕ್ಷನ್ ಇತ್ತು. ಈಗ ಏನು ಮಾಡುತ್ತಾರೆಂದರೆ ಹಸಿಯ ಸೌದೆಯನ್ನು ಮತ್ತು ಮರವನ್ನು ಕಡಿದು, ಅದು ಒಣಗಿದ ಮೇಲೆ, ಒಣ ಸೌದೆಯೆಂದು ಕಾನೂನು ಪ್ರಕಾರ ತರುತ್ತಿದ್ದಾರೆ. ಈ ರೀತಿ ಮಾಡುವುದರಿಂದ ಇರುವ ಕಾಡನ್ನು ಹಾಳು ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅಫಾರೆಸ್ಟೇಷನ್ನಿಗೆ ಯೋಜನೆಯನ್ನು ಅಳವಡಿಸಿಕೊಂಡು ಕಾಡನ್ನು ಬೆಳೆಸುವುದಕ್ಕೆ ಮತ್ತು ಬೆಳೆದದ್ದನ್ನು ಉಳಿಸುವುದಕ್ಕೆ ಸರ್ಕಾರದವರು ಕಾನೂನಿನಲ್ಲಿ ಅವಕಾಶವನ್ನು ಮಾಡಿಕೊಳ್ಳಬೇಕೆಂದು ನಾನು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಪ್ರೈಮರಿ ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ ನಿಜವಾಗಿಯೂ ದೇಶದಲ್ಲಿ ಅನಕ್ಷರತೆ ಹೋಗಬೇಕು. ದೇಶದಲ್ಲಿ ಎಲ್ಲರೂ ಕೂಡ ಅಕ್ಷರಸ್ಥರಾಗಬೇಕು, ವಿದ್ಯಾವಂತರಾಗಬೇಕು, ಎನ್ನುವಂಥಾ ಆಕಾಂಕ್ಷೆಯನ್ನು ಸರ್ಕಾರದವರು ಇಟ್ಟುಕೊಂಡು ಈ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ನಾವೆಲ್ಲರೂ ಹಿಂದೆ ಏನು ತಿಳಿದುಕೊಂಡಿದ್ದೆವು ಎಂದರೆ, ಕಂಪಲ್ಸರಿ ಎಜುಕೇಷನ್ನಿಗೆ ಸಂಬಂಧಪಟ್ಟ ಹಾಗೆ ಒಂದು ಯೋಜನೆ ಬರುತ್ತದೆ, ನಮಗೆ ಇರತಕ್ಕ ಎಲ್ಲಾ ತೊಂದರೆಗಳೂ ನಿವಾರಣೆಯಾಗುತ್ತವೆ. ನಮ್ಮ ಮಕ್ಕಳಿಗೆ ಕಂಪಲ್ಸರಿ ಎಜುಕೇಷನ್ ಸಿಕ್ಕುತ್ತದೆ ಎಂದುಕೊಂಡಿದ್ದೆವು. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಕಂಪಲ್ಸರಿ ಎಜುಕೇಷನ್ ಜಾರಿಗೆ ಬಂದಿದ್ದರೂ ಸಹ ಸ್ಕೂಲುಗಳು ಇಲ್ಲದೆ ಇರುವ ಹಳ್ಳಿಗಳಿವೆ. ಎಲ್ಲಾ ಸ್ಕೂಲುಗಳಿಗೂ ಕಂಪಲ್ಸರಿಯಾಗಿ ಬೇಕಾಗಿರುವ ಪುಸ್ತಕಗಳು ಮಕ್ಕಳಿಗೆ ಸಿಕ್ಕುತ್ತಿಲ್ಲ. ಕಂಪಲ್ಸರಿ ವಿದ್ಯಾಭ್ಯಾಸದಲ್ಲಿ ಯಾರು ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದಿಲ್ಲವೋ ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಕಂಪಲ್ಸರಿ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕಾದರೆ ಯಾವ ಹಳ್ಳಿಯಲ್ಲೇ ಆಗಲೀ ಶಾಲೆ ಇಲ್ಲದೆ ಇರಬೇಕಾದ್ದು ಮುಖ್ಯವಾದ ಅಂಶ. ಉದಾಹರಣೆಗೆ ನಮ್ಮ ತಾಲ್ಲೂಕನ್ನೇ ತೆಗೆದುಕೊಳ್ಳುವುದಾದರೆ ಅಲ್ಲಿ 5-6 ಶಾಲೆಗಳು ಇರಲಿಲ್ಲ. ಈ ವಿಷಯವನ್ನು ವಿದ್ಯಾಭ್ಯಾಸದ ಇಲಾಖೆಯವರ ಗಮನಕ್ಕೆ ತಂದಮೇಲೆ ಮುಂದಿನ ವರ್ಷದಿಂದ ನಮ್ಮ ತಾಲ್ಲೂಕಿನಲ್ಲಿ ಹೆಚ್ಚಿನ ಶಾಲೆಗಳನ್ನು ಸ್ಥಾಪನೆ ಮಾಡುತ್ತೇವೆಂದು ವಿದ್ಯಾಭ್ಯಾಸದ ಇಲಾಖೆಯವರು ನಮಗೆ ಒಂದು ಭರವಸೆಯನ್ನು ಕೊಟ್ಟಿದ್ದಾರೆ. ಕಂಪಲ್ಸರಿ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕಾದರೆ ದೇಶದಲ್ಲಿ ಯಾವ ಹಳ್ಳಿಯಲ್ಲೂ ಕೂಡ ಶಾಲೆ ಇಲ್ಲ ಎಂದು ಹೇಳದ ಹಾಗೆ ಮಾಡಲು ತೀರ್ಮಾನ ತೆಗೆದುಕೊಂಡು ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಶಾಲೆಯನ್ನು ಸ್ಥಾಪನೆಮಾಡಿ ನಂತರ ಕಂಪಲ್ಸರಿ ವಿದ್ಯಾಭ್ಯಾಸವನ್ನು ಜಾರಿಗೆತರುವುದು ಒಳ್ಳೆಯದು. ನಿಜವಾಗಿಯೂ ಕೂಡ ಕಾನೂನಿನಲ್ಲಿ ಅಂಥಾ ಸಾಧನೆಯನ್ನು ಮಾಡಬೇಕು ಎಂದು ಗುರಿಯನ್ನು ಇಟ್ಟುಕೊಂಡಿದ್ದರೆ ಅದನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಕೆಲವು ಸಲಹೆಗಳನ್ನು ಈ ಸಭೆಯ ಮುಖಾಂತರ ಸರ್ಕಾರಕ್ಕೆ ತಂದಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ, ನಮ್ಮ ನಾಡಿನ ಅಭಿವೃದ್ಧಿ ಕಾರ್ಯಗಳನ್ನು ಏನೇನು ಮಾಡುತ್ತೇವೆಂದು ಹೇಳಿದ್ದಾರೆಯೋ ಅವೆಲ್ಲವೂ ಕೂಡ ಸ್ತುತ್ಯರ್ಹವಾದದ್ದು. ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸಲು ಶ್ರೀ ಮಾನ್ ಗಾಂಜೀ ವೀರಪ್ಪನವರು ಈ ಸಭೆಯ ಮುಂದೆ ಮುಂಡಿಸಿರುವ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಟ್ಟು ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ನಂಜಪ್ಪ (ಕಬ್ಬನ್‌ಪೇಟೆ).—ಸ್ವಾಮಿ, ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ವಿಚಾರವಾಗಿ ನಾನು ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಮುಖ್ಯವಾಗಿ ಕಾರ್ಪೊರೇಷನ್ ವಿಚಾರವಾಗಿ ಕೆಲವು ಕುಂದು ಕೊರತೆಗಳನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ತಿಳಿಸಲು ಬಯಸುತ್ತೇನೆ. ಈಗ್ಗೆ ಸುಮಾರು 1955ನೇ ಇಸವಿಯಲ್ಲಿ ನಮ್ಮ ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಕೆಲವು ಅಮೆಂಡ್‌ಮೆಂಟ್‌ಗಳನ್ನು ಸರ್ಕಾರಕ್ಕೆ ಕಳುಹಿಸಿದ್ದೆವು. ಅದರಲ್ಲಿ ಕೆಲವು ಅಮೆಂಡ್‌ಮೆಂಟ್‌ಗಳನ್ನು ಮಾತ್ರ ತೆಗೆದುಕೊಂಡಿದ್ದಾರೆ. ಬಾಕಿ ಅಮೆಂಡ್ ಮೆಂಟ್‌ಗಳನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಅದರಿಂದ ಕಾರ್ಪೊರೇಷನ್ನಿಗೆ ಬಹಳ ತೊಂದರೆಯಾಗುತ್ತಿದೆ. ಕಾರ್ಪೊರೇಷನ್ನಿನವರು ಕಳುಹಿಸಿರುವ ಕೆಲವು ಅಮೆಂಡ್‌ಮೆಂಟ್‌ಗಳಿಗೆ ಸರ್ಕಾರದವರ ಅನುಮತಿ ದೊರೆಯದೆ ಇರುವುದರಿಂದ ಆ ಬಗ್ಗೆ ಕಾರ್ಪೊರೇಷನ್ನಿನವರು ಆಕ್ಷನ್ ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಕಾರ್ಪೊರೇಷನ್‌ನವರು ಕಳುಹಿಸಿರತಕ್ಕ ಅಮೆಂಡ್‌ಮೆಂಟ್‌ಗಳ ಬಗ್ಗೆ ಸರ್ಕಾರದ ಅನುಮತಿ ದೊರೆಯದೆ ಇರುವ ಅಮೆಂಡ್‌ಮೆಂಟ್‌ಗಳಿಗೆ ಆದಷ್ಟು ಜಾಗ್ರತೆ ಸರ್ಕಾರದ ಅನುಮತಿ ದೊರೆಯುವಂತೆ ಮಾಡಬೇಕೆಂದು ನನ್ನ ಮುಖ್ಯ ಕೋರಿಕೆ.

ಎರಡನೆಯದಾಗಿ ವಾಟರ್ ಸಪ್ಲೈ ವಿಚಾರ. ಬೆಂಗಳೂರು ಸಿಟಿಗೆ ನೀರು ಸರಬರಾಜುಮಾಡುವುದು ಬಹಳ ತೊಂದರೆಯಾಗುತ್ತಿದೆ. ಸರ್ಕಾರದವರು ಈ ಬಗ್ಗೆ ಇಂಟರೆಸ್ಟ್‌ತೆಗೆದುಕೊಂಡು ವಿಮರ್ಶೆ ಮಾಡುತ್ತೇವೆಂದು ಹೇಳಿದ್ದಾರೆ. ನಾಲ್ಕು ಲಕ್ಷ ರೂಪಾಯಿಗಳನ್ನು ಆ ಸ್ಕೀಮ್ ಇನ್ವೆಸ್ಟಿಗೇಷನ್ ಬಗ್ಗೆ ಇಟ್ಟಿದ್ದಾರೆ. ಟ್ರಿಪ್ಲಿಕೇಟ್ ಮೈನ್ ಹಾಕುವ ವಿಷಯದ ಪರ್ಯಾಲೋಚನೆ ಈಗ್ಗೆ ನಾಲ್ಕೈದು ವರ್ಷಗಳ ಕೆಳಗೆ ಪ್ರಾರಂಭ ಮಾಡಿದರು. ಆದರೆ ಆ ಯೋಜನೆಯನ್ನು ಇನ್ನೂ ಕಾರ್ಯಗತ ಮಾಡಿಲ್ಲ. ಪಂಪು ಸೆಟ್ಟುಗಳಿಗೆ ಇದುವರೆವಿಗೂ ಆರ್ಡರ್‌ಮಾಡಿಲ್ಲ. ಆ ಪಂಪು ಸೆಟ್ಟುಗಳು ಬರಬೇಕಾದರೆ ಇನ್ನೂ ಎರಡು

(ಶ್ರೀ ಬಿ. ನಂಜಪ್ಪ)

ವರ್ಷಗಳಾಗುತ್ತವೆ. ಈಗ ಬೆಂಗಳೂರಿನ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಸರ್ಕಾರದವರು ಈ ಯೋಜನೆಯನ್ನು ಜಾಗ್ರತೆಯಾಗಿ ಪೂರೈಸುವಂತೆ ಕ್ರಮ ತೆಗೆದುಕೊಳ್ಳಬೇಕು.

5 P.M.

ಮೂರನೆಯದಾಗಿ, Vehicle Tax ವಿಚಾರದಲ್ಲಿ ನಾವು ಕಾರ್ಪೊರೇಷನ್ನಿನಿಂದ ಅನೇಕ ಸಾರಿ ಸರ್ಕಾರಕ್ಕೆ ಬರೆದಿದ್ದೇವೆ. ಎಷ್ಟು ಬರೆದರೂ ನಮಗೆ ಕೊಡಬೇಕಾದ ತೆರಿಗೆಯ ಭಾಗವನ್ನು ಕೊಡುತ್ತಿಲ್ಲ. ಹೋದ ವರ್ಷ ಶ್ರೀಮಾನ್ ಚನ್ನಬಸಪ್ಪನವರು ಬೇಗ ತೀರ್ಮಾನ ಮಾಡುತ್ತೇವೆಂದು ಭರವಸೆಯನ್ನು ಕೂಡ ಕೊಟ್ಟರು. ಆದರೂ ಇದುವರೆಗೂ ಇದು ಆಗಿಲ್ಲ. ನಮ್ಮ ನಗರದ ರಸ್ತೆಗಳು ಬಹಳ ಕೆಟ್ಟುಹೋಗಿವೆ. ಅವುಗಳನ್ನು ದುರಸ್ತುಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಸರ್ಕಾರದವರು ಈ ತೆರಿಗೆಯ ಹಣವನ್ನು ಕೊಡದಿರುವುದರಿಂದ ಕಾರ್ಪೊರೇಷನ್ನಿಗೆ ಬಹಳ ತೊಂದರೆಯಾಗುತ್ತದೆಯೆಂಬ ಅಂಶವನ್ನು ತಮ್ಮ ಮೂಲಕ ಸರ್ಕಾರದವರಿಗೆ ತಿಳಿಸ ಬಯಸುತ್ತೇನೆ.

ಗ್ರಾಮಾಂತರ ಸಂಚಾರ ಸೌಕರ್ಯಗಳ ವಿಚಾರವನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಆದರೆ ನಮ್ಮ ಕಾರ್ಪೊರೇಷನ್ ಪಕ್ಕದಲ್ಲಿರುವ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಹೋಗುವುದಕ್ಕೇ ಇದುವರೆಗೂ ಒಂದು ಸರಿಯಾದ ರಸ್ತೆ ಆಗಿಲ್ಲ. ಈ ಬಗ್ಗೆ ಸರ್ಕಾರದವರೂ ವಿಶೇಷ ನಿಗಾ ಕೊಟ್ಟು ಆದಷ್ಟು ಬೇಗನೆ ಮಾಡಿಸಿ ಕೊಡಬೇಕೆಂದು ಹೇಳುತ್ತೇನೆ.

ಎಚ್. ಎ. ಎಲ್. ಫ್ಯಾಕ್ಟರಿ ಬಂದ ಮೇಲೆ ಅಲ್ಲಿ ಅವರು ಬೋರ್ ವೆಲ್‌ಗಳನ್ನು ಹಾಕಿದ್ದಾರೆ. ಇದರ ಪರಿಣಾಮವಾಗಿ, ಅಲ್ಲಿ ಸುತ್ತಮುತ್ತಲ ಹಳ್ಳಿಗಳಲ್ಲಿರುವ ಬಾವಿಗಳಲ್ಲಿ ನೀರೇ ಇಲ್ಲದಂತಾಗಿದೆ. ಈ ಬಗ್ಗೆ ಏನಾದರೂ ಏರ್ಪಾಡು ಮಾಡಿ, ಆ ಹಳ್ಳಿಗಳಲ್ಲೂ ಬೋರ್‌ವೆಲ್‌ಗಳನ್ನು ತೋಡಿಸುವ ವ್ಯವಸ್ಥೆಮಾಡಿ ಆ ಜನರಿಗೆ ಅನುಕೂಲ ಪಡಿಸಬೇಕೆಂದು ಹೇಳುತ್ತೇನೆ.

ಬೆಂಗಳೂರಿನ ಜನರಲ್ ಆಸ್ಪತ್ರೆಗಳ ವಿಚಾರ, ಇವುಗಳ ಸಂಖ್ಯೆ ಹಿಂದೆ ಎಷ್ಟಿತ್ತೊ ಈಗಲೂ ಅಷ್ಟೇ ಇದೆ. ಈಗ ಜನ ಸಂಖ್ಯೆ ವಿಪರೀತ ಬೆಳೆದಿದೆ. ಇದಕ್ಕನುಗುಣವಾಗಿ ಹೆಚ್ಚಿಗೆ ಆಸ್ಪತ್ರೆಗಳನ್ನು ಕಟ್ಟಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಸ್ಕೂಲುಗಳ ವಿಚಾರದಲ್ಲಿ ಹೇಳುವುದಾದರೆ, ಬೆಂಗಳೂರು ನಗರದಲ್ಲಿ ಇದೊಂದು ಪ್ರಾಮುಖ್ಯವಾದ ಪ್ರಶ್ನೆಯಾಗಿದೆ. ಅನೇಕ ಸ್ಕೂಲುಗಳಲ್ಲಿ ಫರ್ನಿಚರ್ ಸಾಕಾದಷ್ಟಿಲ್ಲ. ಅಧಿಕಾರಿಗಳಾಗಲಿ, ಮಂತ್ರಿಗಳಾಗಲೀ ಇವುಗಳನ್ನು ಒಮ್ಮೆಯಾದರೂ inspect ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ; ಅದರಲ್ಲೂ ನಮ್ಮ ಸಿವಿಲ್ ಏರಿಯಾ ನೋಡಿದರಂತೂ ಅಲ್ಲಿ ಒಂದು ಕೂಡ ಸರ್ಕಾರಿ ಹೈಸ್ಕೂಲಿಲ್ಲ. ಸರ್ಕಾರದವರು ಇದನ್ನ ಕೂಡಲೇ ಮನಗಂಡು ಆದಷ್ಟುಬೇಗನೆ ಸರ್ಕಾರಿ ಸ್ಕೂಲುಗಳನ್ನು ಆ ಪ್ರದೇಶಕ್ಕೆ ಮಂಜೂರು ಮಾಡಿಸಿಕೊಡಬೇಕಾಗಿ ಹೇಳುತ್ತೇನೆ. ಮತ್ತು ಹಾಲಿ ಇರುವ ಸ್ಕೂಲುಗಳಿಗೆ ಫರ್ನಿಚರ್ ಮುಂತಾದು ಗಳನ್ನು ಒದಗಿಸ ಬೇಕೆಂದು ಹೇಳುತ್ತೇನೆ.

ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಒಂದು ಮಾತು. ಈ ಇಲಾಖೆ ಒಂದು ಕಾರ್ಪೊರೇಷನ್ ಆದ ಮೇಲೆ ಅನೇಕ ಅನ್ಯಾಯಗಳಾಗಿವೆ. ನಮ್ಮ ಹಳೆಯ ಮೈಸೂರಿನ ನೌಕರರುಗಳಿಗೆ ಕೊಟ್ಟಿರತಕ್ಕ ಸಂಬಳದ ಸ್ಕೇಲಿಗೂ, ಹೊರಗಿನಿಂದ ಬಂದಿರತಕ್ಕವರ ಸ್ಕೇಲಿಗೂ ಬಹಳ ತಾರತಮ್ಯವಿದೆ. ಇದನ್ನು ಎಷ್ಟೋ ಸಾರಿ ತಮ್ಮ ಗಮನಕ್ಕೆ ತಂದಿದ್ದೇವೆ. ಇನ್ನೂ ಯಾವ ರಿಲೀಫನ್ನೂ ಕೊಟ್ಟಿಲ್ಲ. ದಯವಿಟ್ಟು ಇದನ್ನು ಮಾಡಿಸಿ ಕೊಟ್ಟು ಸಹಾಯ ಮಾಡಬೇಕೆಂದು ಕೋರಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಸ್ವಾಮಿ, ರಾಜ್ಯಪಾಲರ ಭಾಷಣದ ಮೇಲೆ ಅನೇಕ ಜನ ನನ್ನ ಮಾನ್ಯ ಮಿತ್ರರು ಒಳ್ಳೆಯ ಮತ್ತು ಉಪಯುಕ್ತವಾದ ಸಲಹೆಗಳು ಕೊಟ್ಟಿದ್ದಾರೆ. ಈಗ ತಾವು ನನಗೆ 15 ನಿಮಿಷಗಳು ಕಾಲಾವಕಾಶ ಮಾತ್ರ ಕೊಟ್ಟಿದ್ದೀರಿ. ಇಷ್ಟರಲ್ಲಿ ನಾವು ಒಂದೊಂದು ಇಲಾಖೆಯಲ್ಲಿರತಕ್ಕ ಎಲ್ಲಾ ವಿಚಾರಗಳನ್ನೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈಗ ಮಾತನಾಡಿರತಕ್ಕ ನನ್ನ ಮಿತ್ರರು ಹೇಳಿದ್ದನ್ನು ಬಿಟ್ಟು ಉಳಿದ ಕೆಲವು ವಿಚಾರಗಳನ್ನು ಮಾತ್ರ ಹೇಳಲು ಇಷ್ಟಪಡುತ್ತೇನೆ.

ತಾವೀಗ ಪಾನನಿರೋಧವನ್ನು ಜಾರಿಗೆ ತಂದಿದ್ದೀರಿ. ಇದನ್ನೇಕೆ ಜಾರಿಯಲ್ಲಿಟ್ಟಿದ್ದೀರೋ ನನಗೆ ಅರ್ಥವಾಗಿಲ್ಲ. ಗಾಂಧಿಯ ಹೆಸರನ್ನು ಹೇಳತಕ್ಕ ಜನ, ಗಾಂಧಿಯ ತತ್ವದಂತೆ ನಡೆಯುತ್ತೇವೆನ್ನುವ ಜನ, ನಮ್ಮಲ್ಲಿ ಒಂದು ಗಾದೆಯಲ್ಲ ಹೇಳುವಂತೆ ‘ಮಾಡುವುದು ಅನಾಚಾರ ಮನೆಯಮುಂದೆ ಬೃಂದಾವನ’ ಎಂಬಂತೆ ನಡೆಯುತ್ತಿದ್ದಾರೆ. ಇಲ್ಲಿ ಪ್ರತಿಯೊಬ್ಬರಿಗೂ ಗೊತ್ತಿದೆ, ನಮ್ಮ ದೇಶದಲ್ಲಿ ಪಾನನಿರೋಧ ಯಶಸ್ವಿಯಾಗಿಲ್ಲ. ನೀವು ಬರೀ ಒಂದು ಪ್ರತಿಷ್ಠೆಗಾಗಿ ಈ ಪಾನನಿರೋಧವನ್ನಿಟ್ಟುಕೊಂಡಿದ್ದೀರೇ ವಿನಾ, ಇದರಿಂದ ಜನಕ್ಕಾಗಲೀ ದೇಶಕ್ಕಾಗಲೀ ಸುಖವಾಗಿಲ್ಲ. ಈಗತಾನೆ ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ, ನಾವು 8 ಕೋಟಿ ರೂಪಾಯಿಗಳ ಹೊಸ ತೆರಿಗೆಯನ್ನು ಹಾಕಬೇಕೆಂದಿದ್ದೇವೆ ಎಂದು. ಎಕ್ಸೈಸ್ ಬಾಬಿನಿಂದ ಸುಖವಾಗಿ ಬರುತ್ತಿದ್ದ ವರಮಾನವನ್ನು ಬಿಟ್ಟು ಬಲೋದ್ಬಂಧನದಿಂದ ಪಾನನಿರೋಧವನ್ನು ಜಾರಿಗೆ ತರುತ್ತೇವೆನ್ನುವುದು ‘ಹುಚ್ಚುತನದ ಕೆಲಸ’ ಎಂದು ಹೇಳುತ್ತೇನೆ. ಏಕೆಂದರೆ, ಈ ಪಾನನಿರೋಧ ಎಲ್ಲಿಲ್ಲಿ ಜಾರಿಯಲ್ಲಿದೆಯೋ ಅಲ್ಲಿ ಹಿಂದೆ ಒಬ್ಬನು ಕುಡಿಯುವವನಿದ್ದರೆ ಈಗ 10 ಜನ, 20 ಜನ ಕುಡಿಯವವರಾಗಿದ್ದಾರೆ. ಮನೆ ಮಕ್ಕಳೆಲ್ಲಾ ಕುಡಿಯವುದಕ್ಕೆಪ್ರಾರಂಭಿಸಿದ್ದಾರೆ. ಆದ್ದರಿಂದ ನಾನು ಈಹೊತ್ತು ಅಪ್ಪಟ ಕಾಂಗ್ರೆಸ್ ಭಕ್ತನಾಗಿದ್ದೂ ಹೇಳುತ್ತೇನೆ. ಕಂಡಿದ್ದನ್ನು ಕಂಡಿದ್ದಂತೆ ಹೇಳುವುದು ನನ್ನ ಕರ್ತವ್ಯ. ಈಹೊತ್ತು ನಮ್ಮ ಕಾಂಗ್ರೆಸ್ ಮಿತ್ರರು ತಮ್ಮ ಆತ್ಮವಂಚನೆ ಮಾಡಿಕೊಳ್ಳುತ್ತಿದ್ದಾರೆ. ಪಾನನಿರೋಧ ತಂದು ಈ ದೇಶಕ್ಕೆ ಬಹಳ ದೊಡ್ಡ ಅನ್ಯಾಯ ಮಾಡಿದ್ದಾರೆಂದು ನನಗನ್ನಿಸುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಪಾನನಿರೋಧವನ್ನು ತೆಗೆದು ಹಾಕಿಬಿಡಿ ಎಂದು ನಾನು ಹೇಳುತ್ತೇನೆ. ಅದಕ್ಕೆ ಬದಲು ಒಳ್ಳೆಯ ಪ್ರಚಾರ ನಡೆಸಿ ಜನಗಳು ಕುಡಿಯುದೆ ಇರುವಂಥಾ, ಫಿಲ್ಮ್‌ಗಳ ಮೂಲಕ, ಭಾಷಣಗಳ ಮೂಲಕ ಜನಗಳ ಮನಸ್ಸನ್ನು ಪರಿವರ್ತಿಸಿ, ತಾವೇ ತಾನಾಗಿ ಜನರು ಬಿಡುವುದಾದರೆ, ಅದು ಯಶಸ್ವಿಯೂ, ಶಾಶ್ವತವೂ ಆನಿಸುತ್ತದೆ

ಕಾನೂನಿನ ಮೂಲಕ ನಿಲ್ಲಿಸುವುದಕ್ಕೆ ಹೊರಡುವುದು ಜಾಣತನ ಅಲ್ಲವೆಂದು ಹೇಳುತ್ತೇನೆ.

ಇನ್ನು ಡೈರಿ ಪದಾರ್ಥಗಳು. ಇವೆಲ್ಲ ಪಟ್ಟಣದ ಮಕ್ಕಳಿಗೆ ಮಾತ್ರ ಇರುವಂತೆ ಕಾಣುತ್ತದೆ. ಸುತ್ತ ಮುತ್ತಲ ಹಳ್ಳಿಗಳಲ್ಲಿರುವ ಹಾಲು ಮೊಸರೆಲ್ಲಾ ಪಟ್ಟಣಕ್ಕೆ ಬಂದು ಹಳ್ಳಿಯ ಮಕ್ಕಳಿಗೆ ನೀರುಮಜ್ಜಿಗೆ ಕೂಡ ಸಿಕ್ಕಾದಂತಾಗಿದೆ, ನಮ್ಮ ಹಳ್ಳಿಯ ಮಕ್ಕಳು ಆರೋಗ್ಯವಾಗಿರಬೇಕಾದರೆ, ನಾಳೆ ನಮ್ಮ ದೇಶದಲ್ಲಿ ಪುಷ್ಟಿಕರವಾದ ಜನಾಂಗವನ್ನು ರಚಿಸಬೇಕಾದರೆ, ಎಲ್ಲ ಮಕ್ಕಳಿಗೂ ಸಮೃದ್ಧಿಯಾಗಿ ಹಾಲು ಮೊಸರು ಸಿಕ್ಕುವ ಯೋಜನೆಯನ್ನು ಮಾಡಬೇಕು. ಈ ಹೊತ್ತು ಯಾವ ಹಳ್ಳಿಯಲ್ಲಿ ನೋಡಲಿ ಅಲ್ಲಿನ ಗೋಮಾಳಗಳು ಒಳ್ಳೆಯ ಸ್ಥಿತಿಯಲ್ಲಿಲ್ಲ. ಎಷ್ಟೋ ಕಡೆ ಗೋಮಾಳಗಳು ಇಲ್ಲವೇ ಇಲ್ಲ. ನಮ್ಮ ದೇಶದಲ್ಲಿ ಪಶು ಸಂಪತ್ತು ಸುಮಾರು 2 ಕೋಟಿ ಯಷ್ಟಿದೆಯೆಂದು ಸ್ಟ್ಯಾಟಿಸ್ಟಿಕ್ಸ್ ಇಲಾಖೆಯವರು ತಿಳಿಸುತ್ತಾರೆ. ಈ ಎರಡು ಕೋಟಿ ಪಶುಗಳು ಚೆನ್ನಾಗಿ ಮೇಯಿದುಕೊಂಡಿರಬೇಕಾದರೆ ಎಷ್ಟು ಗೋಮಾಳ ಬೇಕು! ಈಹೊತ್ತು ಇರುವ ಗೋಮಾಳವಾದರೂ ಎಷ್ಟು? ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು 6 ಲಕ್ಷ ಎಕರೆಗಳಷ್ಟು ಹೆಚ್ಚು ಪ್ರದೇಶ ವನ್ನು ಹೊಸದಾಗಿ ಸಾಗುವಳಿಗೆ ಕೊಟ್ಟಿದ್ದೇವೆಂದು ಹೇಳಿದ್ದರು. ಈ ಆರುಲಕ್ಷ ಎಕರೆಗಳು ಗೋಮಾಳ ದಿಂದಲೇ ಕೊಟ್ಟಿರುವಂಥವಾಗಿವೆಯೆಂದರೆ ತಪ್ಪಲ್ಲ. ಗೋಮಾಳಗಳನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇಡದಿರುವುದೇ ಹೀಗೆ ವಿಲೇವಾರಿಯಾಗು ತ್ತಿರುವುದಕ್ಕೆ ಒಂದು ಕಾರಣ. ದನ ಹಾಕಿದ ಸಗಣಿ ಗಂಜಲವನ್ನು ಕೂಡ ಅಲ್ಲಿ ಜನ ಬಿಡುತ್ತಿಲ್ಲ. ಬರೀ ಹಂಚಿ ಹುಲ್ಲು ಬೆಳೆಯುತ್ತಿದೆ. ಇದನ್ನು ತಿಂದು ದನ ಬೆಳೆಯುವುದು ಹೇಗೆ? ಆದ್ದರಿಂದ ಈ ಬಗ್ಗೆ ಒಂದು ಕಾನೂನನ್ನಾದರೂ ಮಾಡಿ. ಇಲ್ಲವೇ ಪ್ರತಿಯೊಂದು ಹಳ್ಳಿಯವರೂ ಒಂದು ನಿರ್ಣಯಮಾಡಿಕೊಂಡು ಅವರಿಗಿರತಕ್ಕಗೋಮಾಳದಲ್ಲಿ ಅರ್ಧ ಭಾಗದಲ್ಲಾದರೂ ಹೊಸ ಹೊಸ ಜಾತಿಯ ಹುಲ್ಲು ಮತ್ತು ಬೇಗ ಬೆಳೆಯ ತಕ್ಕ ಹುಲ್ಲು ಬಿತ್ತನೆಗಳನ್ನು ಹಾಕಿ ಸಮೃದ್ಧಿಯಾಗಿ ದನಕರುಗಳಿಗೆ ಹುಲ್ಲು ಸಿಕ್ಕುವಂಥ ಒಂದು ವ್ಯವಸ್ಥೆ ಯನ್ನು ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಜೊತೆಗೆ ನಮ್ಮದು ವೆಲ್‌ಫೇರ್‌ಸ್ಟೇಟ್ ಎಂದು ಹೇಳು ತ್ತಿದ್ದೀರಿ. ಬಹಳ ಬೇಗ ಸುಖೀ ರಾಜ್ಯವನ್ನು ನಿರ್ಮಾಣಮಾಡಬೇಕೆಂಬ ಗುರಿಯಲ್ಲಿ ಬೇಕಾದಷ್ಟು ಅಧಿಕಾರಿಗಳನ್ನು ಹಾಕುತ್ತಿದ್ದೀರಿ. ಇಂತಹ ಅಧಿ ಕಾರಿಗಳಗಲ್ಲಿ ಕೆಲವರು ಸ್ವಲ್ಪ ವಯಸ್ಸಾಗಿರುವವರು. 1947ರ ಹಿಂದಿನ ಜನರು ಯಾರು ಇದ್ದರೋ ಅವರು ಈಗಿನವರನ್ನು ತೆಗಳಿಕೊಂಡು ಇರುತ್ತಾರೆಯೇವಿನಾ ಕೆಲಸಮಾಡತಕ್ಕ ಅಭ್ಯಾಸವಿಲ್ಲ. ಈಗ ನಮ್ಮ ರೆವಿನ್ಯೂ ಮಂತ್ರಿಗಳು ಇದ್ದಾರೆ. ಇವರಿಗೆ ಬಹಳ ಹುರುಪು ಉತ್ಸಾಹ ಎಲ್ಲಾ ಇದೆ. ಕೆಲವು ಅಧಿಕಾರಿಗಳು ಸೀದಾ ಹೋಗಿ ನಿಮಗೆ ವಯಸ್ಸಾಗಿದೆ, ರಾಜೀನಾಮೆ ಕೊಟ್ಟು ಹೋಗಿಬಿಡಿ, ನಿಮ್ಮ ಮೇಲೆ ಕ್ರಮತೆಗೆದು ಕೊಳ್ಳುವುದಕ್ಕೆ ಇಷ್ಟವಿಲ್ಲ. ಪೆನ್ಷನ್ ಕೊಡುತ್ತೇವೆಂದು ಹೇಳುವುದೂ ಉಂಟು ಕೆಲಸಮಾಡುವುದಕ್ಕೆಇಷ್ಟವಿಲ್ಲದೇ ಇರುವವರು ಸುಮ್ಮನೆ ಕೂತಿದ್ದು ಸಬಾರ್ಡಿನೇಟ್ ಆಫೀಸರುಗಳಿಗೆ ಸೂಚನೆಗಳನ್ನು ಕೊಟ್ಟು ಇವರು ಅಲ್ಲೇ ಕುಳಿತುಕೊಂಡು ಕೆಲಸ ಮಾಡಿದರೆ ಅವರ ಕೈ ಕೆಳಗೆ ಇರುವವರು ಮಾಡುವುದೇನು ಎಂದು ನಾನು ಕೇಳಬೇಕಾಗಿದೆ. ವರದಿಯನ್ನು ಅಲ್ಲೇಕೂತುಕೊಂಡು ಬರೆಯುತ್ತಾರೆ. ಈ ಪದ್ಧತಿ ಹೋಗಬೇಕಾದರೆ ಜಬರದಸ್ತು ಹತೋಟಿ ಇಡಬೇಕು. ಅಲ್ಲದೆ ಈ ಎನ್. ಇ. ಎಸ್. ಬ್ಲಾಕ್‌ನಲ್ಲಿ ಒಂದು ಪದ್ಧತಿ ಇದೆ. ಬೇರೆ ಬೇರೆ ಇಲಾಖೆಯ ಅಧಿಕಾರಿಗಳಲ್ಲಿ ಕೊ-ಆರ್ಡಿನೇಷನ್ ಎಂಬುದನ್ನು ಕೇಳಲೇಬೇಡಿ; ಆರೀತಿ ನಡೆಯುತ್ತಿದೆ. ಇದು ಸರಿಯಲ್ಲ. ಕೊ-ಆರ್ಡಿನೇಷನ್ ಇರತಕ್ಕ ವ್ಯವಸ್ಥೆ ಮಾಡಿ. ನನ್ನತಾಲ್ಲೂಕಿನ ಅನುಭವದ ಮಾತನ್ನು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಒಬ್ಬ ಅಗ್ರಿಕಲ್ ಚರಲ್ ಆಫೀಸರು ಎಂದು ಇದ್ದಾರೆ. ಅವರು ಬಿ.ಡಿ.ಒ. ಗೆ ಸಂಬಂಧವೇ ಇಲ್ಲವಂತೆ; ಡೈರಿ ಅವರಿಗೆ ಕೊಡಕೂಡದಂತೆ, ಹೆಡ್‌ಕ್ವಾರ್ಟರ್ಸ್‌ನಲ್ಲಿರತಕ್ಕ ಅಸಿಸ್ಟೆಂಟ್ ಡೈರೆಕ್ಟರ್ಸ್ ಅವರ ಮೇಲ್ವಿಚಾರಣೆ ಮಾಡಬೇಕು. ಇಲ್ಲಿರತಕ್ಕ ಬಿ. ಡಿ. ಓ. ಮಾಡುವುದು ಏನುಎಂಬುದಾಗಿ ನಾನು ಕೇಳಬೇಕಾಗಿದೆ. ಹೀಗಾ ದರೆ ಅಧಿಕಾರಿಗಳ ಮೇಲೆ ಹೇಗೆ ಹತೋಟಿ ಇರುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗಿವೆ.

ಇನ್ನು ಇರಿಗೇಷನ್ ವಿಚಾರವಾಗಿ ಹೇಳುವುದಾದರೆ ಈಗ ಹಾರಂಗಿ ಮತ್ತು ಕಂಬದಕಡ—ಈ ಪ್ರಾಜೆಕ್ಟು ಗಳು ಬಂದು ನಾಲೆಗಳು ಹರಿಯುವ ಸಮಾಚಾರವೇ ಬೇರೆಯಾಗಿದೆ. ನನ್ನ ತಾಲ್ಲೂಕಿನ ವಿಚಾರವಾಗಿ ಹೇಳಿ ದರೆ ಕೋಲಾರದ ಪಾವಗಡ, ಶಿಡ್ಲಘಟ್ಟ, ಮಧುಗಿರಿ, ಶಿರಾ, ತಾಲ್ಲೂಕ್‌ಗಳು ನಮ್ಮ ತಾಲ್ಲೋಕಿನ ಸ್ಥಿತಿ ಯಲ್ಲೇ ಇವೆ. ಯಾವುದೇ ಒಂದು ನಾಲೆಯನ್ನು ಇಲ್ಲಿಗೆ ತರುವುದು ಕಷ್ಟವಾಗುತ್ತದೆ. ಇಂತಹಕಡೆ ಇಷ್ಟು ಪರ್ಸಂಟೇಜ್ ಕೊಟ್ಟರೆ ಕೆರೆಕಟ್ಟಿಕೊಡುತ್ತೇ ವೆಂದು ಎನ್ನುವ ಒಂದು ನಿಯಮವನ್ನು ಹಾಕಿಕೊಂಡಿ ದ್ದೀರಿ. ದಯವಿಟ್ಟು ಈರೀತಿ ನಿಯಮವನ್ನು ಹಾಕಿಕೊಳ್ಳಬೇಡಿ. ಒಂದು ಎಕರೆಗೆ ಕಂಟ್ರಿಬ್ಯೂಷನ್ ಸಾವಿರ ರೂಪಾಯಿಗಳೆಂದು ನಿಗದಿಮಾಡಿಕೊಂಡಿದ್ದೀರಿ. ಅದರೆ ಮಳೆಬೆಳೆ ಕಡಮೆ ಇರುವ ಪ್ರದೇಶಗಳಲ್ಲಿ ಇಂತಹ ನಿಯಮಗಳನ್ನು ಹಾಕಿಕೊಳ್ಳಬೇಡಿ. ಜೊತೆಗೆ ಶ್ರೀಮಾನ್ ಕೃಷ್ಣಪ್ಪನವರು ಡೆಪ್ಯುಟಿಮಿನಿಸ್ಟರ್ ಆಗಿ ಕೇಂದ್ರದಲ್ಲಿ ದ್ದಾಗ ಬಾವಿಗಳಿಗಾಗಿ ಬಹಳವಾಗಿ ಹಣಕೊಟ್ಟರು. ಇದನ್ನು ತಾಲ್ಲೂಕ್ ಬೋರ್ಡುಗಳಿಗೆ ಕೊಡುವುದಕ್ಕೆ ವ್ಯವಸ್ಥೆಮಾಡಿದ್ದೀರಿ. ದಯವಿಟ್ಟು ಇದನ್ನು ಜಾಗ್ರತೆ ತಪ್ಪಿಸಿ. ಇದರ ಮೇಲ್ವಿಚಾರಣೆ ಖಂಡಿತವಾಗಿ ತಾಲ್ಲೂಕ್ ಬೋರ್ಡುಗಳಿಗೆ ಬೇಡ. ಇದಕ್ಕೆ ಬದಲಾಗಿ ನಮ್ಮ ತಾಲ್ಲೂಕಿನಂತಹ ಪರಿಸ್ಥಿತಿ ಇರುವ ಪ್ರದೇಶ ಗಳಲ್ಲಿ ಈ ಬಾವಿಗಳಿಗಾಗಿ ಹಣಸಹಾಯಮಾಡುವ ಕಾರ್ಯವನ್ನು ಪಿ. ಡಬ್ಲ್ಯು ಡಿ. ಅವರಿಗೆ ವಹಿಸಿ ಅವರು ಕೆರೆಗಳಿಗೆ ಹೇಗೆ ಕಾಂಟ್ರಿಬ್ಯೂಷನ್ ಕೊಡುತ್ತಾರೋ ಆ ರೀತಿ ಇದಕ್ಕೂ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ತಯಾರಾಗಿರುತ್ತಾರೆ. ಈ ರೀತಿ ಕಾಂಟ್ರಿಬ್ಯೂಷನ್ ಬಾವಿಗಳಿಗಾಗಿ ಕೊಡುವ ಸೌಲಭ್ಯವನ್ನು ಸರ್ಕಾರ ದವರು ಒದಗಿಸಿ ಕೊಡುವುದಾದರೆ ಅದನ್ನು ಸುಮಾರು ಹತ್ತು ಹದಿನೈದು ವರ್ಷಗಳಲ್ಲಿ ರೈತರಿಗೆ ಕಂತುಗಳ ಮೂಲಕ ತೀರಿಕೆಮಾಡುವುದಕ್ಕೆಅನುಕೂಲವಾಗುತ್ತದೆ. ಆದರೆ 2–3 ಸಾವಿರ ರೂಪಾಯಿಗಳಲ್ಲಿ ಕೇವಲ ಒಂದು ಬಾವಿಯನ್ನು ಕಟ್ಟುವುದಕ್ಕಾಗುವುದಿಲ್ಲ. ಆದರೂ ರೈತನು ಆ ಸಾಲಸೌಲಭ್ಯವನ್ನು ಪಡೆಯಬೇಕೆಂಬ ಆಸೆಯಿಂದ ಆ ಕೆಲಸಕ್ಕೆ ಕೈಹಾಕುತ್ತಾನೆ. ಆ ಸಮಯಕ್ಕೆ ಸರಿಯಾಗಿ ರೈತನಿಗೆ ದುಡ್ಡು, ಕಾಸು ಒದಗುವುದಿಲ್ಲ. ಇದರಿಂದ ಅಧಿಕಾರಿಗಳು ಅವರಿಗೆ ಇಲ್ಲದ ಸಲ್ಲದ ಕಿರುಕುಳಗಳನ್ನು ಕೊಡುವ ಪರಿಸ್ಥಿತಿ ಬಂದಿದೆ. ಇಂಥಾದ್ದನ್ನು ಆದಷ್ಟು ಬೇಗ ತಪ್ಪಿಸಿ ಇರ್ರಿಗೇಷನ್ ಬಾವಿಗಳನ್ನು ಕಟ್ಟಿಸುವ ಕಾರ್ಯಗಳನ್ನು ಪಬ್ಲಿಕ್‌ವರ್ಕ್ಸ್ ಇಲಾಖೆಗೆ ವಹಿಸಿ. ಕಂಟ್ರಾಕ್ಟ್ ಕೊಟ್ಟರೆ ರೈತನ ಮೇಲೆ ಜಾಸ್ತಿ ಹೊರೆಬೀಳುತ್ತದೆ ಎನ್ನುವುದಾದರೆ ರೈತನಿಗೇ ಈ ಕಂಟ್ರಾಕ್ಟ್ ಕೆಲಸ

(ಶ್ರೀ ಟಿ. ಎಚ್. ಮಾದಪ್ಪಗೌಡ)

ಕೊಡಿ ಅಂತಹವರಿಗೆ ಈ ಕಂಟ್ರಾಕ್ಟ್ ಕೆಲಸ ಕೊಟ್ಟರೆ ಅದರಿಂದೇನಾದರೂ ಲಾಭಾಂಶ ಬಂದಲ್ಲಿ ಆತನಿಗೆ ಉಳಿದುಕೊಳ್ಳುವುದಾದರೆ ಅದು ಅವನಿಗೇ ಉಳಿಯುವುದು ಮತ್ತು ಒಂದು ರೀತಿಯಲ್ಲಿ ಪ್ರಯೋಜನವಾಗುತ್ತದೆ. ಒಂದು ವೇಳೆ ಆ ಸಮಯಕ್ಕೆ ಸರಿಯಾಗಿ ರೈತನಿಗೆ ಹಣ ಒದಗಿಸದೇ ಇರುವುದರಿಂದ ಆತ ತೆಗೆದುಕೊಂಡ ಕಾರ್ಯ ಕಾಲಕ್ಕೆ ಸರಿಯಾಗಿ ಮುಗಿಸುವುದಕ್ಕಾಗುವುದಿಲ್ಲ. ಆದ್ದರಿಂದ ಬಹಳ ತೊಂದರೆಯಾಗುತ್ತದೆ. ಈರೀತಿ ಮಾಡುವುದರಿಂದ ಸರ್ಕಾರವೇ ಬುದ್ಧಿವಂತಿಕೆಯಿಂದ ರೈತನಿಗೆ ಬಾವಿಯ ಸೌಕರ್ಯವನ್ನು ಮಾಡಿಕೊಟ್ಟ ಹಾಗಾಗುತ್ತದೆ. ಮತ್ತು ಕಂತಿನ ಪ್ರಕಾರ ರೈತ ರಿಂದ ಹಣವನ್ನು ವಾಪಸ್ಸು ತೆಗೆದುಕೊಳ್ಳುವ ವ್ಯವಸ್ಥೆ ಯನ್ನು ಮಾಡಿಕೊಳ್ಳಬಹುದು ಎಂದು ನನ್ನ ಅಭಿಪ್ರಾಯ. ಜೊತೆಗೆ ಹಳ್ಳಿಗಾಡುಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯ ವಿಷಯವಾಗಿ ಕೆಲವು ಮಾತುಗ ಳನ್ನು ಹೇಳ ಬಯಸುತ್ತೇನೆ. ಬೆಂಗಳೂರು ಪಟ್ಟಣದಲ್ಲಿ 14 ಲಕ್ಷ ಜನಗಳು ಇದ್ದಾರೆ. ಬಹಳ ಜೋರಾಗಿ ಮಾತನಾಡುತ್ತಾರೆ. ನಮ್ಮಲ್ಲಿ ದುಡ್ಡು ಇದೆ. ಬೇಕಾದರೆ ಕಾವೇರಿಯಿಂದ ಅಥವಾ ಗಂಗಾನದಿ ಯಿಂದ ಇಲ್ಲಿಗೇ ನೀರು ತರುವ ಏರ್ಪಾಡುಮಾಡು ತ್ತೇವೆಂದು ಹೇಳುತ್ತಾರೆ. ಆದರೆ ನಾಗಮಂಗಲ ತಾಲ್ಲೂಕಿನಲ್ಲಿರತಕ್ಕ 360 ಗ್ರಾಮಗಳಲ್ಲಿ 120 ಗ್ರಾಮ ಗಳಿಗೆ ಕುಡಿಯುವ ನೀರಿನ ಬಾವಿಗಳಿಲ್ಲ ಅಂತಹಕಡೆ ಬಹಳವಾಗಿ ನಿಗಾಕೊಡಿ. ಇನ್ನೇನು ಒದಗಿಸುವುದಕ್ಕೆ ಆಗದೇ ಹೋದರೂ ಕುಡಿಯುವುದಕ್ಕೆ ನೀರಾದರೂ ನಮಗೆ ಒದಗಿಸಿದ್ದಾರೆಂದು ಹೇಳುವರೀತಿಯಲ್ಲಿ ಸೌಕರ್ಯವನ್ನು ನಮ್ಮ ರೈತರಿಗೆ ಒದಗಿಸಿಕೊಂಡ ಬೇಕಾಗಿದೆ. ಜೊತೆಗೆ 5-10 ಸಾವಿರ ಪ್ರಜಾಸಂಖ್ಯೆ ಇರತಕ್ಕ ಟೌನ್‌ಗಳಲ್ಲಿ ನೀರಿನ ವ್ಯವಸ್ಥೆಗೆ ಸಾಲ ಕೊಡು ತ್ತೇವೆಂದು ಮಾತ್ರ ಹೇಳಿದ್ದೀರಿ. ಈ ಸಾಲದಲ್ಲಿ ½ಕ್ಕಿಂತ ಜಾಸ್ತಿ ಆಗುವಷ್ಟು ಖರ್ಚನ್ನು ಗ್ರಾಂಟು ರೂಪದಲ್ಲಿಯೂ ಇನ್ನು ಅರ್ಧಭಾಗ ಹೆಚ್ಚಿಗೆ 50 ವರ್ಷಗಳ ಕಂತುಗಳಲ್ಲಿ ವಸೂಲುಮಾಡಿಕೊಳ್ಳುವಂತೆಯೂ ಮಾಡಿದರೆ ಒಳ್ಳೆ ಯದು ಎಂದು ನಾನು ಸಲಹೆ ಮಾಡಲು ಬಯ ಸುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ಹೇಳುವುದಾದರೆ ಈ ಸ್ಕೂಲುಗಳನ್ನು ತಾಲ್ಲೂಕ್ ಬೋರ್ಡುಗಳಿಗೆ ಮಾತ್ರ ದಯವಿಟ್ಟು ವಹಿಸಬೇಡಿ. ಕಾರಣವಿಷ್ಟೆ. ಏಕೆಂದರೆ ಈ ಪ್ರಜಾಪ್ರಭುತ್ವ ಯುಗದಲ್ಲಿ ಸಾರ್ವ ಜನಿಕರಿಗೆ ಇಂತಹ ಅಧಿಕಾರಗಳನ್ನು ಕೊಡಬೇಡಿ ಎಂದು ಪ್ರಜೆಗಳಿಂದ ಚುನಾಯಿತನಾಗಿರತಕ್ಕ ಮನುಷ್ಯ ನಿಮಗೆ ಹೇಳುವಾಗ ಅದು ಒಳ್ಳೆಯದಕ್ಕೋ ಅಥವಾ ಕೆಟ್ಟದ್ದಕ್ಕೋ ಅಂತೂ ನಮ್ಮ ದೇಶದಲ್ಲಿ ಒಂದುರೀತ್ಯ ಭಿನ್ನಾಭಿಪ್ರಾಯವಿರುತ್ತದೆ. ಈ ಉಪಾಧ್ಯಾಯರು ಗಳು ಇದ್ದಾರಲ್ಲಾ ಇವರು ರಾಮರಾಜ್ಯ ಬೇಕಾದರೂ ಕಟ್ಟಬಹುದು ಅಥವಾ ರಾವಣ ರಾಜ್ಯ ಬೇಕಾದರೂ ಮಾಡುತ್ತಾರೆ. ಇಂತಹವರು ರಾಜಕೀಯಕ್ಕೆ ಇಳಿದರೆ, ರಾಜಕೀಯಕ್ಕೆ ಸೇರಿದ ಜನಗಳ ಕೈವಾಡ ಇವರ ಮೇಲೆ ಆದರೆ, ತುಂಬಾ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರದವರು ದಕ್ಷರಾದ ಆಡಳಿತಗಾರ ರನ್ನು ಈ ವಿದ್ಯಾಭ್ಯಾಸದ ಇಲಾಖೆಗೆ ಹಾಕಿ ಎಲ್ಲಾ ಸ್ಕೂಲುಗಳನ್ನು ಒಂದು ಹತೋಟಿಯಲ್ಲಿ ಇಟ್ಟುಕೊಳ್ಳ ಬೇಕೇವಿನಾ ಈ ಖಾಸಗೀಯವರ ಕೈಗೆ ಏನಾದರೂ ಈ ಸ್ಕೂಲುಗಳನ್ನು ಕೊಡುವುದು ನಿಜವಾಗಿ ಸರಿಯಲ್ಲ ವೆಂದು ನನಗನ್ನಿಸುತ್ತದೆ.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರ. ತಾವು ಅದನ್ನು ಮನಾಪಲಮಾಡಿಕೊಳ್ಳುತ್ತೇವೆಂದು ಹೇಳಿ ಸಾವಿರಾರು ರೂಪಾಯಿಗಳ ಬಂಡವಾಳಹಾಕಿ ಹೊಸ ಹೊಸ ಬಸ್ಸುಗಳನ್ನು ಹೇಳದೆ ಕೇಳದೆ ತಂದು ಹಾಕಿಕೊಂಡಿದ್ದೀರಿ. ಈಗ ಹಾಸನ ಜಿಲ್ಲೆಯಲ್ಲಿ ಎಷ್ಟು ಜನ ಮಾಲೀಕರುಇದ್ದಾರೆ. ಅವರ ಗತಿ ಏನೆಂಬುದುನ್ನು ಯೋಚನೆಮಾಡಿದ್ದೀರಾ ಎಂದು ನಾನು ಕೇಳುತ್ತೇನೆ. ನಿಮ್ಮಹತ್ತಿರ ಬಸ್ಸುಗಳಿವೆ. ನೀವು ಏನುಬೇಕಾದರೂ ಮಾಡಿಕೊಳ್ಳಿ. ಇವೊತ್ತು ಒಂದು ಮಾರ್ಗ ನಾಳೆ ಒಂದು ಮಾರ್ಗದಲ್ಲಿ ಅವರ ಬಸ್ಸುಗಳು ಓಡಾಡುವಂತೆ ಮಾಡುತ್ತಿದ್ದೀರಿ. ಈತರಹ ವ್ಯವಸ್ಥೆ ಮಾಡಿದರೆ ಇದು ಸರಿಯೇ ? ನ್ಯಾಯವೇ ಎಂದು ನಾನು ಕೇಳುತ್ತೇನೆ. ಈಗ ತಾನೇ ಶ್ರೀಮಾನ್ ದೇವಯ್ಯನವರು ಇದ ರಿಂದ ಸರ್ಕಾರಕ್ಕೆ ಮಾನಬರುವುದಿಲ್ಲ, ಒಳ್ಳೆಯದಾಗು ವುದಿಲ್ಲ ಮತ್ತು ಸಂಪಾದನೆಯನ್ನು ಸಾಕಷ್ಟು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದು ನಿಜ.

ಒಬ್ಬ ಸಾವುಕಾರನಿಗೆ ವಹಿಸಿದರೆ ಹತ್ತಾರು ಜನಕ್ಕೆ ಅನ್ನಕೊಡುತ್ತಾನೆ, ಜನಗಳ ಸೌಕರ್ಯ ನೋಡಿ, ಕಾಲಕ್ಕೆ ತಕ್ಕಂತೆ ಬಸ್ಸಿನ ಪ್ರಯಾಣದ ಅನುಕೂಲ ಮಾಡಿಕೊಡುತ್ತಾನೆ. ಇವೊತ್ತು ಪಟ್ಟಣಗಳಲ್ಲಿ ನಡೆಯು ತಕ್ಕ ವ್ಯವಸ್ಥೆ ನೋಡಿ. ಇವೊತ್ತಿನ ದಿವಸ ಏನಾಗಿದೆ? ಯಾರುಸಿಕ್ಕಿದರೂ ನನ್ನನ್ನು ಡಿಸ್‌ಮಿಸ್ ಮಾಡಿದ್ದಾರೆ ಎಂದು ಹೇಳುತ್ತ ಇದ್ದಾರೆ. ಈ ರೋಡ್ ಟ್ರಾನ್ಸ್ ಪೋರ್ಟ್ ಇಲಾಖೆಯಲ್ಲಿ ಕೆಲಸಮಾಡತಕ್ಕವರು. ಈ ತಿಳಿಯದ ಸಣ್ಣಜನ ಯಾರು ಡಿಸ್‌ಮಿಸ್ ಆಗಿದ್ದಾರೆಯೋ ಅವರ ಮುಂದಿನ ಜೀವನಕ್ಕೆ ಮಾರ್ಗವೇನು ? ಇನ್ನೊಂದು ಕಡೆ ಅವರಿಗೆ ಕೆಲಸ ಸಿಕ್ಕುತ್ತದೆಯೋ? ಎಂಬುದನ್ನೆಲ್ಲಾ ತಿಳಿದುಕೊಂಡು ಅದಷ್ಟು ಈ ಮನಾ ಪಲೈಸೇಷನ್ನನ್ನು ಬಿಟ್ಟುಬಿಡಿ, ಬೇರೆ ಏನಾದರೂ ಉತ್ಪನ್ನದ ಬಾಬುಗಳಿದ್ದರೆ ತೆದುಗೆಕೊಳ್ಳಿ ಅದರಲ್ಲಿ ಹಣ ಇನ್‌ವೆಸ್ಟ್ ಮಾಡಿ; ಅದರಿಂದ ಒಳ್ಳೆಯದಾಗುತ್ತದೆ ಎಂಬ ಮಾತನ್ನು ಹೇಳಿ ನನ್ನ ಭಾಷಣವನ್ನು ಮುಗಿಸು ತ್ತೇನೆ.

†Sri D. VENKATARAMAIAH (Robertsonpet).—Mr. Speaker, while supporting the Motion of Thanks for the Address delivered by the Governor, I wish to offer some suggestions.

The first thing I wish to suggest is regarding the riparian rights in the Godavari and Krishna Basins. It has been said that a formal application to the Government of India for the appointment of a tribunal has been made under the Inter-State Water Disputes Act. When a first attempt was made to settle the matter at the State level, it failed and then it was brought to the notice of the Central Government. The Central Government appointed the Gulhati Commission. At this stage, the Government have said as the Commission is not competent to decide on the rights of use of water by

various States, the Government made a formal application to the Central Government. When the Central Government appointed the Gulhati Commission, did the State Government agree to it–Did it consented to be a participant in it? If so, why did not the Government wait till the report is received from the Commission? I am not for a moment, suggesting here to the Government that they should compromise and agree with the report to be given by the Commission. My point is, that an application has been made to the Government of India to appoint a River Board.

Sri G. VENKATAI GOWDA.—This House did insistor the Government making an application to the Government of India even before the constitution of the Commission.

Sri D. VENKATARAMIAH.—I am sorry, my learned friend has not understood me. It is true that this House did ask the State Government to file an application before the Government of India. When this matter came up in the Legislative Assembly of the Minister for Public Works there answered to the effect that there was already the Gulhati Commission working and that till it finalised its report, why should a parallel body be appointed. This information has been given by the Minister for Public Works in the Andhra Legislative Assembly. The Chief Minister of Andhra has also said that by means of tolerance, by means of compromise some kind of adjustments should be made in this matter. He further goes to the extent of saying why the State Government should file an application before the Central Government? My point is this. They say that a formal application has been made to the Central Government. So, when there are two parallel bodies, are we bound by the report of Gulhati Commission? If we are bound by it, then morally we will not be in a position to say that we will not accept the report. So my suggestion is this. The application for the formation of a River Board should be an application in the sense that we are bound by its decisions. This application should supersede the report of the Gulhati Commission if it were to come later because later on it may be a sort of *resjudicata* or we may be forbidden. So, I am requesting the State Government to make clear their stand and tell the Central Government that a tribunal under the Inter-State Water Disputes Act should be appointed and that we are not bound by the Gulhati report.

This House is aware that the Finance Minister at the Centre, Sri Morarji Desai, has said in the Lok Sabha that an agreement has been reached between the Mysore Government and the Central Government regarding the transfer of the management of the Gold Mines at K.G.F. That is a very important matter which I feel in all humility should have been mentioned in the Address. If the question has been decided, what are those terms? Those details should have been mentioned and made known to the Members of this House. Even now I request the State Government that if an agreement has been reached between the Central Government. and the State Government, that should be made public. Mr. Speaker, as a member coming from Robertsonpet I may say that the statment made regarding the transfer of management of the Gold Mines to the Centre, is received with mixed feelings. The people want to know what would be its effects on the people at large; how about the business; how about the interests of the workers, the emoluments, privileges and perquisites to be given to those persons? That has an effect on the officers apart from the question of the Consultant Agents John Taylor & Sons who are managing the mines. So, I want to make clear that the Government should take this House into its confidence and tell us the terms of the agreement, if any, entered into between them and the Central Government.

Another very important matter that has been suggested by various persons and particularly by persons coming from Kolar is about drinking water facility. in Kolar. Yesterday I had been to Kolar. Belive me, when I say that in many of the villages there are drinking wells

(SRI D. VENKATARAMIAH)

but no water in them. In the entire district there are absolutely no rivers. Even the small river like the Palar is completely dried up and there is absolutely no water. In this connection I must say that we are highly thankful to our Revenue Minister. During the least two years it was due to the interest shown by Sri Krishnappa that a number of irrigation wells—more than 2,000, have been dug up in Kolar District and they were serving very well.

5-30 P.M.

But in those wells, now not a drop of water is to be found Almost every year, it has become the fate of Kolar District to be famine or scarcity area. Why should this state of affairs exist ? Year after year we come and say that Kolar is a famine-stricken area. Why not some kind of permanent measure be given to this area ? It is not only Kolar, but Chitaldrug, Chittoor and Ananthapur District. Why not a memorandum be presented to the Central Government, call it by whatever name you like, either as a Malnad Improvement area or Famine Improvement Area or Scarcity Improvement area, that it may be declared as such, and have some permanent relief measures given so as to take the subsoil water, particularly from the Palar Basin ? Except this, I think, there may be no other go to the people of Kolar District. Finally, I may say, regarding the sinking of wells, let all funds and help be given to the Kolar District, and that too immediately. Otherwise, the position may go out of control if it is delayed by fifteen or twenty days. If immediately some measures are not taken to deepen the wells, so far as villages are conolrned, the situation may go out of hand. Even in the town area also, help should be given particularly regarding drinking water.

Another point is about the question of providing 100 beds to the T.B.Sanatorium. In this connection, I would like to bring to the notice of Government about the existence of one T.B. Sanatorium at Kolar. On account of the Kolar Gold Mines, many of the labourers, amongst whom the incidence of T.B. is very high come here, but go back because, there are not sufficient beds available. As an emergent measure at least, I request the Government to open an emergency ward with 20 beds for adults and one children's ward with 15 beds. That may not cost much.

Anothesr point, Mr. Speaker, is about the Sanitary Board management. The Sanitary Board which has been reconstituted from the 1st of April 1962, two days back. In this democratic age, should such an institution exist ? Why not leave the matter entirely for election ? From the last four years, many promises are being made to the effect that elections would be held for the Sanitary Board. Still it is being reconstituted with six official members and nine non-official members, and from amongst the nine non-official members, there are three officials, in the sense they are workers of the Gold Mining Industry, and therefore they are Government servants. As a matter of fact, even yesterday, a writ application has been admitted in the High Court to the effect that a worker in the Gold Mines is a Government servant. He has been appointed as a member in the Sanitary Board. It is certainly against law. I do not know whether the Law Department has examined the question. I would request that the matter regarding the formation of the Sanitary Board should be reconsidered. With these few remarks, I support the Motion of Thanks.

†SRI V. S. PATIL (Belgaum I).—Mr. Speaker, Sir, the Address of the Governor is one of the rarest opportunities which we as members of the Opposition have got and especially when the Legislature has been reconstituted once in five years. This is an occasion when the new Cabinet comes into existence and its polices are to be reflected in the Address given by the Governor. When we read this Address carefully, a remark that is made by the last speaker, "well without water," aptly applies to the case of this Address. Even though this Address is given by the highest dignitary, it has practically no policy at all. It is without any water or policy.

Sir, when this new State was reorganised or came into existence on the 1st November 1956, the Governor had made a speech or Address to this House on the 20th December 1956, and at that time Sri S. Nijalingappa was the Chief Minister, and he had laid down the policy of the new State, and in that Address paragraphs 3 and 4 are very pertinent. Therein the Governor has stated the policy of the new State, and there was a debate on that issue. I presume that the same policy ought to have been followed, because policy is not a thing which can be easily changed. It has to be consistently followed. We must get the fruits of the policy. At that time, the Governor expressed satisfaction with the formation of the new State, and at the same time he had given an assurance that all the Kannada areas that were outside the State still would be tried to be taken back within the State.

I know from the Hon'ble Leader of the House, who has been pleased to come just now, what his Government or his predecessors have done in respect of incorporating the Kannada areas lying outside the present State? Have they completed the integration of all the Kannada areas to which a reference had been made by the Governor five years back? I should like to ask the Hon'ble Chief Minister that question. At the same time, when we refer to that Address, I should like to mention, Sir, Sri B. K. Dalvi, then member, referred to this particular question in great detail. And he has given the reasons why, just as we desire or as everyone of us desires to bring in Kannada areas that are lying outside Marathi areas or the other linguistic areas that have been forced to be included in this State must be allowed to go outside the State to their linguistic group. At that time, Maharashtra State was not in existence. There was only bilingual Bombay, and Sri Dalvi has addressed this House in a very efficient manner as to why, we were desiring to go to that area. In his statement before this House, which has never been contradicted by anybody and which cannot be contradicted, he says: "It is not a small area........but it is an area contiguous to the Maharashtra State, and stretching far beyond 140 miles in length and from 10 to 15 miles in breadth." It is a belt between Mysore and Maharashtra State and the Marathi speaking people and they have been forcibly included in this State. Now we have got experience of the last five years as to how these people have been treated. I come from that area and we have tried our level best to get ourselves included in the Maharashtra State. For that reason, we started our movement in 1955 and then on the 16th January 1956 when the Prime Minister of India declared at Bombay that that part was to be included in Karnatak, the feelings of the people of Belgaum were inflamed. They started a hartal. On that day there was a big commotion and police had to resort to firing as a result of which several people were killed and several were injured. We had to see that this violence on the part of both the people and the Government was not resorted to and so we had to start a satyagraha movement from the 9th of March of that year. More than 5,000 people courted jail and when in August the States Reorganasiation Bill was passed in the Parliament, we withdrew that movement on the understanding that the Zonal Council would take up this question and solve it. Meetings were held in the Zonal Council, but nothing came out. Then, we had to start another satyagraha movement in 1958 and therein more than 11,000 people were sentenced to various terms of imprisonment including 9 months R.I. Then again we withdrew that movement for the time being on certain assurances being given and when they also failed, we had to take up as a last resort the 'No-Tax' campaign. That was started in February or March, 1960. It lasted for about a year and ultimately the Government saw that the people were unyielding and could not be cowed down by resort to violence and firing in certain villages. Thus, these are the movements which we have resorted to in that year.

So far as the will of the people is concerned, we had set up one man

(SRI V. S. PATIL)

Sri Somaji in 1956 against a Kannad man for the Assembly seat. We won that. In 1957 General Election we have won all the seats in that area. Then in 1961, we have won all the seats in the gram panchayat and taluk board elections on this issue alone *viz.*, whether we are to stay in Mysore or to go to Maharashtra. Then, in the recent elections of 1962 also we have fought on this issue and all of us have come out successful. If this Government has got any sense of democracy or any sense of respecting the wishes of the people, then I appeal to them to give up their bigotry and to accede to the desires and will of the people. We are not claiming a single inch of territory where there is a majority of Kannadigas...........

Sri H. R. KESHAVA MURTHY.—I want to know from the Hon'ble Member what is the percentage of votes they have secured.

Sri V. S. PATIL.—That is a very good suggestion made by my friend. I am prepared to give him the certified copies of the last elections in this behalf and we want that only those villages which have voted for us in an overwhelming majority should be given to us. I may inform the House that they are all contiguous and from a belt adjoining the Maharasthra State. If it is an island we do not claim it. I submit that this Government must respect the wishes of the border people in this behalf. Otherwise, if the people's will is not to be respected, then I do not think Sri Kanthi will be the Leader of the House. Fortunately, the people have taught a lesson to my friend Sri Kothawale and Sri Shamsuddin is now taking his place. But I request him to remember what the people have done to Sri Kothawale and the same fate may overtake him also.

Sri T. MADAIAH GOWDA.—Sir, the Hon'ble Member is discussing a matter which is not referred to in the Governor's Address.

Mr. SPEAKER.—It may be omitted in the Governor's Address, but Hon'ble Members must remember that some of them have moved amendments to that effect.

Sri T. MADAIAH GOWDA.—It is a matter for the Parliament and not for this House.

Sri V. S. PATIL.—So, I should like to say, Sir, that Government will have to give due respect to the wishes of the people. They have consistently expressed their desire on four occasions *i.e.* in 1956, in 1957, in 1961 and again in 1962. Every voter in that area has expressed his desire to go to the Maharashtra State. Even now I throw an open challenge—it may be taken as a request. There are two villages which are predominantly Marathi-speaking villages, but as the Congress candidate came from those villages, the people there have voted for the Congress or for the Kannad people. We do not claim those villages at all. Let those villages remain in Karnatak. Even now I give an open challenge to my friend the Leader of the House to take a plebicite on this issue. Wherever there are people in a village who are overwhelmingly in favour of Karnatak, let that village remain here. But if the decision of the people is in favour of the Maharashtra State, my friend must concede their desire and wish and accept the theory of contiguous village as the unit.

Mr. SPEAKER.—The Hon'ble Member may make an offer rather than a challenge.

Sri V. S. PATIL.—That is why I used the words 'request' or 'challenge'. When I am speaking for the Opposition, it is a challenge and when I am speaking on behalf of the Samithi, it is a request. I am standing in two capacities and that is why I used both the words.

Mr. SPEAKER.—The Hon'ble Member is here only in one capacity, namely, the membership capacity and in no other capacity.

Sri V. S. PATIL.—All right, Sir. I should like to know whether the policy that was enunciated in 1956 when this State was reorganised on one-language and one-State basis has been changed by the present Cabinet or the present Government or the present Leader of the House and, if so,

is he going to try to bring in the Kannada areas that are lying outside the State. Is he going to pursue the policy that was enunciated by his leader Sri S. Nijalingappa? Sir, Sri Nijalingappa was expected to occupy that Chair, but unfortunately for us he has become only a king maker. The king maker's position is very secure.

Mr. SPEAKER.—The Hon'ble Member has taken 15 minutes already. I do not want to extend the time.

Sri V. S. PATIL.—I do not want to commit any breach of the rule though that privilege is given to the Ruling Party and not for us.

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಣ).—ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲೆ ನಮ್ಮ ವಿರೋಧ ಪಕ್ಷದವರು ಅನೇಕ ಟೀಕೆಗಳನ್ನು ಮಾಡಿದ್ದಾರೆ. ನಾನಾದರೂ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಆಶಿಸುತ್ತೇನೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಮಹಾ ಚುನಾವಣೆಯ ವಿಷಯದಲ್ಲಿ ಅನೇಕ ಸಂದರ್ಭಗಳನ್ನು ಈ ಸಭೆಯಲ್ಲಿ ಉಪಯೋಗಿಸಿಕೊಂಡು ಕಾಂಗ್ರೆಸ್ ಸದಸ್ಯರು ಬಹಳ ಅನ್ಯಾಯ ಮಾಡಿದ್ದಾರೆಂದು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ನಡೆಸುತ್ತಿದ್ದ ಕೆಲವು ಮಾನ್ಯ ಮಂತ್ರಿಗಳನ್ನು ವಿರೋಧ ಪಕ್ಷದವರು ಅಭಿನಂದಿಸುತ್ತಾರೆಂದು ನಾನಂತೂ ಭಾವಿಸಿಕೊಂಡಿದ್ದೆ. ಅದಕ್ಕೆ ಕಾರಣ ಇಷ್ಟೆ. ಕೆಲವು ಕ್ಷೇತ್ರಗಳಲ್ಲಿ ಚುನಾವಣೆಯ ಪ್ರಚಾರ ಮತ್ತು ಅಲ್ಲಿ ನಡೆದ ನಡವಳಿಕೆಗಳನ್ನೂ ನಾನು ನೋಡಿದ್ದೇನೆ. ಚನ್ನಪಟ್ಟಣ, ವಿರೂಪಾಕ್ಷಿಪುರ, ಕನಕಪುರ, ಮದ್ದೂರು ಈ ಕ್ಷೇತ್ರಗಳಲ್ಲಿ ವಿರೋಧ ಪಕ್ಷದ ಸದಸ್ಯರು ಕಾಂಗ್ರೆಸ್ ಸರ್ಕಾರವನ್ನು ನಡೆಸುತ್ತಿದ್ದಂಥ ಕೆಲವು ಮಂತ್ರಿಗಳ ಸಹಾಯವನ್ನು ಪಡೆದುಕೊಂಡು ಯಾವ ರೀತಿ ಚುನಾವಣೆಯಲ್ಲಿ ಗೆದ್ದು ಬಂದರು ಎಂಬುದು ದೇಶಕ್ಕೆ ಗೊತ್ತಿದೆ. (ಸಭೆಯಲ್ಲಿ ಗದ್ದಲ) ಸ್ವಲ್ಪ ಸಮಾಧಾನದಿಂದ ಕೇಳಬೇಕು. ನಾನು ತಮ್ಮ ಭಾಷಣವನ್ನು ಬಹಳ ಸಮಾಧಾನದಿಂದ ಕೇಳಿದ್ದೇನೆ. ತಾವೂ ಕೂಡ ನನ್ನ ಭಾಷಣವನ್ನು ಸಮಾಧಾನದಿಂದ ಕೇಳಬೇಕು. ಹಿಂದೆ ಲೋಕೋಪಯೋಗಿ ಶಾಖೆಯ ಮಂತ್ರಿಗಳಾಗಿದ್ದ ಶ್ರೀ ವೀರಣ್ಣಗೌಡರು ಚುನಾವಣಾ ಭಾಷಣವನ್ನು ಮಾಡುತ್ತಾ ಅನೇಕ ಕೆಲಸ ಕಾರ್ಯಗಳನ್ನು ಮಾಡಿ ಕೊಡುತ್ತೇವೆಂದು ವಾಗ್ದಾನಗಳ ಸುರಿಮಳೆಯನ್ನೇ ಮಾಡಿದ್ದರು, ಆದರೆ ಅವರು ಚುನಾವಣೆಯಲ್ಲಿ ಸೋತ ನಂತರ ಆ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ತಯಾರಾಗಿಲ್ಲ ಎಂದು ಶ್ರೀ ವೀರಣ್ಣಗೌಡರು ಹೇಳಿದರು ಎಂದು ಮದ್ದೂರ ಕ್ಷೇತ್ರದಿಂದ ಚುನಾಯಿತರಾಗಿ ಬಂದಿರತಕ್ಕ ಶ್ರೀ ಎಸ್. ಎಂ. ಕೃಷ್ಣ ಅವರು ಹೇಳಿದರು. ಶ್ರೀಮಾನ್ ವೀರಣ್ಣಗೌಡರು ಈಗ ಈ ಸಭೆಯಲ್ಲಿ ಇಲ್ಲ. ಅಂಥಹವರ ವಿಚಾರದಲ್ಲಿ ಅಷ್ಟು ಹಗುರವಾಗಿ ಟೀಕೆಗಳನ್ನು ಮಾಡುವುದು ಸರಿಯೆ ? ಎನ್ನುವುದನ್ನು ಸದಸ್ಯರು ಯೋಚನೆ ಮಾಡಬೇಕಾಗಿತ್ತು. ಶ್ರೀಮಾನ್ ವೀರಣ್ಣಗೌಡರು ಚುನಾವಣೆಯಲ್ಲಿ ಸೋತಿರಬಹುದು. ಆದರೂ ಅವರು ನಮ್ಮ ದೇಶದ ನಾಯಕರುಗಳಲ್ಲಿ ಒಬ್ಬರಾಗಿದ್ದಾರೆ.

Sri S. SHIVAPPA.—Is he delivering a lecture on behalf of Sri Veeranna Gowdh ?

ಶ್ರೀ ಬಿ. ಜೆ. ಲಿಂಗೇಗೌಡ.—ಮಾನ್ಯ ಸದಸ್ಯರಾದ ಶ್ರೀ ಎಸ್. ಎಂ. ಕೃಷ್ಣಾ ಅವರು ಈ ಸಭೆಯಲ್ಲಿ ಮಾತನಾಡುವಾಗ ಶ್ರೀಮಾನ್ ವೀರಣ್ಣಗೌಡರ ಹೆಸರನ್ನು ಉಪಯೋಗಿಸಿರುವುದಕ್ಕೆ ನಾನು ಉತ್ತರವನ್ನು ಹೇಳುತ್ತಿದ್ದೇನೆ.

Sri S. SHIVAPPA.— He is not representing anybody here.

ಶ್ರೀ ಬಿ. ಜೆ. ಲಿಂಗೇಗೌಡ.—ಶ್ರೀಮಾನ್ ವೀರಣ್ಣಗೌಡರು ಯಾವಾಗಲೂ ವಾಗ್ದಾನ ಮಾಡಿದ ಪ್ರಕಾರ ನಡೆದು ಕೊಳ್ಳತ್ತಾರೆ. ಆದರೆ ಮಾನ್ಯ ಸದಸ್ಯರಾದ ಶ್ರೀಕೃಷ್ಣಾ ಅವರು ಅವರ ಚುನಾವಣಾ ಪ್ರಚಾರ ಮಾಡುವಾಗ ಕೊಟ್ಟ ವಾಗ್ದಾನದಂತೆ ನಡೆದು ಕೊಂಡಿದ್ದಾರೆಯೇ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಅವರ ಕ್ಷೇತ್ರದಲ್ಲಿ ಅವರು ಚುನಾವಣೆಯಲ್ಲಿ ಗೆಲ್ಲಬೇಕಾದರೆ ಅವರು ಜನಗಳ ಮುಂದೆ ಏನು ಹೇಳಿದರೆಂದರೆ ನಾನು ಪಿ. ಎಸ್. ಪಿ. ಪಾರ್ಟಿಗೆ ಸೇರುವುದಿಲ್ಲ ಸ್ವತಂತ್ರವಾಗಿ ಸ್ಪರ್ಧಿಸಿದ್ದೇನೆ ಎಂದು.

Sri S. SHIVAPPA.—It is too much. He should confine himeself to the debate.

Mr. SPEAKER.—The Hon'ble Member may kindly take note of the suggestion. There are barely six or seven minutes. Kindly take note of the suggestion and try to conclude.

ಶ್ರೀ ಬಿ. ಜೆ. ಲಿಂಗೇಗೌಡ.—ಶ್ರೀ ಕೃಷ್ಣಾ ಅವರು ಈ ಸಭೆಗೆ ಚುನಾಯಿತರಾಗಿ ಬಂದ ಕೂಡಲೇ ಪಿ. ಎಸ್. ಪಿ. ಪಾರ್ಟಿಯ ಸೆಕ್ರೆಟರಿಯಾಗಿರುವುದರಿಂದ ಅವರು ತಮ್ಮ ಕ್ಷೇತ್ರದ ಜನಗಳಿಗೆ ಏನು ವಾಗ್ದಾನ ಕೊಟ್ಟಿದ್ದರೋ ಆ ವಾಗ್ದಾನಕ್ಕೆ ವ್ಯತಿರಿಕ್ತವಾಗಿ ನಡೆದು ಅವರು ನಡೆದು ಕೊಂಡಿದ್ದಾರೆ.

Sri S. SHIVAPPA.—It is not his business to speak about all those things of our party.

Mr. SPEAKER.—Hon'ble Members must have patience. If half a dozen members interfere, what can be done? I have given a hint to him already.

ಶ್ರೀ ಬಿ.ಜೆ. ಲಿಂಗೇಗೌಡ.—ಚುನಾವಣೆಯ ವಿಚಾರದಲ್ಲಿ ಇಷ್ಟು ವಿಷಯವನ್ನು ಹೇಳಿ ಮುಂದೆ ರಾಜ್ಯಪಾಲರ ದಯಪಾಲಿಸಿರುವ ಭಾಷಣದ ವಿಚಾರವಾಗಿ ಒಂದೆರಡು ವಿಷಯಗಳನ್ನು ಹೇಳುವುದಕ್ಕೆ ನಾನು ಆಶಿಸುತ್ತೇನೆ. ಬೆಂಗಳೂರು ಸಿಟಿಗೆ ನೀರು ಸರಬರಾಜಿನ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಕೆಲವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಹಳ್ಳಿಮಾಳಾ ಯೋಜನೆಯನ್ನು ಕಾರ್ಯಗತ ಮಾಡಿ ಬೆಂಗಳೂರು ಸಿಟಿಗೆ ನೀರನ್ನು ಒದಗಿಸುವುದಾದರೆ ರಾಮನಗರ ತಾಲ್ಲೂಕು ಮತ್ತು ಚನ್ನಪಟ್ಣ ತಾಲ್ಲೂಕಿನ ಜನತೆಗೆ ತುಂಬಾ ತೊಂದರೆ ಯಾಗುತ್ತದೆ. ಹಳ್ಳಿಮಾಳಾ ಯೋಜನೆಯಿಂದ ರಾಮನಗರ ತಾಲ್ಲೂಕಿನ ಅನೇಕ ಹಳ್ಳಿಗಳು ಮುಳುಗಡೆ ಯಾಗುತ್ತವೆ. ಮತ್ತು ಚನ್ನಪಟ್ಣ ತಾಲ್ಲೂಕಿನ ಕಣ್ವಾ ಪ್ರಾಜೆಕ್ಟಿಗೆ ನೀರು ಸರಬರಾಜು ಮಾಡಲು ಸರ್ಕಾರ ಯೋಚನೆ ಮಾಡಿರುವ ಮಾರೀ ಹಳ್ಳ ಯೋಜನೆ

(ಶ್ರೀ ಬಿ. ಜೆ. ಲಿಂಗೇಗೌಡ)

ಯನ್ನು ಕೈಬಿಡಬೇಕಾಗುತ್ತೆ. ಆ ದೃಷ್ಟಿಯಿಂದ ಬೆಂಗಳೂರಿಗೆ ನೀರು ಸರಬರಾಜು ಮಾಡುವುದನ್ನು ಕಾವೇರಿ ನದಿಯಿಂದಲಾಗಲೀ ಅಥವಾ ಶಿಂಶಾ ನದಿ ಯಿಂದಲಾಗಲೀ ನೀರು ಸರಬರಾಜು ಮಾಡುವುದು ಬಹಳ ಒಳ್ಳೆಯದು.

ಶ್ರೀ ಎಸ್. ಆರ್. ಕಂಠಿ (ಮುಖ್ಯಮಂತ್ರಿಗಳು).—ಹಳ್ಳಿಮಾಲಾ ಯೋಜನೆ, ಶಿಂಷಾ ಯೋಜನೆ, ಮತ್ತು ಕಾವೇರಿ ಈ ಮೂರು ಯೋಜನೆಗಳೂ ಸರ್ಕಾರದ ಗಮನದಲ್ಲಿವೆ. ಈ ಮೂರು ಯೋಜನೆಗಳಲ್ಲಿ ಹಳ್ಳಿ ಮಾಲಾ ಯೋಜನೆಗೆ 20 ಕೋಟಿ 22 ಲಕ್ಷ ರೂಪಾಯಿ ಗಳು ಖರ್ಚಾಗುತ್ತವೆ. ಇದು ಪ್ರಿಲಿಮಿನರಿ ಇನ್‌ವೆಸ್ಟಿ ಗೇಷನ್‌ನಿಂದ ಕಂಡು ಬಂದಿದೆ. ಶಿಂಷಾ ಯೋಜನೆಗೆ ಸುಮಾರು 20 ಲಕ್ಷ 22 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಕಾವೇರಿ ನದಿಯ ಯೋಜನೆಗೆ 22 ಲಕ್ಷ ರೂಪಾಯಿ ಜಾಸ್ತಿ ಖರ್ಚಾಗುತ್ತದೆ.

6. P.M.

ಸರ್ಕಾರಕ್ಕೆ 22 ಕೋಟಿ ರೂಪಾಯಿಗಳಿಗಿಂತ ಸ್ವಲ್ಪ ಜಾಸ್ತಿ ಹಣ ಖರ್ಚಾಗುತ್ತದೆ. ಅಂದರೆ ಸುಮಾರು 2 ಕೋಟಿ ರೂಪಾಯಿ ಜಾಸ್ತಿಯಾದಂತಾಗುತ್ತದೆ. ಆದರೆ, ಹಳ್ಳಿಮಾಲಾದಿಂದ ಒಂದು ದಿವಸಕ್ಕೆ 55 ಮಿಲಿಯನ್ ಗ್ಯಾಲನ್ ನೀರು ಸರಬರಾಜಾಗುವಲ್ಲಿ—ಶಿಂಷಾದಿಂದ ಕೂಡ 55 ಮಿಲಿಯನ್ ಗಾಲನ್‌ಗಳೇ, ಸಿಕ್ಕುತ್ತವೆ—ಕಾವೇರಿಯಿಂದ 60 ಮಿಲಿಯನ್ ಗಾಲನ್ ಗಳು ಸಿಕ್ಕುತ್ತವೆ. ಇದನ್ನೆಲ್ಲಾ ಪ್ರತ್ಯೇಕವಾಗಿ invstigation ಮಾಡಬೇಕೆಂದು ಹೇಳಿ 4 ಲಕ್ಷ ರೂಪಾ ಯಿಗಳನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಆ ಪರಿಶೀಲನೆಯ ಫಲಿತಾಂಶಗಳನ್ನು ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಕಾವೇರಿಯ ಸ್ಕೀಮಿನಲ್ಲಿರುವ ಇನ್ನೊಂದು ಹೆಚ್ಚಿನ ಅನುಕೂಲತೆ ಯೆಂದರೆ, ಅದರಿಂದಾಗಿ ಯಾವ ಭೂಮಿಯೂ ಮುಳುಗಡೆ ಯಾಗುವುದಿಲ್ಲ. ಏನೇ ಇರಲಿ, investigation ಮುಗಿದ ಮೇಲೆ ಏನೊಂದನ್ನೂ ಇತ್ಯರ್ಥ ಮಾಡಿ ಹೇಳ ಬಹುದು. ಒಟ್ಟಿನಲ್ಲಿ ಇಷ್ಟು ಹೇಳ ಬಯಸುತ್ತೇನೆ. ಬೆಂಗಳೂರು ನಗರದ ಜನತೆಯ ಹಿತ ದೃಷ್ಟಿಯನ್ನು ನಾನು ಯಾವತ್ತೂ ಗಮನದಲ್ಲಿಟ್ಟಿರುತ್ತೇನೆ.

An Hon'ble MEMBER.—How long will this investigation continue ?

ಶ್ರೀ ಎಸ್. ಆರ್ ಕಂಠಿ.—ಎಷ್ಟು ದಿವಸಗಳಲ್ಲಿ ಆಗುತ್ತೆ ಎಂದು ಹೇಳುವುದಕ್ಕಾಗುವುದಿಲ್ಲ. ತೀವ್ರ ವಾಗಿಯೇ ನಡೆಯುತ್ತದೆ. ಈಗಾಗಲೇ ಈ ಬಗ್ಗೆ ಸರ್ಕಾರಿ ಹುಕುಂ ಕೂಡ ಸಾದರಾಗಿದೆ.

Mr. SPKEER.—The House will now adjourn and meet again at 8-30 A.M. tomorrow.

The House adjourned at Five Minutes past Six of the Clock to meet again at Thirty Minutes past Eight of the Clock on Tuesday, the 3rd April 1962.